

ಗೌರಿ ಲಂಕೇಶ್

ಅಕ್ಟೋಬರ್ 1, 2008 ರೂ. 12/-




ಷಂಡ ಮುಖ್ಯಮಂತ್ರಿ



ಇಲ್ಲಿದೆ ದಾಖಲೆ


ಗೋಕರ್ಣ

ಮಠಕ್ಕಲ್ಲ ಸ್ವಂತಕ್ಕೆ



SLN ಟ್ರಸ್ಟ್‌ನಲ್ಲಿ ಶನಿ ರಾಮಮೂರ್ತಿ

ಚಿತ್ರದುರ್ಗ: ಕರವೇಗೆ ವಸೂಲಿ ವೀರ ಶಶಿಧರನೇ ನಾಯಕ



ಶ್ರೀಧರ ಭಟ್ಟಾಚಾರಿ ಎಂಬ ಢೋಂಗಿ ಜ್ಯೋತಿಷಿ



ಮಹೇಂದ್ರಕುಮಾರ್ ಎಂಬ ಕ್ರಿಮಿ

ಕಾರ್ಟೂನ್ ಕಾರ್ನರ್




ಖಂಡಿತವಾದಿ ನಾಗೇಶನಿಗೆ ಕೋಳ ತೊಡಿಸಿದ ಈಶ್ವರಪ್ಪ!


ನಾಗೇಶ್

ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಸಾಮಾನ್ಯ ಜನರಿಗೆ ಸಿಕ್ಕುತ್ತಿರುವುದು ಗೋಲಿಬಾರ್, ಲಾಟಿಚಾರ್ಜ್ ಮತ್ತು ಪುಕ್ಕಟೆ ಭರವಸೆಗಳು ಮಾತ್ರವೇ ಎಂಬುದು ನಿಜವಾದರೂ ರಾಜ್ಯಾದ್ಯಂತ ಸಂಘಪರಿವಾರದ ಜಂತುಗಳಿಗೆ ಮಾತ್ರ ರಾಜ್ಯಾಧಿಕಾರವೇ ಸಿಕ್ಕಂತಾಗಿರುವುದಂತೂ ನಿಜ.

ಶೃಂಗೇರಿಯಲ್ಲಿ ಕಳೆದ ಹತ್ತು ಹನ್ನೆರಡು ವರ್ಷಗಳಿಂದ ಟಿ.ನಾಗೇಶ್ ''ನಾಗೇಶ್ ಪತ್ರಿಕೆ'' ಎಂಬ ಜನಪ್ರಿಯ ಪತ್ರಿಕೆಯೊಂದನ್ನು ತರುತ್ತಿದ್ದಾರೆ. ಇವರೂ ಹತ್ತು ವರ್ಷದ ಕೆಳಗೆ ಚೆಡ್ಡಿ ಹಾಕಿಕೊಂಡು ನಮಸ್ತೆ ಸದಾ ವತ್ಸಲೆ ಹಾಡಿದವರೇ. ಆದರೆ ಭಾರತ್ ಮಾತೆಯ ಹೆಸರಲ್ಲಿ ಈ ನಕಲಿ ದೇಶಭಕ್ತರು ನಡೆಸುವ ಹಳವಂಡಗಳನ್ನು ಕಂಡು ಬೇಸತ್ತು ಚೆಡ್ಡಿ ಕಳಚಿಟ್ಟು ಮಾನಸ್ಥರಾಗಿ ''ನಾಗೇಶ್ ಪತ್ರಿಕೆ'' ಪ್ರಾರಂಭಿಸಿದ್ದರು. ಅಷ್ಟು ಮಾತ್ರವಲ್ಲ ನಿಜಾಯತಿಯಿಂದ ಪತ್ರಿಕೋದ್ಯಮ ನಡೆಸುತ್ತಾ ಅದರಲ್ಲೇ ಜೀವನ ಸಾಗಿಸುತ್ತಿದ್ದರು. ಆದರೆ ಇವರ ಅತ್ಯಂತ ದೊಡ್ಡ ದೌರ್ಬಲ್ಯವೆಂದರೆ ಇವರ ಪ್ರಾಮಾಣಿಕತೆ. ಮಹಾನ್ ಖಂಡಿತವಾದಿಯಾದ ನಾಗೇಶ ದುಷ್ಟ ಸಂಘ ಪರಿವಾರಿಗಳು ಮತ್ತು ಭ್ರಷ್ಟ ಅಧಿಕಾರಿಗಳ ವಿರುದ್ಧ ಯಾವುದೇ ಮುಲಾಜಿಲ್ಲದೆ ತಮ್ಮ ಪೆನ್ನು ಝಳಪಿಸುತ್ತಿದ್ದರು. ಸಂಘಿಗಳೇ ಈಗ ಪರೋಕ್ಷವಾಗಿ ರಾಜ್ಯಭಾರವನ್ನು ನಡೆಸುತ್ತಿರುವುದರಿಂದ ತಮ್ಮ ಮಗ್ಗಲಮುಳ್ಳಾಗಿದ್ದ ಈ ಪತ್ರಕರ್ತನನ್ನು ನೀಗಿಸಿಕೊಳ್ಳಲು ಕಳೆದವಾರ ಒಂದು ದೊಡ್ಡ ಷಡ್ಯಂತ್ರವನ್ನೇ ನೇಯ್ದಿದ್ದಾರೆ. ಮೊನ್ನೆ ಬಿಜೆಪಿಯ ನೂರು ದಿನಗಳ ಆಚರಣೆಗೆ ಜಿಲ್ಲಾ ಉಸ್ತುವಾರಿ ಮಂತ್ರಿ ಈಶ್ವರಪ್ಪ ಶೃಂಗೇರಿಗೆ ಬಂದಿದ್ದಾಗ ಕಿವಿ ಕೊರೆದಿದ್ದಾರೆ. ಕೂಡಲೇ ಈ ತಗಡು ಕಿವಿಯ ಮಂತ್ರಿ ನಾಗೇಶ್‌ನನ್ನು ಒಳಗೆ ತಳ್ಳಲು ತಹಶೀಲ್ದಾರ ಯೋಗೇಶ್ವರನಿಗೆ ಹುಕುಂ ನೀಡಿದ್ದಾರೆ. ಈ ಯೋಗೇಶ್ವರ ಮಹಾನ್ ಭ್ರಷ್ಟ. ಈತನ ವಿರುದ್ಧವೂ ನಾಗೇಶ್ ತಮ್ಮ ಪತ್ರಿಕೆಯಲ್ಲಿ ಜಾಡಿಸಿದ್ದರು. ಹೀಗಾಗಿ ಈ ಭ್ರಷ್ಟ ಬಯಸಿದ್ದನ್ನೇ ದುಷ್ಟರು ದಯಪಾಲಿಸಿದ್ದರು.


ಈಶ್ವರಪ್ಪ


ಈ ಹಿಂದೆ ಯಾವಾಗಲೋ ತನ್ನ ಮಗಳಿಗೆ ಉನ್ನತ ಶಿಕ್ಷಣ ಕೊಡಿಸಲು ತನ್ನ ವಾರ್ಷಿಕ ಆದಾಯ 11,000 ಎಂದು ಪ್ರಮಾಣ ಪತ್ರವನ್ನು ಕೊಡಲು ನಾಗೇಶ್ ನೀಡಿದ್ದ ಅಹವಾಲನ್ನೇ ನೆಪವಾಗಿ ಬಳಸಿಕೊಂಡರು. ಈತನ ತಂಗಿಯ ಗಂಡನ ಮೂಲಕ ದೂರು ನೀಡಿಸಿದರು. ದೂರು ನೀಡಿದ ನಾಗೇಶನ ಈ ಪಿಸುಣಾರಿ ಭಾವ ಸುಳ್ಳು ವಾದಗಳ ಮೂಲಕ ನಾಗೇಶರ ಜಮೀನನ್ನೆ ಲಪಟಾಯಿಸಲು ಪ್ರಯತ್ನಿಸಿದ್ದು ಎರಡು ಕುಟುಂಬಗಳ ನಡುವೆ ವೈಮನಸ್ಯ ಇತ್ತು. ಬೆಂದ ಮನೆಯಲ್ಲಿ ಗಳ ಹಿರಿಯುವ ಚೆಡ್ಡಿಗಳು ಈ ವೈಮನಸ್ಯಕ್ಕೆ ನೀರೆರದು ದ್ವೇಷ ಪೋಷಿಸಿ ತಮ್ಮ ಅನುಕೂಲಕ್ಕೆ ಬಳಸಿಕೊಂಡರು.

ಆದರೆ ವಾಸ್ತವವಾಗಿ ನಾಗೇಶರು ಆದಾಯ ಪ್ರಮಾಣಪತ್ರ ಕೋರಿ ನೀಡಿದ ಅರ್ಜಿಯನ್ನು ವಾಪಸ್ ಪಡೆದಿದ್ದರು. ಮತ್ತು ವಾಪಸ್ ಪಡೆದಿದ್ದಕ್ಕೆ ಕಚೇರಿಯಿಂದ ಪ್ರಮಾಣಪತ್ರವನ್ನು ಪಡೆದಿದ್ದರು. ಆದರೆ ಇವೆಲ್ಲವನ್ನು ಉದ್ದೇಶಪೂರ್ವಕವಾಗಿ ಕಡೆಗಣಿಸಿದ ತಹಶೀಲ್ದಾರ ಯೋಗೇಶ್ವರ, ನಾಗೇಶ್‌ರ ಮೇಲೆ 420 ಮತ್ತು 181 ಕಲಮಿನಡಿ ಕೇಸು ದಾಖಲಿಸಿಕೊಂಡಿದ್ದಾರೆ. ಅಷ್ಟು ಮಾತ್ರವಲ್ಲ, ಕಳೆದ ಶನಿವಾರ ನ್ಯಾಯಾಧೀಶರು ಹಾಜರಿರುವುದಿಲ್ಲವೆಂದು ಮುಂದಾಗಿಯೇ ತಿಳಿದುಕೊಂಡು ನಾಗೇಶರನ್ನು ಶನಿವಾರ ಬಂಧಿಸಿ ಸೋಮವಾರದ ತನಕ ಜಾಮೀನು ಸಿಗದೆ ಜೈಲಿನಲ್ಲಿ ಕೊಳೆಯುವಂತೆ ನೋಡಿಕೊಂಡಿದ್ದಾರೆ.

ನಾಗೇಶರಿಗೆ ಸೋಮವಾರ ಜಾಮೀನು ಸಿಗಬಹುದು. ಆದರೆ ಇಂಥ ದುಷ್ಟ ಮತ್ತು ಭ್ರಷ್ಟರ ಕಪಿಮುಷ್ಠಿಯಲ್ಲಿ ಸಿಕ್ಕಿಕೊಂಡಿರುವ ಕರ್ನಾಟಕಕ್ಕೆ ಜಾಮೀನು ಸಿಕ್ಕೀತೆ? ಬಿಜೆಪಿ ಏಕೆ ಅಧಿಕಾರಕ್ಕೆ ಬರಕೂಡದು ಅನ್ನುವುದಕ್ಕೆ ನೂರು ದಿನಗಳಲ್ಲಿ ಇಂಥ ಸಾವಿರ ಉದಾಹರಣೆಗಳು ಸಿಗುತ್ತಿವೆ. ■

ಜೀನಿಐ ಕತೆ

ನಾಸ್ತಿಕತೆ



ತಮ್ಮ ಹುಟ್ಟುಹಬ್ಬಕ್ಕೆ ಹೊಸ ಅಂಗಿ ಬೇಕೆಂದು ಗುರುಗಳು ಬಯಸಿದ್ದು ಶಿಷ್ಯರಿಗೆ ತುಂಬಾ ಸಂತೋಷ ನೀಡಿತು. ಕೂಡಲೇ ಗುರುಗಳ ಅಳತೆಯನ್ನು ತೆಗೆದುಕೊಂಡು ಹೋಗಿ ಅಂಗಿ ತಯಾರಿಸಲು ಟೈಲರ್ ಒಬ್ಬನನ್ನು ಕರೆಸಿದರು. ಮಠಕ್ಕೆ ಬಂದ ಟೈಲರ್ ದೇವರ ದಯೆಯಿಂದ ಒಂದು ವಾರದಲ್ಲಿ ಅಂಗಿ ತಯಾರಿಸಿ ಕೊಡುವುದಾಗಿ ಹೇಳಿ ಹೊರಟುಹೋದ.

ಒಂದು ವಾರ ಉರುಳಿತು. ಗುರುಗಳು ತಮ್ಮ ಹೊಸ ಅಂಗಿಯ ನಿರೀಕ್ಷೆಯಲ್ಲಿದ್ದರು. ಅದನ್ನು ತರಲು ಶಿಷ್ಯನೊಬ್ಬ ಹೋದಾಗ "ಸ್ವಲ್ಪ ತಡವಾಗಿದೆ. ಆದರೆ ದೇವರ ದಯೆಯಿಂದ ಅದನ್ನು ನಾಳೆ ಸಿದ್ಧಪಡಿಸುತ್ತೇನೆ" ಎಂದ ಟೈಲರ್.

ಆದರೆ ಮಾರನೆ ದಿನವೂ "ಕ್ಷಮಿಸಿ ಅಂಗಿ ಇನ್ನೂ ಸಿದ್ಧಗೊಂಡಿಲ್ಲ, ನಾಳೆ ಬನ್ನಿ. ದೇವರ ದಯೆಯಿದ್ದರೆ ಅದು ಖಂಡಿತಾ ನಾಳೆ ಸಿದ್ಧವಾಗಿರುತ್ತದೆ" ಎಂದು ಮತ್ತೆ ಹೇಳಿದ ಟೈಲರ್.

ಆದರೆ ಅದರ ಮಾರನೆ ದಿನವೂ ಅಂತಹದ್ದೇ ಉತ್ತರವನ್ನು ಟೈಲರ್ ನೀಡಿದ. ಇದನ್ನು ಕೇಳಿ "ದೇವರನ್ನು ಇದರಿಂದ ಹೊರಗಿಟ್ಟರೆ ಅಂಗಿಯನ್ನು ತಯಾರಿಸಲು ಎಷ್ಟು ದಿನ ಬೇಕು ಅಂತ ಅವನನ್ನು ಕೇಳಿ" ಎಂದರು ಗುರುಗಳು.

ಅಮೃತಮಹಲ್: ಜನ ದನಿಗೆ ಸಿಕ್ಕ ಜಯ

ಅಮೃತಮಹಲ್ ತಳಿ ಅಭಿವೃದ್ಧಿ ಕೇಂದ್ರದ ವಿಷಯದಲ್ಲಿ ಜನರ ದನಿಗೆ ಜಯ ಸಿಕ್ಕಿದೆ. ಶಿಥಿಲಗೊಂಡಿರುವ ಈ ಕೇಂದ್ರವನ್ನು ಉಳಿಸಿಕೊಳ್ಳಲು ಹೋರಾಡಿದ ಯುವ ಜನಾಂಗ ಒಂದು ಅಭಿವೃದ್ಧಿ ನಕಾಶೆಯನ್ನು ತಯಾರಿಸಿ ಸರ್ಕಾರಕ್ಕೆ ಒಪ್ಪಿಸಲು ತಯಾರಾಗಿದೆ.

ಅಮೃತಮಹಲ್ ಪಶು ಸಂವರ್ಧನಾ ಕೇಂದ್ರದ ವಿಷಯದಲ್ಲಿ ನಮ್ಮನ್ನಾಳುತ್ತಿರುವ ಬೃಹಸ್ಪತಿಗಳು ಎಂತಹ ಮೂರ್ಖರೆಂಬುದು ಮತ್ತೊಮ್ಮೆ ಸಾಬೀತಾಗಿ ಹೋಗಿದೆ. ಮುಖ್ಯವಾಗಿ ರಾಮಚಂದ್ರಾಪುರಮಠಕ್ಕೂ, ಈ ಅಮೃತಮಹಲ್ ಕೇಂದ್ರಕ್ಕೂ ಯಾವ ಸಂಬಂಧವೂ ಇಲ್ಲ. ಕಾಡಿನ ಜಮೀನನ್ನು ಒತ್ತುವರಿ ಮಾಡಿಕೊಂಡು, ಬಡಬಗ್ಗರ ಅಡಿಕೆತೋಟ ತೆಗೆದುಕೊಂಡು, ಅವನ್ನೆಲ್ಲಾ ಕಡಿಸಿ ಭೋಜನ ಶಾಲೆ ಏರ್ಪಡಿಸುತ್ತ ಕಾಡಿಗೆ ಕಂಟಕನಾಗಿ ಮತ್ತು ಸಮಾಜಕ್ಕೆ ಸಮಸ್ಯೆಯಾಗಿ ಬೆಳೆಯುತ್ತಿರುವ ರಾಘವೇಶ್ವರ, ಎಡೂರಪ್ಪನಿಂದ ಅನಾಯಾಸವಾಗಿ ದಕ್ಕಲಿದ್ದ ಸಾವಿರಾರು ಎಕರೆ ಗೋಮಾಳವನ್ನು ಉದಾರವಾಗಿ ವಾಪಸು ಕೊಟ್ಟವನಂತೆ ಮಾತನಾಡುತ್ತಿರುವುದು ಈ ನಾಡಿನ ದುರಂತ.

ಅದಕ್ಕಿಂತಲೂ ಮುಖ್ಯವಾಗಿ ಮುಖ್ಯಮಂತ್ರಿ ಎಡೂರಪ್ಪ ಹೇಳಿದ ಸುಳ್ಳು ನಮ್ಮನ್ನು ದಂಗುಬಡಿಸಿದೆ. "ಹಾಳಾಗಿರುವ ಅಮೃತಮಹಲ್ ಕೇಂದ್ರವನ್ನು ಯಾರೂ ಕೇಳಿರಲಿಲ್ಲ. ರಾಘವೇಶ್ವರ ಕೇಳಿದ್ದರು ಕೊಟ್ಟೆ" ಎಂದು ಹೇಳಿಕೆ ನೀಡಿದ ಎಡೂರಪ್ಪ ಮರುದಿನವೇ "ಪಾಪ ಅವರೇನು ಕೇಳಿರಲಿಲ್ಲ, ನಾವೇ ಕೊಟ್ಟಿದ್ದೆವು" ಎಂದುಬಿಟ್ಟರು. ಈ ನಡುವೆ ಎಡೂರಪ್ಪನ ಚೆಡ್ಡಿಯಲ್ಲಿ ಚೋಣಚಿಯಾಗಿರುವ ಈಶ್ವರಪ್ಪ ತರೀಕೆರೆಯಲ್ಲಿ ಪತ್ರಕರ್ತರ ಪ್ರಶ್ನೆಗೆ "ನಾವು ಅಮೃತಮಹಲ್ ಕೇಂದ್ರವನ್ನು ರಾಮಚಂದ್ರಾಪುರ ಮಠಕ್ಕೆ ಕೊಟ್ಟೇ ಕೊಡ್ತಿವಿ" ಎಂದರು. ಅದಕ್ಕೆ ಪತ್ರಕರ್ತರು "ಜನರು ಪ್ರತಿಭಟಿಸಿದರೆ ಏನು ಮಾಡುತ್ತೀರಿ?" ಎಂದು ಕೇಳಿದರೆ "ಇದು ಕುಮಾರಸ್ವಾಮಿ ಕಾಲದ ತೀರ್ಮಾನ. ಪತ್ರಿಭಟಿಸೋರಿಗೆಲ್ಲಾ ನಾವು ಕೇರ್ ಮಾಡಲ್ಲ, ಅಷ್ಟಕ್ಕೂ ಇಂತವರ ಪ್ರತಿಭಟನೆಯಿಂದ ನಿಜವಾದ ಪ್ರತಿಭಟನಾಕಾರರಿಗೆ ಅವಮಾನ" ಎಂದೆಲ್ಲಾ ಹೇಳಿದ್ದಲ್ಲದೆ, "ಹಾಳುಬಿದ್ದಿರುವ ಭೂಮಿಯನ್ನು ಮಠಕ್ಕೆ ಕೊಟ್ಟರೆ ತಪ್ಪೆ?" ಎಂದು ಪ್ರತಿಸವಾಲು ಹಾಕಿದರು.




ಈ ನಾಡಿನ ತುಂಬಾ ಹರಡಿಕೊಂಡಿರುವ ಸರ್ಕಾರಿ ಜಮೀನು ಸುಮ್ಮನೆ ಹಾಳುಬಿದ್ದಿದೆ ಎಂದು ಈ ಮೂರ್ಖ ಮಂತ್ರಿಗೆ ಅದಾರು ಹೇಳಿದರೊ ಏನೊ? ಅಂತೂ ಈಶ್ವರಪ್ಪ "ಕೊಟ್ಟೇ ಕೊಡ್ತಿವಿ" ಎಂಬ ಮಾತಿನಿಂದ ಚೆಡ್ಡಿಗಳು ಹುರಿಯಾದರು. ಚಿಕ್ಕಮಗಳೂರಿನ ಮೆಂಟಲ್ ಚೆಡ್ಡಿಯೊಂದು ಜಿಲ್ಲಾ ಪಂಚಾಯ್ತಿ ಸದಸ್ಯರ ಬಾಯಿಮುಚ್ಚಿಸಿ ಇನ್ನೇನು ಅಮೃತಮಹಲ್ ರಾಘವೇಶ್ವರನ ವಶವಾಯ್ತು ಎಂಬಂತಾದಿದ್ದ, ಇದಕ್ಕೆ ಪ್ರತಿಯಾಗಿ ಕಡೂರಿನ ಶಾಸಕ ಕೆ.ಎಂ. ಕೃಷ್ಣಮೂರ್ತಿ, ಮೂವರು ಸ್ವಾಮಿಗಳ ನೇತೃತ್ವದಲ್ಲಿ ಅಮೃತಮಹಲ್ ಉಳಿಸಿ ಚಳವಳಿಯನ್ನು ರೂಪಿಸತೊಡಗಿದ್ದರು. ಈ ನಡುವೆ ಚಿಕ್ಕಮಗಳೂರಿನ ಬಿಜೆಪಿ ಮುಖಂಡ ರವೀಶ್ ಕ್ಯಾತನಬೀಡು ಎಂಬುವವರು ಈಟಿವಿಯಲ್ಲಿ ಕಾಣಿಸಿಕೊಂಡು, "ರಾಘವೇಶ್ವರ ದನ ಚೆನ್ನಾಗಿ ಸಾಕುತ್ತಾರೆಂದು ಅವರಿಗೆ ಅಮೃತಮಹಲ್ ಕೊಡುವುದಾದರೆ, ಮರಗಿಡ ನೆಡುವ ಬಾಲಗಂಗಾಧರನಾಥ ಸ್ವಾಮಿಗೆ ಅರಣ್ಯ ಇಲಾಖೆ ಕೊಡಬಹುದಲ್ಲವೆ? ಹಾಗೆಯೇ ಶಿಕ್ಷಣ ಕೊಡುವುದರಲ್ಲಿ ಸಾಧನೆ ಮಾಡಿರುವ ಸಿದ್ಧಗಂಗಾಮಠಕ್ಕೆ ಶಿಕ್ಷಣ ಇಲಾಖೆ ವಹಿಸಿದರೆ ಹೇಗೆ?" ಎಂದು ಹೇಳಿದ್ದು ಚೆಡ್ಡಿಗಳನ್ನು ಕೆರಳಿಸಿತ್ತು,

ಅಂತೂ ಅಮೃತಮಹಲ್ ಕೇಂದ್ರವನ್ನು ರಾಮಚಂದ್ರಾಪುರ ಮಠಕ್ಕೆ ವಹಿಸುವುದರ ವಿರುದ್ಧ ಬಿಜೆಪಿಯಲ್ಲೇ ಪ್ರತಿಭಟನೆಗಳಿದ್ದವು. ಹಾಗೆ ನೋಡಿದರೆ ಎಡೂರಪ್ಪನ ಆಡಳಿತದ ವೈಖರಿ ವಿರೋಧಿಸುವ ಒಂದು ಹಿಂಡೇ ಬಿಜೆಪಿಯಲ್ಲಿದೆ. ಈ ಎಲ್ಲಾ ಕಾರಣಗಳಿಗಾಗಿ ಮತ್ತು ಸಾಣೆಹಳ್ಳಿ ಪಂಡಿತಾರಾಧ್ಯರು ಪ್ರತಿಭಟನೆಯ ಮುಂಚೂಣಿಗೆ ಬರಲಿದ್ದಾರೆ ಎಂಬ ಸೂಚನೆ ಸಿಕ್ಕಿದ್ದರಿಂದಲೋ ಏನೋ, ಯಡ್ಡಿಯ ಯಡವಟ್ಟು ತೀರ್ಮಾನದಿಂದ ಸದ್ಯಕ್ಕೆ ಅಮೃತಮಹಲ್ ಬಚಾವಾಗಿದೆ.

ಪಶುಸಂಗೋಪನ ಇಲಾಖೆ ಹುಟ್ಟಿದ್ದೇ ಈ ಅಮೃತಮಹಲ್ ಕೇಂದ್ರದ ದೆಸೆಯಿಂದ. ಯಾರೇ ಪಶುಸಂಗೋಪನಾ ಸಚಿವನಾಗಿ ಪ್ರಮಾಣವಚನ ಸ್ವೀಕರಿಸಿದ ಕೂಡಲೇ ಮಾಡಬೇಕಾದ ಮೊದಲ ಕೆಲಸವೆಂದರೆ, ಈ ಅಮೃತಮಹಲ್ ತಳಿಯ ದರ್ಶನ ಪಡೆಯುವುದು. ಆದರೆ ಇಲ್ಲಿಯವರೆಗೂ ಅಂತಹ ತುರ್ತು ಈಗ ಅಧಿಕಾರದಲ್ಲಿರುವ ಪಕ್ಷದ ಯಾವ ಸಚಿವನಿಗೂ ಕಂಡಿಲ್ಲ. ರಾಮಕೃಷ್ಣ ಹೆಗಡೆಯವರ ಕಾಲದಲ್ಲಿ ಈ ಪಶುಸಂವರ್ಧನಾ ಕೇಂದ್ರ ಒಂದು ಉತ್ತುಂಗ ಸ್ಥಿತಿ ತಲುಪಿತ್ತು. ಆಗ ಪಶುಸಂಗೋಪನಾ ಸಚಿವರಾಗಿದ್ದ ಸಿದ್ಧರಾಮಯ್ಯ ಅಮೃತಮಹಲ್ ಕೇಂದ್ರಕ್ಕೆ ಬೇಟಿ ನೀಡಿ, ಅಂದು ನಿರ್ದೇಶಕರಾಗಿದ್ದ ಡಾ. ಕೃಷ್ಣಮೂರ್ತಿಯವರ ಎಲ್ಲಾ ಕೆಲಸಗಳಿಗೆ ಒಪ್ಪಿಗೆ ಮತ್ತು ಪ್ರೋತ್ಸಾಹ ಕೊಟ್ಟ ಫಲವಾಗಿ, ಅವರು ಮಾಡಿದ ಸಾಧನೆ ಅಮೃತಮಹಲ್ ಕೇಂದ್ರದ ಕೊನೆಯ ವೈಭವವಾಗಿ ದಾಖಲಾಗಿದೆ!

ಈಗ ನಿವೃತ್ತರಾಗಿ ಬೆಂಗಳೂರಿನಲ್ಲಿರುವ ಡಾ. ಕೃಷ್ಣಮೂರ್ತಿ ಈಚೆಗೆ 'ಪ್ರಜಾವಾಣಿಗೆ' ಪತ್ರಿಕೆಗೆ ಲೇಖನ ಬರೆದಿದ್ದರಾದರೂ ಅದರಲ್ಲಿ ತಮ್ಮ ಸಾಧನೆ ಬಗ್ಗೆ ಎಲ್ಲೂ ಚಕಾರವೆತ್ತಿಲ್ಲ, ಅಷ್ಟು ಸಂಕೋಚದ ಅಧಿಕಾರಿ ಅವರು. ಅವರ ಸಾಧನೆ ಕೇಳಿದ ಲಂಕೇಶ್‌ರು ಅಮೃತಮಹಲ್ ಕೇಂದ್ರಕ್ಕೆ ಬಂದು ಮೊಲದ ಮಾಂಸದ ಊಟ ಮಾಡಿ, ಎರಡು ತುಂಬಿದ ಟ್ರ್ಯಾಕ್ಟರನ್ನು ಜೋಡೆತ್ತುಗಳು ಎಳೆದ ದೃಶ್ಯ ನೋಡಿ ಅಚ್ಚರಿಗೊಂಡು ಈ ಕೇಂದ್ರದ ಬಗ್ಗೆ ಲೇಖನ ಬರೆದಿದ್ದರು.



ಅಂದು ಈ ಕೇಂದ್ರದಲ್ಲಿ ನೂರಾರು ಜನ ಕೆಲಸಗಾರರಿದ್ದರು. ಎರಡು ಮೂರು ಜನ ಪಶುವೈದ್ಯರಿದ್ದರು. ಅಜ್ಜಂಪುರದ ದಲಿತರಿಗೆಲ್ಲಾ ಅಲ್ಲಿ ಕೆಲಸವಿತ್ತು, ತಮಿಳುನಾಡಿನಿಂದ ಬಂದವರಿಗೆಲ್ಲಾ ಅಲ್ಲಿ ಕೆಲಸ ಕಾದಿರುತ್ತಿತ್ತು, ಅಂದು ಅದೊಂದು ಪ್ರೇಕ್ಷಣೀಯ ಸ್ಥಳವಾಗಿತ್ತು, ಶಾಲಾಕಾಲೇಜಿನಿಂದ ಪ್ರವಾಸ ಬಂದಮಕ್ಕಳು, ಅಲ್ಲಿನ ಹೋರಿಗಳು, ಜೆರ್ಸಿ ಹೋರಿಗಳು ಮತ್ತು ಕರುಗಳು, ಮೊಲಗಳು ಹಾಗು ಮೇವು ಉತ್ತಿಸುವ ಯಂತ್ರಗಳು ಇವನ್ನೆಲ್ಲಾ ನೋಡಿ ಹೋಗುತ್ತಿದ್ದರು. ಇಂತಹ ಕೇಂದ್ರವೊಂದು ಹಾಳಾಗಲು ಸರ್ಕಾರ ಮತ್ತು ಅಧಿಕಾರಿಗಳೇ ಕಾರಣ.

ಇತ್ತೀಚೆಗೆ ಸರ್ಕಾರ ಇಂತಹ ಅಭಿವೃದ್ಧಿ ಕೇಂದ್ರಗಳನ್ನು ಹಾಳುಮಾಡುವಂತಹ ಅಧಿಕಾರಿಗಳಿಗೇ ವಹಿಸಿ, ಕ್ರಮೇಣ ಖಾಸಗಿಯವರಿಗೆ ವಹಿಸಿ ಕೊಡುವ ಪ್ರವೃತ್ತಿಯನ್ನು ಬೆಳೆಸಿಕೊಂಡಿದೆ. ಇದಕ್ಕೆ ಪೂರಕವಾಗಿ ಖಾಸಗಿಯವರು ಸಂಚು ರೂಪಿಸುತ್ತ ಕಾದಿರುತ್ತಾರೆ. ಒಮ್ಮೆ ಖಾಸಗೀಕರಣಗೊಂಡಿದ್ದು ಮತ್ತೆಂದೂ ಸರ್ಕಾರದ ಸುಪರ್ದಿಗೆ ಬಂದ ಉದಾಹರಣೆಯಿಲ್ಲ, ಆದ್ದರಿಂದ ನಾಡಿನ ಜನರ ಬದುಕನ್ನು ನುಂಗಿ ನೊಣೆಯುವ ಈ ಖಾಸಗಿ ತಿಮಿಂಗಿಲಗಳು ಸರ್ಕಾರಿ ಸ್ವತ್ತುಗಳನ್ನು ನುಂಗದಂತೆ ಎಚ್ಚರಿಕೆ ವಹಿಸಬೇಕಾಗಿದೆ.

ಈಗ ಅಮೃತಮಹಲ್ ಕೇಂದ್ರವನ್ನು ರಾಘವೇಶ್ವರನಿಗೆ ವಹಿಸುವ ತೀರ್ಮಾನದಿಂದ ಹಿಂದೆ ಸರಿದಿರುವ ಸರ್ಕಾರ ಬರುವ ದಿನಗಳಲ್ಲಿ ಅಮೃತಮಹಲ್ ಕೇಂದ್ರವನ್ನು ಇನ್ನೂ ಹಾಳುಮಾಡಬಹುದು. ಅನಿವಾರ್ಯವಾಗಿ ಹೇಗಾದರಾಗಲಿ ನೀವೇ ವಹಿಸಿಕೊಳ್ಳಿ ಎಂಬ ತೀರ್ಮಾನ ಜನಗಳಿಂದಲೇ ಸೃಷ್ಟಿಯಾಗುವಂತೆ ಹಾಳು ಮಾಡಬಹುದು. ಹಾಗಾಗದಂತೆ ಸ್ಥಳೀಯ ಮತ್ತು ಚಿಕ್ಕಮಗಳೂರಿನ ಪ್ರಜ್ಞಾವಂತರು ಎಚ್ಚರ ವಹಿಸಬೇಕಿದೆ. ಅಮೃತಮಹಲ್ ಕೇಂದ್ರ ಹಾಳಾಗದಂತೆ ನೋಡಿಕೊಳ್ಳಬೇಕಿದೆ. ಅದು ಚಳವಳಿ ನಡೆಸಿದವರ ಜವಾಬ್ದಾರಿಯೂ ಹೌದು.

■ ಸಾವಂತ್ರಿ



ಕಂಡಹಾಗೆ

■ ಗೌರಿ ಲಂಕೇಶ್

ನಂತರ ಅವರು ಕ್ರಿಶ್ಚಿಯನ್ನರನ್ನು ಹುಡುಕಿಕೊಂಡು ಬಂದರು

ಡಿಜಿಪಿ ಶ್ರೀಕುಮಾರ್ ಅವರಿಗೆ,

ತಾವು ಪ್ರಾಮಾಣಿಕ ಮತ್ತು ದಕ್ಷ ಅಧಿಕಾರಿ ಎಂದು ಕೇಳಿದ್ದೆ. ಅದರಲ್ಲೂ ಛೋಟಾ ಛಾಪಾಕಾಗದ ಹಗರಣದ ರೂವಾರಿ ತೆಲಗಿ ಪ್ರಕರಣದಲ್ಲಿ ತಾವು ಕರ್ತವ್ಯಪ್ರಜ್ಞೆಯನ್ನು ಮೆರೆದು ಆತ ಜೈಲು ಸೇರುವಂತೆ ಮಾಡಿದಿರಿ. ಕೆಲ ಅಧಿಕಾರಿಗಳಂತೆ ನೀವು ಎಂದೂ ಪ್ರಚಾರಕ್ಕಾಗಿ ಹಪಹಪಿಸದೆ, ಯಾವುದೇ ಹಗರಣದಲ್ಲಿ ಭಾಗವಹಿಸದೆ, ಪೊಲೀಸ್ ಅಧಿಕಾರಿಗೆ ಅಗತ್ಯವಾಗಿರುವ ಶಿಸ್ತನ್ನು ಪಾಲಿಸಿಕೊಂಡು ಬಂದಿದ್ದೀರಿ. ಈ ಎಲ್ಲ ಕಾರಣಗಳಿಂದ-ಅದರಲ್ಲೂ ಬಿಜೆಪಿ ತರಹದ ಕಪಟ ಪಕ್ಷ ಅಧಿಕಾರದಲ್ಲಿರುವಾಗ-ತಾವು ಈ ರಾಜ್ಯದ ಪೊಲೀಸ್ ಇಲಾಖೆಯ ಮುಖ್ಯಸ್ಥರಾಗಿದ್ದು ಆಗಿದ್ದು ಒಳ್ಳೆಯದು ಅನ್ನಿಸಿತ್ತು.

ಬೇಸರದ ವಿಷಯ ಯಾವುದೆಂದರೆ ತಾವು ಈಗ ಈ ರಾಜ್ಯದ ಜನರಲ್ಲಿ ನಿರಾಶೆ ಮೂಡಿಸಿರುವುದು; ತಮ್ಮ ಕರ್ತವ್ಯವನ್ನು ಪಾಲಿಸದೆ ಬಹಳಷ್ಟು ಜನ ಆತಂಕದಲ್ಲಿ ಜೀವಿಸುವಂತೆ ಮಾಡಿರುವುದು.

ಕಳೆದ 120 ದಿನಗಳಲ್ಲೇ ಸಂಭವಿಸಿರುವ ಅವಘಡಗಳನ್ನು ಗಮನಿಸಿ. ರೈತರು ರಸಗೊಬ್ಬರ ಕೇಳಿದ್ದಕ್ಕೆ, ಅದು ಸಿಗದಿದ್ದಾಗ ನಿರಾಶೆಗೊಂಡು ಪ್ರತಿಭಟಿಸಿದ್ದಕ್ಕೆ ನಿಮ್ಮ ಪೊಲೀಸ್ ಇಲಾಖೆ ಮಾಡಿದ್ದೇನು? ಅವರ ಮೇಲೆ ಗುಂಡು ಹಾರಿಸಿ ಕೊಂದದ್ದು. ಆಗ ನೀವು ಡಿಜಿಪಿ ಆಗಿರಲಿಲ್ಲ, ನಿಜ. ಆದರೆ ಆ ಪ್ರಕರಣದಲ್ಲಿ ಗುಂಡು ಹಾರಿಸಲು ಪೇದೆಗಳಿಗೆ ಆದೇಶ ನೀಡಿದ್ದ ಪೊಲೀಸ್ ಅಧಿಕಾರಿ ಯಾರು ಎಂಬುದು ಇವತ್ತಿಗೂ ಗೊತ್ತಾಗಿಲ್ಲ. ಇನ್ನು ಆ ಅಧಿಕಾರಿಯ ವಿರುದ್ಧ ಕ್ರಮ ತೆಗೆದುಕೊಳ್ಳುವ ಮಾತು ಇಲ್ಲವೇ ಇಲ್ಲ ಬಿಡಿ. ಇದು ದಕ್ಷತೆಯ ಲಕ್ಷಣವೇ ಶ್ರೀಕುಮಾರ್ ಅವರೇ?

ಇನ್ನು ಆದಿ ಉಡುಪಿ ಪ್ರಕರಣ ಕುರಿತಂತೆ ನ್ಯಾಯಾಲಯ ಮುಂದೆ ತಮ್ಮ ಇಲಾಖೆ ವರ್ತಿಸಿರುವ ರೀತಿಯಂತೂ ಅಸಹ್ಯ ಹುಟ್ಟಿಸುತ್ತದೆ. ಬಡಪಾಯಿ ಹಾಜಬ್ಬ ಮತ್ತು ಹಸನಬ್ಬರನ್ನು ಭಜರಂಗದಳವರು ಅಮಾನವೀಯವಾಗಿ ಥಳಿಸಿ, ಬೆತ್ತಲೆ ಗೊಳಿಸಿ, ಮೆರವಣಿಗೆ ಮಾಡಿಸಿದ್ದು ಇಡೀ ರಾಜ್ಯಕ್ಕೆ ಗೊತ್ತಿದೆ. ಆ ಪ್ರಕರಣ ಕುರಿತ ವಿಚಾರಣೆಯಲ್ಲಿ ಪ್ರಮುಖ ಸಾಕ್ಷವಾಗಿದ್ದ ಛಾಯಾ ಚಿತ್ರದ ಪ್ರತಿಯನ್ನೂ, ಅದರ ನೆಗೆಟಿವ್ ಅನ್ನೂ ತಮ್ಮ ಪೊಲೀಸ್ ಇಲಾಖೆಯ ಕಿರಿಯ ಅಧಿಕಾರಿಗಳು ವಶಪಡಿಸಿಕೊಂಡಿದ್ದರು. ಆದರೆ ಅದು ಕಳೆದುಹೋಗಿದೆ ಎಂದು ನ್ಯಾಯಾಲಯ ಮುಂದೆ ಸುಳ್ಳು ಹೇಳಿ ಇಡೀ ಪ್ರಕರಣ ಬೀಳುವಂತೆ, ಆರೋಪಿಗಳೆಲ್ಲ ಖುಲಾಸೆಗೊಳ್ಳುವಂತೆ ಮಾಡಿದರು. ಹೀಗೇಕಾಯಿತು ಎಂದು ತಾವು ತಮ್ಮ ಇಲಾಖೆಯ ಅಧಿಕಾರಿಗಳನ್ನು ಪ್ರಶ್ನಿಸಿದ್ದಾಗಲಿ, ಅವರ ವಿರುದ್ಧ ಕ್ರಮ ಜರುಗಿಸಿದ್ದಾಗಲಿ ಇವತ್ತಿನವರೆಗೂ ಕಂಡುಬಂದಿಲ್ಲ. ನಿಮ್ಮ ನೇತೃತ್ವದಲ್ಲಿ ರಾಜ್ಯ ಪೊಲೀಸ್ ಇಲಾಖೆಯ ದಕ್ಷತೆ ಎಂದರೆ ಇದೇನಾ ಶ್ರೀಕುಮಾರ್ ಅವರೇ?

ಇನ್ನು ಪದ್ಮಪ್ರಿಯಾ ಪ್ರಕರಣವಂತೂ ನಿಮ್ಮ ಇಡೀ ಇಲಾಖೆ ಬಿಜೆಪಿಗಳ ಕೈಗೊಂಬೆ ಎಂಬಂತೆ ಕುಣಿಯುತ್ತಿರುವುದಕ್ಕೆ ಸಾಕ್ಷಿಯಾಗಿದೆ. ಆ ಪ್ರಕರಣದಲ್ಲಿ ತಮ್ಮ ಪೊಲೀಸರು ವರ್ತಿಸಿರುವ ರೀತಿಯನ್ನೇ ಸ್ವಲ್ಪ ಗಮನಿಸಿ. ತನ್ನ ಗಂಡ ಬಿಜೆಪಿ ಶಾಸಕ ರಘುಪತಿ ಭಟ್ಟನೊಂದಿಗೆ ಬದುಕಲು ಇಚ್ಛಿಸದೇ ದೂರ ಹೋದ ಪದ್ಮಪ್ರಿಯಾ ಎಲ್ಲಿದ್ದಾಳೆ ಎಂದು ಆಕೆಯ ಗಂಡನಿಗೇ ಹೇಳುತ್ತೀರಿ; ನಿಮಗಿಂತ ಮುಂಚೆ ಆತ ಆಕೆ ಇದ್ದಲ್ಲಿಗೆ ತಲುಪುವಂತೆ ಅನುವು ಮಾಡಿಕೊಡುತ್ತೀರಿ; ಮತ್ತೋರ್ವ ಬಿಜೆಪಿ ನಾಯಕ ಸುನೀಲ್‌ಕುಮಾರ್ ಪದ್ಮಪ್ರಿಯಾ ಇದ್ದಲ್ಲಿಗೆ ಹೋಗುವ ಮೂಲಕ ಆಕೆ ಸಾವನ್ನಪ್ಪುವಂತೆ ಮಾಡಿದ್ದರೂ ಆತನನ್ನು ವಿಚಾರಣೆಗೆ ನಿಮ್ಮ ಇಲಾಖೆ ಒಳಪಡಿಸುವುದೇ ಇಲ್ಲ. ಪದ್ಮಪ್ರಿಯಾಳನ್ನು ಭೇಟಿ ಆಗಿ ಅದೆಷ್ಟೋ ದಿನಗಳಾಗಿದ್ದವರಿಂದಲೂ ಹೇಳಿಕೆಗಳನ್ನು ಪಡೆಯುವ ನೀವು ಕೊನೆಯುಸಿರೆಳೆಯುವುದಕ್ಕೆ ಕಾರಣನಾದ ಸುನೀಲ್‌ಕುಮಾರ್‌ನಿಂದ ಮಾತ್ರ ಯಾವ ಹೇಳಿಕೆಯನ್ನೂ ಪಡೆದಿಲ್ಲ ಯಾಕೆ? ಇದು ನಿಮ್ಮ ಕರ್ತವ್ಯನಿಷ್ಠೆಯೇ ಶ್ರೀಕುಮಾರ್?



ಡಿಜಿಪಿ ಶ್ರೀಕುಮಾರ್

ಇದೆಲ್ಲ ಹಳೆ ಕತೆ ಎಂದು ನಿಮಗೆ ಅನ್ನಿಸುತ್ತಿರಬಹುದು. ಹೋಗಲಿ ಬಿಡಿ. ಆದರೆ (ಸೆಪ್ಟೆಂಬರ್ 21, ಭಾನುವಾರ, ಇವತ್ತೂ ರಾಜಧಾನಿ ಬೆಂಗಳೂರಿನಲ್ಲೇ ಎರಡು ಚರ್ಚ್‌ಗಳ ಮೇಲೆ ದಾಳಿಗಳಾಗಿವೆ) ಇವತ್ತು ನಡೆಯುತ್ತಿರುವ ವಿದ್ಯಮಾನಗಳಲ್ಲೂ ತಮ್ಮ ದಕ್ಷತೆ, ಪ್ರಾಮಾಣಿಕತೆ, ಕರ್ತವ್ಯ ನಿಷ್ಠೆ ಕಾಣಿಸುತ್ತಿಲ್ಲವೇಕೆ? ಕಳೆದ ಒಂದು ತಿಂಗಳಿಂದ ರಾಜ್ಯದ ವಿವಿಧ ಕಡೆ ಚರ್ಚ್‌ಗಳ ಮೇಲೆ ನಿರಂತರ ದಾಳಿಗಳು ನಡೆಯುತ್ತಿವೆ. ಇದಕ್ಕೆ ನೀವು ಪ್ರತಿಕ್ರಿಯಿಸಿರುವುದು ಹೇಗೆಂದರೆ ಚರ್ಚ್‌ಗಳಿಗೆ ರಕ್ಷಣೆ ನೀಡಲಾಗುತ್ತದೆ ಎಂದಿದ್ದೀರಿ. (ಆದರೆ ಇವತ್ತಿನ ಪ್ರಕರಣಗಳ ಹಿನ್ನೆಲೆಯಲ್ಲಿ ಅದು ನಿಮ್ಮಿಂದ ಸಾಧ್ಯವಾಗಿಲ್ಲ ಎಂಬುದು ಸ್ಪಷ್ಟವಾಗುತ್ತದೆ). ಆದರೆ ಇವತ್ತಿನವರೆಗೂ ನೀವು ಗಲಭೆಕೋರರನ್ನು ಬಂಧಿಸುತ್ತೇವೆ ಎಂದಿಲ್ಲ. ಇದೆಲ್ಲ ಒಂದು ದೊಡ್ಡ ತಮಾಷೆ ಎಂಬಂತೆ ಎಂಜಾಯ್ ಮಾಡುತ್ತಾ ಕೂತಿದ್ದೀರಾ ಶ್ರೀಕುಮಾರರೇ?

ಇವತ್ತು ಕ್ರಿಶ್ಚಿಯನ್ ಧರ್ಮಕ್ಕೆ ಬಲವಂತದ ಮತಾಂತರ ನಡೆಯುತ್ತಿದೆ ಎಂದು ಮುಖ್ಯಮಂತ್ರಿಯಿಂದ ಹಿಡಿದು ಮಹೇಂದ್ರ ಕುಮಾರನಂಥ ಪುಂಡರು ಬಾಯಿಗೆ ಬಂದಂತೆ ಆರೋಪಿಸುತ್ತಿದ್ದಾರೆ. ಆದರೆ ಇಲ್ಲಿಯ ತನಕ ಬಲಾತ್ಕಾರದ ಮತಾಂತರ ಕುರಿತಂತ ಎಷ್ಟು ದೂರುಗಳು ನಮ್ಮ ರಾಜ್ಯದಲ್ಲಿ ದಾಖಲಾಗಿವೆ ಎಂದಾಗಲಿ, ಅಥವಾ ಅಂತಹ ದೂರುಗಳು ದಾಖಲೇ ಆಗಿಲ್ಲ ಎಂದಾಗಲಿ ನೀವು ಹೇಳಿಲ್ಲ ಯಾಕೆ? ನಿಮ್ಮ ಬಾಯಿ ಮುಚ್ಚಿರುವವರು ಯಾರು? ಅಥವಾ ಇದೂ ಕೂಡ ನಿಮ್ಮ ಕರ್ತವ್ಯ ನಿಷ್ಠೆಗೆ ಮತ್ತೊಂದು ಉದಾಹರಣೆಯೇ?

ಈ 'ಬಲಾತ್ಕಾರದ ಮತಾಂತರ' ಎಂದರೆ ನಿಮ್ಮ ಪ್ರಕಾರ ಏನು? ಅದರಲ್ಲೂ 'ಬಲಾತ್ಕಾರ' ಎಂಬ ಪದವನ್ನು ನೀವು ಹೇಗೆ ವಿಶ್ಲೇಷಿಸುತ್ತೀರಿ? ಕ್ರಿಶ್ಚಿಯನ್ನರು ಶಾಲೆ, ಕಾಲೇಜು, ಆಸ್ಪತ್ರೆಗಳನ್ನು ನಡೆಸಿ ಅಲ್ಲಿ ಶಿಕ್ಷಣ ಮತ್ತು ಆರೋಗ್ಯ ಸೇವೆ ನೀಡುವುದು ಬಲಾತ್ಕಾರವೇ? ಆ ಸೇವೆಗಳನ್ನು ಪಡೆದವರು ಧನ್ಯವಾದಗಳನ್ನು ಹೇಳಿದರೆ "ಏಸುವಿನ ದಯೆ" ಎಂದು ಉತ್ತರಿಸುವುದೂ ಬಲಾತ್ಕಾರವೇ? ಸಂವಿಧಾನದಲ್ಲಿ ನೀಡಲಾಗಿರುವ ಧರ್ಮಪ್ರಚಾರದ ಹಕ್ಕೂ ಬಲಾತ್ಕಾರವೇ?

ಅಂದಹಾಗೆ, 'ಬಲಾತ್ಕಾರದ ಮತಾಂತರ' ಸಂವಿಧಾನದ ಪ್ರಕಾರ ಅಪರಾಧ ನಿಜ. ಆದರೆ ಅದರಂತೆ 'ಬಲಾತ್ಕಾರದ ಮರು ಮತಾಂತರ' ಕೂಡ ಅಪರಾಧವಲ್ಲವೇ?

ಇತ್ತೀಚೆಗೆ ತಮ್ಮ ಇಲಾಖೆಯ ಸಹಕಾರದೊಂದಿಗೆ ಮತ್ತೊಂದು ಪ್ರಕ್ರಿಯೆ ನಡೆಯುತ್ತಿದೆ. ಅದೇನೆಂದರೆ ಪ್ರತಿ ಸಚಿವ ಸಂಪುಟ ಸಭೆಯಲ್ಲಿ ಸಂಘ ಪರಿವಾರದವರ ಮೇಲೆ ಪೊಲೀಸರು ದಾಖಲಿಸಿಕೊಂಡಿರುವ ದೂರುಗಳನ್ನು 'ಮಾಫ್' ಮಾಡುವುದು. ಇದರಿಂದಾಗಿ ಈಗಾಗಲೇ ಅದೆಷ್ಟೋ ಚೆಡ್ಡಿಗಳ ವಿರುದ್ಧದ ಆರೋಪಗಳನ್ನು ಕೈಬಿಡಲಾಗಿದೆ. ಆದರೆ ಸೂಕ್ತ ಬೆಲೆಗಾಗಿ ಪ್ರತಿಭಟಿಸಿದ ರೈತರು ಮತ್ತು ಸಾಮಾಜಿಕ ನ್ಯಾಯಕ್ಕಾಗಿ ಹೋರಾಡಿದ ದಲಿತರ ಮೇಲೆ ದಾಖಲಿಸಿಕೊಂಡಿರುವ ಯಾರ ವಿರುದ್ಧದ ದೂರನ್ನೂ ಕೈಬಿಟ್ಟಿಲ್ಲ, ಅವರೆಲ್ಲಾ ಇನ್ನೂ ಪೊಲೀಸ್ ಠಾಣೆ, ನ್ಯಾಯಾಲಯ ಎಂದು ಅಲೆದಾಡುತ್ತಿದ್ದಾರೆ. ಇದೆಲ್ಲದರ ಅರ್ಥ ಇಷ್ಟೇ: ನಿಮ್ಮ ಪೊಲೀಸ್ ಇಲಾಖೆ ಪ್ರಕಾರ ನ್ಯಾಯ ಕೇಳುವುದು ಅಪರಾಧ. ಆದರೆ ದಮನ ಮತ್ತು ದೌರ್ಜನ್ಯಗಳಲ್ಲಿ ತೊಡಗುವುದು ಕ್ಷಮೆಗೆ ಅರ್ಹ ಎಂದಲ್ಲವೇ?

ನಿಮಗೆ ಗೊತ್ತಿರಲಿಕ್ಕಿಲ್ಲ, ಇವತ್ತು ರಾಜ್ಯದ ಬಹಳಷ್ಟು ಜಿಲ್ಲೆಗಳಲ್ಲಿ ಪೊಲೀಸ್ ಠಾಣೆಗಳನ್ನು ನಡೆಸುತ್ತಿರುವವರು ನಿಮ್ಮ ಇಲಾಖೆಯ ಜನರಲ್ಲ, ಬದಲಾಗಿ ಸಂಘಪರಿವಾರದ ಪುಂಡು ಪೋಕರಿಗಳು. ಬೇಕಿದ್ದರೆ ವಿಚಾರಿಸಿ ನೋಡಿ. ಇವತ್ತು ಹಣೆಗೆ ಕೇಸರಿ ತಿಲಕವನ್ನು ಬಳಿದುಕೊಂಡಿರುವ ಚೆಡ್ಡಿ ಗೂಂಡಾ ಒಬ್ಬ ಯಾವುದೇ ಪೊಲೀಸ್ ಠಾಣೆಗೆ ಹಾಜರಾದರೆ ಆತನ ಮುಂದೆ ನಿಮ್ಮ ಅಧಿಕಾರಿಗಳು ಕೈಕಟ್ಟಿ ನಿಲ್ಲುತ್ತಿದ್ದಾರೆ. ಆತ ಹೇಳಿದವರ ವಿರುದ್ಧ ದೂರು ದಾಖಲಿಸಿಕೊಂಡು, ಆತನಿಗೆ ಬೇಕಾದವರನ್ನು ಬಿಡುತ್ತಾ ತಮ್ಮ ಕರ್ತವ್ಯಗೇಡಿತನವನ್ನು ಪ್ರದರ್ಶಿಸುತ್ತಿದ್ದಾರೆ.

ನಿಮಗೆ ಪತ್ರ ಬರೆಯುವಾಗಲೇ ಮತ್ತೋರ್ವ ಪೊಲೀಸ್ ಅಧಿಕಾರಿಯ ನೆನಪಾಯಿತು. ಕಾಕತಾಳೀಯದ ಸಂಗತಿ ಯಾವುದೆಂದರೆ ನಿಮ್ಮ ಹೆಸರು ಬಿ. ಶ್ರೀಕುಮಾರ್ ಆಗಿದ್ದರೆ ಅವರ ಹೆಸರು ಬಿ.ಆರ್. ಶ್ರೀಕುಮಾರ್.

ನಿಮ್ಮಂತೆಯೇ ಅವರು ಕೂಡ ದಕ್ಷತೆಗೆ, ಕರ್ತವ್ಯ ನಿಷ್ಠೆಗೆ ಹೆಸರುವಾಸಿ ಆಗಿರುವವರು. ಅವರ ಬಗ್ಗೆ ನಿಮಗೆ ಗೊತ್ತಿದೆ ಎಂದು ಭಾವಿಸದೆ ಇಲ್ಲಿ ಸ್ವಲ್ಪ ಹೇಳುತ್ತೇನೆ. ಅವರು ಗುಜರಾತ್‌ನಲ್ಲಿ ಇಂಟೆಲಿಜೆನ್ಸ್ ಎಡಿಜಿಪಿ ಆಗಿದ್ದವರು. 2002 ರಲ್ಲಿ ಅಲ್ಲಿನ ಅಲ್ಪಸಂಖ್ಯಾತರ ಮೇಲೆ ನರೇಂದ್ರ ಮೋದಿಯ ಸರ್ಕಾರ ಮಾರಣಹೋಮ ನಡೆಸಿದಾಗ, ಆ ಕೃತ್ಯಗಳಲ್ಲಿ ಪೊಲೀಸ್ ಇಲಾಖೆಯೂ ಕೈಜೋಡಿಸಿದಾಗ ಅದನ್ನು ಒಂಟಿಯಾಗಿ ವಿರೋಧಿಸಿದ್ದವರು ಈ ಶ್ರೀಕುಮಾರ್. ಮಾತ್ರವಲ್ಲ ಅದೆಷ್ಟೋ ಬಾರಿ ಮುಖ್ಯಮಂತ್ರಿಯನ್ನು ಮತ್ತು ತನ್ನ ಸಹೋದ್ಯೋಗಿ ಪೊಲೀಸ್ ಅಧಿಕಾರಿಗಳನ್ನು ತಾವು ಮಾಡುತ್ತಿರುವುದು ಅನ್ಯಾಯ, ಕಾನೂನು ಬಾಹಿರ ಎಂದು ಎಚ್ಚರಿಸಿದ್ದವರು. ತಮ್ಮ ಕರ್ತವ್ಯನಿಷ್ಠೆಗೆ ಅವರು ತೋರಿಸಿದ ಬದ್ಧತೆಯಿಂದಾಗಿಯೇ ಅವರು ಡಿಜಿಪಿ ಹುದ್ದೆಯಿಂದ ವಂಚಿತರಾದರು. ಆದರೂ ಅವರು ರಕ್ತಪಿಪಾಸು ಮೋದಿಯೊಂದಿಗೆ ರಾಜಿ ಮಾಡಿಕೊಳ್ಳಲಿಲ್ಲ. ಬದಲಾಗಿ ಮೋದಿ ಸರ್ಕಾರ ಹೇಗೆ ಸಾವಿರಾರು ಜನರ ಸಾವಿಗೆ ಕಾರಣವಾಗಿತ್ತು ಎಂದು ಗಲಭೆಯ ವಿಚಾರಣೆ ನಡೆಸುತ್ತಿರುವ ನಾನಾವತಿ ಆಯೋಗದ ಮುಂದೆ ಹೇಳಿದ್ದರು.

ಶ್ರೀಕುಮಾರ್ ಅವರು ಹೀಗೆ ಮಾಡಿದ್ದು ಮೋದಿ ವಿರುದ್ಧ ಹಗೆತನದಿಂದಾಗಲಿ, ಮತ್ತಿನ್ಯಾವುದೋ ಸ್ವಾರ್ಥ ಕಾರಣಕ್ಕಾಗಲಿ ಅಲ್ಲ, ಬದಲಾಗಿ ತಾನು ಐಪಿಎಸ್ ಅಧಿಕಾರಿ ಆಗಿರುವುದು ಯಾವ ರಾಜಕಾರಣಿಯ ಅಥವಾ ರಾಜಕೀಯ ಪಕ್ಷದ ಸೇವಕನಾಗಲು ಅಲ್ಲ ಎಂಬುದು ಅವರಿಗೆ ಗೊತ್ತಿರುವುದರಿಂದ. ಹಾಗೆಯೇ ಪೊಲೀಸ್ ಅಧಿಕಾರಿಯಾಗಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವುದಕ್ಕೆ ತಾನು ಅನುಸರಿಸಬೇಕಿರುವುದು ಯಾವ ನಾಯಕನ ಆದೇಶಗಳನ್ನಲ್ಲ, ಬದಲಾಗಿ ಸಂವಿಧಾನವನ್ನು ಎಂಬ ಅರಿವೂ ಅವರಿಗೆ ಇರುವುದರಿಂದ.

ಇದೆಲ್ಲ ನಿಮಗೂ ತಿಳಿದಿದೆ ಎಂದು ಭಾವಿಸಿದ್ದೇನೆ. ಆದರೂ ಯಾಕೆ ನೀವು ಮತ್ತು ನಿಮ್ಮ ಪೊಲೀಸ್ ಇಲಾಖೆ ಯಡಿಯೂರಪ್ಪ ಎಂಬ ಹುಂಬ ಮತ್ತು ವಿ.ಎಸ್. ಆಚಾರ್ಯ ಎಂಬ ಪೆದ್ದನ ತಾಳಕ್ಕೆ ಕುಣಿಯುತ್ತಿದ್ದೀರಿ?

ನಿಮ್ಮ ಇಲಾಖೆಯು ಇವತ್ತು ಹೇಗೆ ಧರ್ಮಾಂಧವಾಗಿದೆ, ಅಲ್ಪಸಂಖ್ಯಾತರ ಬಗ್ಗೆ ಹೇಗೆ ಪೂರ್ವಗ್ರಹಪೀಡಿತವಾಗಿದೆ ಎಂಬುದಕ್ಕೆ ಕ್ರಿಶ್ಚಿಯನ್ನರ ಚರ್ಚ್‌ಗಳ ಮೇಲಿನ ದಾಳಿಯಲ್ಲಿ ಚೆಡ್ಡಿಗಳೊಂದಿಗೆ ನಿಮ್ಮ ಅಧಿಕಾರಿಗಳೂ ಕೈಜೋಡಿಸಿದ್ದು ಒಂದು ಉದಾಹರಣೆ. ಅದಕ್ಕೆ ಇನ್ನೊಂದು ಉದಾಹರಣೆ ನಿನ್ನೆ ಶನಿವಾರ ನಡೆಯಿತು.

ನಿಮ್ಮಿಂದ ತಡೆಯಲಾಗದಿದ್ದ ದಾಳಿಗಳಿಂದ ಭಯಭೀತಿಗೊಂಡಿದ್ದ ಕ್ರಿಶ್ಚಿಯನ್ನರೊಂದಿಗೆ ತಮ್ಮ ಏಕತೆಯನ್ನು ತೋರಿಸಲು ಕರ್ನಾಟಕ ಫೋರಂ ಫಾರ್ ಡಿಗ್ನಿಟಿ ಎಂಬ ಮುಸಲ್ಮಾನರ ಸಂಘಟನೆ ಬೆಂಗಳೂರಿನಲ್ಲಿ ಹಲವು ಪೋಸ್ಟರ್‌ಗಳನ್ನು ಅಂಟಿಸಿತ್ತು. ಕನ್ನಡ ಮತ್ತು ಇಂಗ್ಲಿಷ್‌ನಲ್ಲಿದ್ದ ಆ ಪೋಸ್ಟರ್‌ಗಳಲ್ಲಿ 'ನಂತರ ಅವರು ಕ್ರಿಶ್ಚಿಯನ್ನರನ್ನು ಹುಡುಕಿಕೊಂಡು ಬಂದರು' ಎಂಬ ದೊಡ್ಡ ಸಾಲಿತ್ತು. ಅದರೊಂದಿಗೆ 'ಏಕೆಂದರೆ ಬಾಬ್ರಿ ಮಸೀದಿ ಬೀಳಿಸಿದಾಗ ನಾವು ಮೌನವಾಗಿದ್ದೆವು. ಗುಜರಾತ್ ನರಮೇಧ ನಡೆದಾಗ ನಾವು ಮೌನವಾಗಿದ್ದೆವು. ನಮ್ಮ ಮೌನ ಒಂದು ಅಪರಾಧ' ಎಂಬ ವಾಕ್ಯಗಳಿದ್ದವು. ಈ ಪೋಸ್ಟರ್‌ಗಳನ್ನು ನೋಡಿ ಉರಿದು ಬಿದ್ದ ನಿಮ್ಮ ಇಲಾಖೆಯ ಅಧಿಕಾರಿಗಳು KFD ವಿರುದ್ಧ ದೂರುಗಳನ್ನು ದಾಖಲಿಸಿಕೊಂಡರಲ್ಲದೆ, ಸುಮಾರು 15 ಜನ KFD ಕಾರ್ಯಕರ್ತರನ್ನು ಬಂಧಿಸಿದರು. ಅವರ ಮೇಲೆ ಮಾಡಿದ ಆರೋಪ 'ಶಾಂತಿ ಭಂಗಕ್ಕೆ ಪ್ರಚೋದನೆ.'

ಅಲ್ಲಾ, ಶ್ರೀಕುಮಾರ್ ಅವರೇ, ಮಹೇಂದ್ರ ಕುಮಾರ್‌ನಂತಹ ಕ್ರಿಮಿಯನ್ನು ಬಂಧಿಸಿದಾಗ ಆತ ಪೊಲೀಸರ ಮುಂದೆಯೇ "ಎಲ್ಲೋ ಸದ್ದಾಂ ಹುಸೇನನ್ನು ಗಲ್ಲಿಗೇರಿಸಿದರೆ ಇಲ್ಲಿ ಹಿಂದೂಗಳ ಮೇಲೆ ಬೀಳುತ್ತಾರೆ" ಎಂದು ಸುಳ್ಳು ಹೇಳುತ್ತಾನೆ. ಅಷ್ಟೇ ಅಲ್ಲ, "ಯಾರೋ ಪೈಗಂಬರರ ವ್ಯಂಗ್ಯಚಿತ್ರ ಬರೆದರೆ ಇಲ್ಲಿ ಹಿಂದೂಗಳ ಮೇಲೆ ಬೀಳುತ್ತಾರೆ" ಎಂದು ಮತ್ತೊಂದು ಸುಳ್ಳು ಹೇಳುತ್ತಾನೆ. ಅದನ್ನೆಲ್ಲ ಕೇಳಿಸಿಕೊಂಡು ಅವನಿಗೆ ಒಂದು ತಪರಾಕಿ ಹಾಕಿ ಒಳಗೆ ದೂಡುವ ಬದಲು ನಿಮ್ಮ ಅಧಿಕಾರಿಗಳು ನಗುತ್ತಾ ನಿಂತಿರುತ್ತಾರೆ.

ಆದರೆ ಕ್ರಿಶ್ಚಿಯನ್ನರ ಆತಂಕವನ್ನು ಅರ್ಥ ಮಾಡಿಕೊಂಡು ಅವರೊಂದಿಗೆ ಏಕತೆ ಸಾಧಿಸಲು ಮುಸಲ್ಮಾನರು ಒಂದು ಪ್ರಖ್ಯಾತ ಪದ್ಯದ ಸಾಲನ್ನು ಬಳಸಿಕೊಂಡರೆ ನಿಮ್ಮ ಕಣ್ಣಲ್ಲಿ ಅದು ಅಕ್ಷಮ್ಯ ಅಪರಾಧವಾಗುತ್ತದೆ. ಇದೆಂತಹ ನ್ಯಾಯ?

ಅಂದಹಾಗೆ ಆ ಪದ್ಯವನ್ನು ಬರೆದದ್ದು ಮಾರ್ಟಿನ್ ನೆಮ್ಯುಲರ್ ಎಂಬ ಜರ್ಮನ್ ಪಾದ್ರಿ. ಎರಡನೆ ಮಹಾಯುದ್ಧದ ಆರಂಭದಲ್ಲಿ ಆತ ನಾಝಿಗಳನ್ನು ಬೆಂಬಲಿಸಿದ್ದರೂ ಅವರ ಮೂಲಭೂತವಾದದಿಂದ ಆಗುವ ಅನ್ಯಾಯ ಮತ್ತು ದೌರ್ಜನ್ಯವನ್ನು ಕಂಡು ಕಂಗಾಲಾದರು, ನಾಝಿಗಳ ವಿರುದ್ಧ ತಿರುಗಿಬಿದ್ದರು. ಅದಕ್ಕೆಂದು ಬಂಧನಕ್ಕೂ ಒಳಗಾದರು. ಸ್ವಲ್ಪದರಲ್ಲೇ ಗ್ಯಾಸ್ ಚೇಂಬರ್‌ನಿಂದ ಬಚಾವಾಗಿ ತಮ್ಮ ಪ್ರಾಣವನ್ನು ಉಳಿಸಿಕೊಂಡ ನೆಮ್ಯುಲರ್ ತಮ್ಮ ಸಾವಿನ ತನಕ ಮೂಲಭೂತವಾದದ ವಿರುದ್ಧ ಜನಸಾಮಾನ್ಯರ ಅರಿವನ್ನು ಹೆಚ್ಚಿಸಲು ಶ್ರಮಿಸಿದರು. ಅದರ ಅಂಗವಾಗಿ 'ಮೊದಲ ಅವರು ಬಂದದ್ದು....' ಎಂಬ ಕವನ ಬರೆದರು. ಈ ಕವನ ಇವತ್ತು ನಮ್ಮ ನಾಡಿನ ಜನರ ಅರಿವಿಗೂ ಬರಬೇಕಿದೆ.

KFD ಯವರು ಆ ಕವನದ ಒಂದೇ ಒಂದು ಸಾಲನ್ನು ತಮ್ಮ ಪೋಸ್ಟರ್‌ಗಳಲ್ಲಿ ಬಳಸಿದ್ದರು. ಅದರ ಪೂರ್ಣಪಾಠವನ್ನು (ಭಾರತಕ್ಕೆ ಸೂಕ್ತಗೊಳ್ಳುವ ಹಾಗೆ ಸ್ವಲ್ಪ ಬದಲಾವಣೆಗಳನ್ನು ಮಾಡಿ) ಇಲ್ಲಿ ನೀಡುತ್ತಿದ್ದೇನೆ.

ಮೊದಲು ಅವರು ಮುಸಲ್ಮಾನರನ್ನು
ಹುಡುಕಿಕೊಂಡು ಬಂದರು
ನಾನು ಸುಮ್ಮನಿದ್ದೆ
ಏಕೆಂದರೆ ನಾನು ಮುಸಲ್ಮಾನನಾಗಿರಲಿಲ್ಲ

ನಂತರ ಅವರು ಕ್ರಿಶ್ಚಿಯನ್ನರನ್ನು
ಹುಡುಕಿಕೊಂಡು ಬಂದರು
ಆಗಲೂ ನಾನು ಸುಮ್ಮನಿದ್ದೆ
ಏಕೆಂದರೆ ನಾನು ಕ್ರಿಶ್ಚಿಯನ್ನನಾಗಿರಲಿಲ್ಲ


ಆಮೇಲೆ ಅವರು ಕಮ್ಯುನಿಸ್ಟರನ್ನು ಹುಡುಕಿಕೊಂಡು
ಬಂದರು
ಆಗಲೂ ನಾನು ಸುಮ್ಮನಿದ್ದೆ
ಏಕೆಂದರೆ ನಾನು ಕಮ್ಯುನಿಸ್ಟನಾಗಿರಲಿಲ್ಲ


ಆನಂತರ ಅವರು ದಲಿತರನ್ನು ಹುಡುಕಿಕೊಂಡು
ಬಂದರು
ಆಗಲೂ ನಾನು ಸುಮ್ಮನಿದ್ದೆ
ಏಕೆಂದರೆ ನಾನು ದಲಿತನಾಗಿರಲಿಲ್ಲ

ಕೊನೆಗವರು ನನ್ನನ್ನೇ ಹುಡುಕಿಕೊಂಡು ಬಂದರು
ಆಗ ನನಗಾಗಿ ದನಿ ಎತ್ತಲು ಯಾರೂ ಇರಲಿಲ್ಲ.

ಇವತ್ತಿಗೂ ಈ ಪದ್ಯ ಜಗತ್ತಿನಾದ್ಯಂತ ಎಲ್ಲ ಜಾತಿ, ಜನಾಂಗದವರ ನಡುವೆ ಸೌಹಾರ್ದತೆ ಬಯಸುವ ಶಾಂತಿಪ್ರಿಯರ ಧ್ಯೇಯೋದ್ದೇಶದ ಪದ್ಯವಾಗಿದೆ. ಅವರೆಲ್ಲರ ಮೇಲೂ ಕೇಸು ಜಡಿಯುತ್ತೀರಾ ಶ್ರೀಕುಮಾರ್ ಅವರೇ?

ವಿಶ್ವಾಸದಿಂದ....





ಮಠಕ್ಕಲ್ಲ, ಸ್ವಂತಕ್ಕೆ!

ಹೌದು, ನಂಬಲು ತುಸು ಕಷ್ಟವಾದರೂ ನಂಬಲೇಬೇಕಾದ ಸತ್ಯವಿದು. ಪ್ರತಿತಿಂಗಳು ಕೋಟ್ಯಾಂತರ ರೂಪಾಯಿಗಳನ್ನು ಸೃಜಿಸುವ ಹಾಗೂ ಕೋಟ್ಯಾಂತರ ರೂಪಾಯಿ ಮೌಲ್ಯದ ಸ್ಥಿರ-ಚರಾಸ್ತಿಗಳನ್ನು ಹೊಂದಿರುವ ಸಂಪದ್ಭರಿತ ಸಾರ್ವಜನಿಕ ದೇವಾಲಯವಾದ ಗೋಕರ್ಣದ ಶ್ರೀ ಮಹಾಬಲೇಶ್ವರ ದೇವಸ್ಥಾನ ಹೊಸನಗರದ ಶ್ರೀ ರಾಮಚಂದ್ರಾಪುರ ಮಠದ ರಾಘವೇಶನ ಸ್ವಂತದ ಆಸ್ತಿಯಾಗಿ ಪರಿವರ್ತನೆಗೊಂಡಿದೆ. ಈ ದೇವಾಲಯವನ್ನು ರಾಮಚಂದ್ರಾಪುರ ಮಠಕ್ಕೆ ಹಸ್ತಾಂತರಿಸಲಾಗಿದೆ ಎಂದು ಹೊರಗಡೆ ಪ್ರಚಾರ ಮಾಡಲಾಗಿದೆಯಾದರೂ ಒಳಗೊಳಗೇ ದಾಖಲೆಗಳಲ್ಲಿ ದೇವಸ್ಥಾನದ ಎಲ್ಲಾ ಸ್ಥಿರ-ಚರಾಸ್ತಿಗಳನ್ನು ರಾಮಚಂದ್ರಾಪುರ ಮಠದ ಡಕಾಯಿತ ಸ್ವಾಮಿ ರಾಘವೇಶ ತನ್ನ ಹೆಸರಿಗೆ ಮಾಡಿಕೊಂಡಿದ್ದಾನೆ.

ಅಂದರೆ, ಕೋಟ್ಯಾಂತರ ರೂಪಾಯಿ ಮೌಲ್ಯದ ಈ ಸಾರ್ವಜನಿಕ ಆಸ್ತಿ ಇತ್ತ ಸಾರ್ವಜನಿಕರಿಗೂ ಸೇರದೇ, ಅತ್ತ ರಾಮಚಂದ್ರಾಪುರ ಮಠಕ್ಕೂ ಸೇರದೆ ರಾಘವೇಶನ ಸ್ವಂತ ಆಸ್ತಿಯಾಗಿ ಪರಿವರ್ತನೆಗೊಂಡಿದೆ. ನಾಳೆ ರಾಮಚಂದ್ರಾಪುರ ಮಠದಿಂದ ರಾಘವೇಶ ನಿರ್ಗಮಿಸಿದರೆ ಈ ಆಸ್ತಿಯೆಲ್ಲಾ ಅವನೊಂದಿಗೆ ಹೋಗುತ್ತದೆಯೇ ವಿನಃ ಮಠಕ್ಕೆ ಏನೂ ಉಳಿಯುವುದಿಲ್ಲ, ರಾಘವೇಶನ ರಕ್ತಸಂಬಂಧಿಗಳೋ ಅಥವ ಅವನ ಮಕ್ಕಳೋ (ಭವಿಷ್ಯದಲ್ಲಿ ಆತ ಮಕ್ಕಳನ್ನು ಮಾಡಿಕೊಂಡರೆ) ಈ ಎಲ್ಲಾ ಸಮಸ್ತ ಆಸ್ತಿಗೆ ವಾರಸುದಾರರಾಗುತ್ತಾರೆಯೇ ವಿನಃ ಮಠಕ್ಕೆ ಉಳಿಯುವುದು ತಿರುಪತಿಯ ಮೂರು ನಾಮ ಮಾತ್ರ.

ಗೋಕರ್ಣ ದೇವಸ್ಥಾನವನ್ನು ರಾಮಚಂದ್ರಾಪುರ ಮಠಕ್ಕೆ ಹಸ್ತಾಂತರಿಸಲಾಗಿದೆ ಎಂದಾಗಲೇ ರಾಜ್ಯದ ಹತ್ತಾರು ಮಠಗಳು, ಸ್ವಾಮಿಗಳು, ಸಾರ್ವಜನಿಕರು ಬೀದಿಗಿಳಿದು ಪ್ರತಿಭಟಿಸಿದ್ದರು. ಈಗ ಈ ಆಸ್ತಿಯೆಲ್ಲವನ್ನೂ ರಾಘವೇಶ ತನ್ನ ಸ್ವಂತದ ಆಸ್ತಿಯನ್ನಾಗಿ ಮಾಡಿಕೊಂಡಿದ್ದಾನೆ ಎಂಬುದು ತಿಳಿಯುತ್ತಿದ್ದಂತೆ ಮತ್ತೊಂದು ಧರ್ಮಯುದ್ಧಕ್ಕೆ ಕರಾವಳಿ ಸಿದ್ಧಗೊಳ್ಳುತ್ತಿದೆ. ಈ ಯುದ್ಧದಲ್ಲಿ ರಾಘವೇಶನಿಂದ ನಾಮ ಬಳಿಸಿಕೊಂಡಿರುವ ರಾಮಚಂದ್ರಾಪುರ ಮಠದ ಜನರೂ ಸೇರಿಕೊಂಡು ರಾಘವೇಶನಿಗೆ ಒಂದು ಗತಿ ಕಾಣಿಸಿದರೂ ಆಶ್ಚರ್ಯವಿಲ್ಲ.

ಕೋರ್ಟು-ಕಾನೂನುಗಳು ಕಾಲಕಸ!

ಗೋಕರ್ಣ ದೇವಾಲಯದ ಸಮಸ್ತ ಆಸ್ತಿಯನ್ನು ಕಬಳಿಸುವಲ್ಲಿ ನಡೆದ ಕಾನೂನಿನ ಉಲ್ಲಂಘನೆ ಪ್ರಾಯಶಃ ಕಂದಾಯ ಇಲಾಖೆಯ ಚರಿತ್ರೆಯಲ್ಲಿಯೇ ನಡೆದಿರಲಿಕ್ಕಿಲ್ಲವೇನೋ. ಕಂದಾಯ ಇಲಾಖೆಯ ಅಧಿಕಾರಿಗಳೂ ಕೂಡ ರಾಘವೇಶನ ಲೂಟಿಯಲ್ಲಿ ಪಾಲು ಪಡೆದು ದೇವಾಲಯ ಹಸ್ತಾಂತರ ಹಗರಣದಲ್ಲಿ ಭಾಗಿಯಾಗಿರುವುದು ದಾಖಲೆಗಳನ್ನು ಪರಿಶೀಲಿಸಿದರೆ ಮೇಲ್ನೋಟಕ್ಕೇ ಕಾಣಿಸುತ್ತದೆ.


ದೇವಾಲಯವನ್ನು ರಾಮಚಂದ್ರಾಪುರ ಮಠದ ಸುಪರ್ದಿಗೆ ವಹಿಸಿಕೊಡಬೇಕೆಂಬ ಪ್ರಸ್ತಾವವನ್ನು ರಾಘವೇಶ ಮುಂದಿಟ್ಟಾಗಲೇ ಅದರ ವಿರುದ್ಧ ಕೇಸು ದಾಖಲಾಗಿ ಅದೀಗ ಹೈಕೋರ್ಟಿನಲ್ಲಿದೆ. ಈ ಪ್ರಕರಣದ ವಿಚಾರಣೆಯೂ ಮುಗಿದಿಲ್ಲ ಅದಕ್ಕೆ ಸಂಬಂಧಪಟ್ಟ ತೀರ್ಪೂ ಹೊರಬಿದ್ದಿಲ್ಲ. ಆದರೂ ಮ್ಯುಟೇಶನ್ ಎಂಟ್ರಿಯಲ್ಲಿ "ನ್ಯಾಯಾಲಯದ ಆದೇಶ" ಎಂದು ನಮೂದಿಸುವ ಮೂಲಕ ಕೇವಲ ಜನರಿಗೆ ಮಾತ್ರವಲ್ಲ ರಾಜ್ಯದ ಉಚ್ಚ ನ್ಯಾಯಾಲಯಕ್ಕೂ ಮೋಸ ಮಾಡಲಾಗಿದೆ. ಇದು ನ್ಯಾಯಾಂಗ ನಿಂದನೆಯ ಪರಾಕಾಷ್ಠೆಯಲ್ಲದೇ ಮತ್ತೇನಲ್ಲ.

ಅದೂ ಅಲ್ಲದೇ, ಮ್ಯುಟೇಶನ್ ಎಂಟ್ರಿ ಮಂಜೂರಿಗೆ ಮೊದಲು ಈ ಬಗ್ಗೆ ಆಸಕ್ತಿಯಿದ್ದವರಿಗೆ ನೋಟಿಸ್ ನೀಡಬೇಕು. ಅಂಥ ಒಂದು ನೋಟಿಸ್ ಯಾರಿಗೂ ಜಾರಿಯಾಗಿಲ್ಲ. ಯಾವುದೇ ಆಸ್ತಿಯ ದಾಖಲಾತಿ ಹಕ್ಕು ಪಡೆಯುವುದಕ್ಕೆ ಕನಿಷ್ಠ 45 ದಿನಗಳ ಅಗತ್ಯವಿದೆ ಎಂಬ ಕಾನೂನಿದೆ. ಕಂದಾಯ ಇಲಾಖೆಯ ಅಧಿಕಾರಿಗಳು ಇದನ್ನೇ ಮುಂದು ಮಾಡಿಕೊಂಡು ಜನಸಾಮಾನ್ಯರನ್ನು ಕಚೇರಿಗಳಿಗೆ ಅಲೆಸಿ ಜೀವ ಹಿಂಡುತ್ತಾರೆ. ಆದರೆ, ಗೋಕರ್ಣ ದೇವಾಲಯದ ಆಸ್ತಿಯನ್ನು ರಾಘವೇಶನಿಗೆ ಹಸ್ತಾಂತರಿಸಲು ಇದೇ ಅಧಿಕಾರಿಗಳು ತೆಗೆದುಕೊಂಡದ್ದು ಕೇವಲ 15 ದಿನ ಮಾತ್ರ! ಕೈಗೆ ಬಂದ ಮೃಷ್ಟಾನ್ನ ಎಲ್ಲಿ ಬಾಯಿಗೆ ಬಾರದೇ ಹೋಗುತ್ತದೆಯೋ ಎಂಬ ಆತಂಕದಿಂದ ರಾಘವೇಶ ಇಷ್ಟೊಂದು ಅವಸರವಸರವಾಗಿ ದೇವಸ್ಥಾನದ ಆಸ್ತಿಯನ್ನು ತನ್ನ ಹೆಸರಿಗೆ ಮಾಡಿಕೊಂಡಿರುವುದು ಒಂದೆಡೆ ಅವನ ಆಸ್ತಿಯ ಹುಚ್ಚನ್ನು ತೋರಿಸಿದರೆ, ಇನ್ನೊಂದೆಡೆ ಕಂದಾಯ ಅಧಿಕಾರಿಗಳು ಪುಷ್ಕಳವಾಗಿ ಮೇಯುವುದಕ್ಕೆ ಆತನೊಂದಿಗೆ ಶಾಮೀಲಾಗಿರುವುದನ್ನು ತೋರುತ್ತದೆ.

ದೇವಾಲಯ ಹಸ್ತಾಂತರಕ್ಕೆ ಸಂಬಂಧಿಸಿದಂತೆ ಉತ್ತರ ಕನ್ನಡ ಜಿಲ್ಲಾಧಿಕಾರಿಗಳು ಮುಜರಾಯಿ ಇಲಾಖೆಗೆ ಬರೆದ ಪತ್ರದಲ್ಲಿ (ಪತ್ರ ಸಂಖ್ಯೆ: 58/ಪಿಎಸ್/ಸಿಎ/5.2003-04) "ಗೋಕರ್ಣ ದೇವಸ್ಥಾನವು ಒಂದು ಸಾರ್ವಜನಿಕ ದೇವಾಲಯವಾಗಿರುವುದರಿಂದ ಅದನ್ನು ಖಾಸಗೀ ಸಂಸ್ಥೆಗಾಗಲೀ ಅಥವ ಮಠಗಳಿಗಾಗಲೀ ಹಸ್ತಾಂತರಿಸಲು ಕಾನೂನಿನಲ್ಲಿ ಅವಕಾಶವಿಲ್ಲ" ಎಂದಿದ್ದರು. ಇದಾದ ಮೇಲೆ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿ, ಇಲಾಖೆಯ ಕಾನೂನು ಮುಖ್ಯಸ್ಥ ಅಷ್ಟೇ ಏಕೆ, ಕೊನೆಗೆ ರಾಜ್ಯಪಾಲರೂ ಕೂಡ ಇದು ಕಾನೂನು ಬಾಹಿರವಾಗುತ್ತದೆ ಎಂದು ಅಭಿಪ್ರಾಯಪಟ್ಟರು. ಆದರೂ ಯಡ್ಡಿ ಕಾನೂನು, ಕೋರ್ಟುಗಳೆಲ್ಲವನ್ನೂ ಗಾಳಿಗೆ ತೂರಿ ಗೋಕರ್ಣವನ್ನು ರಾಘವೇಶನ ಪಾದದಡಿಯಲ್ಲಿಟ್ಟಿದ್ದಾನೆಂದರೆ ಇವನನ್ನು ರಾಜ್ಯದ ಮುಖ್ಯಮಂತ್ರಿ ಎನ್ನಬೇಕೋ ಅಥವ ರಾಮಚಂದ್ರಾಪುರ ಮಠದ ದ್ವಾರಪಾಲಕ ಎನ್ನಬೇಕೋ ಗೊತ್ತಿಲ್ಲ.


ಜನಸಾಮಾನ್ಯರ ಕಣ್ಣಿಗೆ ಮಣ್ಣು

ಗೋಕರ್ಣ ದೇವಾಲಯವನ್ನು ರಾಘವೇಶ ರಾಮಚಂದ್ರಾಪುರ ಮಠಕ್ಕಲ್ಲದೇ ತನ್ನ ಸ್ವಂತಕ್ಕೆ ಮಾಡಿಕೊಂಡಿದ್ದಾನೆಂಬ ಸುದ್ದಿ ಈಗಾಗಲೇ ಇಡೀ ರಾಜ್ಯದಾದ್ಯಂತ ಪಸರಿಸತೊಡಗಿದ್ದು ಅದು ರಾಘವೇಶನ ವಿರುದ್ಧ ದೊಡ್ಡ ಪ್ರತಿಭಟನೆಯಾಗಿ ಪರಿವರ್ತನೆಯಾಗುವ ನಿರೀಕ್ಷೆಯಿದೆ. ಇದರ ವಾಸನೆ ಬಡಿದ ಯಡ್ಡಿ ಸರ್ಕಾರ ಈ ಸುದ್ದಿಯನ್ನು ಅಲ್ಲಗಳೆಯುತ್ತಾ ದೇವಾಲಯವನ್ನು ರಾಮಚಂದ್ರಾಪುರ ಮಠಕ್ಕೇ ವಹಿಸಲಾಗಿದೆಯೇ ಹೊರತು ರಾಘವೇಶ್ವರ ಸ್ವಾಮಿಯ ಸ್ವಂತಕ್ಕೆ ಮಾಡಿಲ್ಲ ಎಂದು ಬೆಣ್ಣೆ ಸವರುವ ಕೆಲಸ ಮಾಡುತ್ತಿದೆ.


ರೈಟ್ಸ್, ಗೇಣಿ ಮತ್ತು ಪಹಣಿ ಪತ್ರಿಕೆ (ಆ.

ಗ್ರಾಮ : ಗೋಕರ್ಣ

	9. ಕಬ್ಜೆ ಅಥವಾ ಸ್ವಾಧೀನದಾರರ ಹೆಸರು ತಂದೆಯ ಹೆಸರು ಮತ್ತು ವಿಳಾಸ	ವಿಸ್ತೀರ್ಣ ಎ ಗುಂ
	ಶ್ರೀ ಮಹಾಬಲೇಶ್ವರ ದೇವ ಗೋಕರ್ಣ ಶ್ರೀಶ್ರೀಶ್ರೀ ಶ್ರೀಮತ್ ರಾಘವೇಶ್ವರ ಭಾರತೀ ಮಹಾಸ್ವಾಮೀಜಿ, ಪೀಠಾಧಿಪತಿಗಳು ,ಶ್ರೀ ಸಂಸ್ಥಾನ ಗೋಕರ್ಣ, ಶ್ರೀ ರಾಮಚಂದ್ರಾಪುರ ಮಠ	0.01.04.00
ಒಟ್ಟು		


ಶ್ರೀ ಮಹಾಬಲೇಶ್ವರ ದೇವ ಗೋಕರ್ಣ ನಿ.ಮುಕ್ತೇಸರ ... 0.00.04.001676 23/08/2003 MR 20 /2003-2004

ಶ್ರೀ ಮಹಾಬಲೇಶ್ವರ ದೇವ ಗೋಕರ್ಣ ಶ್ರೀಶ್ರೀಶ್ರೀ ಶ್ರೀಮತ್ ರಾಘವೇಶ್ವರ ಭಾರತೀ ಮಹಾಸ್ವಾಮೀಜಿ, ಪೀಠಾಧಿಪತಿಗಳು ,ಶ್ರೀ ಸಂಸ್ಥಾನ ಗೋಕರ್ಣ ,ಶ್ರೀ ರಾಮಚಂದ್ರಾಪುರ ಮಠ 0.00.04.001676 23/08/2003 MR 20 /03-04

ಆದರೆ, ದೇವಸ್ಥಾನದ ಸಮಸ್ತ ಆಸ್ತಿಯೆಲ್ಲವನ್ನೂ ಈ ರಾಘವೇಶ ರಾಮಚಂದ್ರಾಪುರ ಮಠದ ಆಸ್ತಿಯನ್ನಾಗಿಯಲ್ಲ ತನ್ನ ಸ್ವಂತ ಆಸ್ತಿಯಾಗಿ ಪರಿವರ್ತನೆ ಮಾಡಿಕೊಂಡಿದ್ದಾನೆ ಎಂಬುದು ಮ್ಯುಟೇಶನ್, ಪಹಣಿ ಪ್ರತಿಗಳನ್ನು ನೋಡಿದ ಯಾರಿಗಾದರೂ ಅರ್ಥವಾಗುತ್ತದೆ. ಇದೇ ಸೆಪ್ಟೆಂಬರ್ ಎರಡನೇ ತಾರೀಖಿನಂದೇ ಮಹಾಬಲೇಶ್ವರ ದೇವಸ್ಥಾನದ ಎಲ್ಲಾ ಸ್ಥಿರಾಸ್ತಿಗಳು ರಾಘವೇಶನ ಪಾಲಾಗಿರುವುದನ್ನು ಗೋಕರ್ಣ ಗ್ರಾಮದ ಎಮ್.ಆರ್.ನಂ. 69/2008-09 ಸ್ಪಷ್ಟವಾಗಿ ಹೇಳುತ್ತದೆ. ಈ ಹಿಂದಿನ ಎಲ್ಲಾ ದಾಖಲೆಗಳಲ್ಲಿ ದೇವಸ್ಥಾನದ ಆಸ್ತಿಯ ಒಡೆತನವನ್ನು "ಶ್ರೀ ಮಹಾಬಲೇಶ್ವರ ದೇವ ಗೋಕರ್ಣ ನಿಪ್ರತ್ (Represented by)" ಎಂದು ಬರೆದು ನಂತರ ಮುಕ್ತೇಸರರ ಹೆಸರನ್ನು ನಮೂದಿಸಲಾಗುತ್ತಿತ್ತು. ಅಂದರೆ, ಆಸ್ತಿಯು ಮೂಲತಃ ದೇವಸ್ಥಾನದ ಸೊತ್ತೇ ಆಗಿದ್ದು ದೇವಾಲಯವನ್ನು ಪ್ರತಿನಿಧಿಸುವ ಮುಕ್ತೇಸರರು (ಇವರು ಕಾಲಕಾಲಕ್ಕೆ ಬದಲಾಗಬಹುದು) ಆಸ್ತಿಯ ನಿರ್ವಹಣೆ ಮಾಡುತ್ತಿರುತ್ತಾರೆ ಎಂದರ್ಥ.

ಆದರೆ, ಈಗಿರುವ ದಾಖಲೆಗಳನ್ನು ಪರಿಶೀಲಿಸಿ ನೋಡಿದರೆ "ಶ್ರೀ ಮಹಾಬಲೇಶ್ವರ ದೇವ, ಗೋಕರ್ಣ, ಶ್ರೀಶ್ರೀಶ್ರೀ ಶ್ರೀಮತ್ ರಾಘವೇಶ್ವರ ಭಾರತೀ ಮಹಾಸ್ವಾಮಿಜೀ ಪೀಠಾಧಿಪತಿಗಳು, ಶ್ರೀ ಸಂಸ್ಥಾನ ಗೋಕರ್ಣ, ಶ್ರೀರಾಮಚಂದ್ರಾಪುರ ಮಠ" ಎಂದು ನೋಂದಾವಣೆಯಾಗಿದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಮೊದಲು ರಾಘವೇಶನ ಹೆಸರೇ ಬಂದು ಆನಂತರ ರಾಮಚಂದ್ರಾಪುರ ಮಠದ ಹೆಸರು ಬಂದಿರುವುದು. ಅಂದರೆ, ಆಸ್ತಿ ಮಠದ ಸೊತ್ತಲ್ಲ, ಮಠದಲ್ಲಿ ಸ್ವಾಮಿಯಾಗಿರುವ ರಾಘವೇಶನ ಸೊತ್ತು ಎಂದಾಗುತ್ತದೆ. ರಾಘವೇಶ ನಾಳೆ ಮಠ ಬಿಟ್ಟು ಹೋದರೂ ಈ ಆಸ್ತಿಯ ಒಡೆಯ ಆತನೇ ಆಗಿರುತ್ತಾನೆ. ಇಷ್ಟು ಸಣ್ಣ ವಿಚಾರ ಸರ್ಕಾರಕ್ಕೆ ಗೊತ್ತಿಲ್ಲ ಎಂದೇನಲ್ಲ. ಜನರ ಕಣ್ಣಿಗೆ ಮಣ್ಣೆರಚುವುದಕ್ಕೆ ಹಾಗೆ ಹೇಳುತ್ತಿದೆಯಷ್ಟೆ.



ರಾಘವೇಶನ ದರ್ಬಾರ್ ಆರಂಭ!

ಗೋಕರ್ಣ ದೇವಸ್ಥಾನ ತನ್ನ ಜೋಳಿಗೆಗೆ ಬೀಳುತ್ತಿದ್ದಂತೆಯೇ ರಾಘವೇಶ ಅಲ್ಲಿ ತನ್ನ ದರ್ಬಾರ್ ಶುರುಹಚ್ಚಿಕೊಂಡಿದ್ದಾನೆ. ಒಂದೆಡೆ, ಇಲ್ಲಿಯತನಕ ಆಚರಣೆಯಲ್ಲಿದ್ದ ಎಲ್ಲಾ ನೀತಿಗಳನ್ನು, ಸಂಪ್ರದಾಯಗಳನ್ನು ಗಾಳಿಗೆ ತೂರಿ ತನ್ನದೇ ಆದ ಹೊಸ ಸಂಪ್ರದಾಯಗಳನ್ನು ಜಾರಿಗೆ ತರುತ್ತಿದ್ದಾನೆ. ಇದು ವಾಸ್ತವದಲ್ಲಿ ದೇವಳದ ಭಕ್ತಸಮೂಹದಲ್ಲಿ ರಾಘವೇಶನ ವಿರುದ್ಧ ಕೋಪ ಹೆಪ್ಪುಗಟ್ಟುವುದಕ್ಕೆ ಕಾರಣವಾಗುತ್ತಿದೆ.


ರಾಘವೇಶ ಗೋಕರ್ಣವನ್ನು ನುಂಗಿರುವುದರ ವಿರುದ್ಧ ಜನ ಸಿಟ್ಟಿಗೆದ್ದಿರುವುದನ್ನು, ತನ್ನ ವಿರುದ್ಧ ಗೋಕರ್ಣದಲ್ಲಿ ಅಭೂತಪೂರ್ವವಾಗಿ ಪ್ರತಿಭಟಿಸುತ್ತಿರುವುದನ್ನು, ಬಾಲಗಂಗಾಧರನಾಥ ಸ್ವಾಮೀಜಿಯಾದಿಯಾಗಿ ರಾಜ್ಯದ ಬಹುತೇಕ ಮಠಾಧೀಶರು ತನ್ನ ವಿರುದ್ಧ ತಿರುಗಿಬಿದ್ದಿರುವುದನ್ನು ಗಮನಿಸಿರುವ ರಾಘವೇಶ ಈಗ ಈ ಎಲ್ಲಾ ವಿರೋಧಗಳನ್ನು ಶಮನ ಮಾಡುವುದಕ್ಕಾಗಿ ತರಹೇವಾರಿ ತಂತ್ರಗಳನ್ನು ಅನುಸರಿಸಲು ಹೆಣಗಾಡುತ್ತಿದ್ದಾನೆ. ಉದಾಹರಣೆಗೆ ಹೇಳಬೇಕೆಂದರೆ, ದೇವಸ್ಥಾನ ಪ್ರವೇಶಕ್ಕೆ 50 ಪೈಸೆ ಶುಲ್ಕವನ್ನು ವಿಧಿಸಲಾಗುತ್ತಿತ್ತು, ರಾಘವೇಶ ಅದನ್ನು ರದ್ದು ಮಾಡಿ ಮಹಾ ಪ್ರಗತಿಪರನಂತೆ ಪೋಜು ಕೊಡುತ್ತಿದ್ದಾನೆ. ವಾಸ್ತವ ಏನೆಂದರೆ, ಸ್ವಾಮೀಜಿಗಳ ಪಾದ ಪೂಜೆಗೆ ಭಕ್ತರಿಂದ ಇಪ್ಪತ್ತೈದು ಸಾವಿರದಿಂದ ಐವತ್ತು ಸಾವಿರ ರೂಪಾಯಿಗಳ ತನಕ ಪೀಕಲಾಗುತ್ತದೆ. ಅದನ್ನು ಕಡಿಮೆ ಮಾಡುವ ಅಥವ ರದ್ದುಗೊಳಿಸುವ ತಾಪತ್ರಯವನ್ನು ಆತ ತೆಗೆದುಕೊಂಡಿಲ್ಲ. ದಿನದ ಪೂಜೆಗೆ ಒಂದು ಲಕ್ಷ ರೂಪಾಯಿ ಫಿಕ್ಸ್ ಮಾಡಲಾಗಿದೆ. ಅದನ್ನೂ ಕಡಿಮೆ ಮಾಡುವ ಅಥವ ರದ್ದುಪಡಿಸುವ ಗೋಜಿಗೆ ಈತ ಹೋಗಿಲ್ಲ. ಏಕೆಂದರೆ, ಇವ್ಯಾವೂ ಕೇವಲ ಐವತ್ತು ಪೈಸೆಯಲ್ಲವಲ್ಲ?

ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದರೆ ಏನೆಲ್ಲಾ ಅನಾಹುತಗಳು ಆಗಬಹುದೆಂದು ಈ ರಾಜ್ಯದ ಪ್ರಜ್ಞಾವಂತ ಜನತೆ ನಿರೀಕ್ಷಿಸಿದ್ದರೋ ಅದೀಗ ಒಂದೊಂದಾಗಿ ನಿಜವಾಗುತ್ತಿದೆ. ಸರ್ಕಾರವೇ ಖುದ್ದಾಗಿ ನಿಂತು ಒಂದೆಡೆ ಮುಸ್ಲಿಮ್, ಕ್ರಿಶ್ಚಿಯನ್ನರಂಥ ಧಾರ್ಮಿಕ ಅಲ್ಪಸಂಖ್ಯಾತರ ಮೇಲೆ ಸಂಘಪರಿವಾರಗಳ ಮೂಲಕ ಅವ್ಯಾಹತವಾಗಿ ದಾಳಿ ನಡೆಸುತ್ತಿದ್ದರೆ ಇನ್ನೊಂದೆಡೆ ಅಮೃತ ಮಹಲ್, ಗೋಕರ್ಣ ದೇವಾಲಯಗಳಂಥ ಸಾರ್ವಜನಿಕ ಸಂಪತ್ತುಗಳನ್ನು ರಾಘವೇಶನ ಜೋಳಿಗೆಗೆ ಹಾಕುತ್ತಿದೆ. ಬಿಜೆಪಿ ಸರ್ಕಾರದ ಆಡಳಿತದಲ್ಲಿ ರಾಜ್ಯದ ಜನ ಇನ್ನೇನೇನು ನೋಡಬೇಕಿದೆಯೋ ಗೊತ್ತಿಲ್ಲ.

■ ಕುಮಾರ್ ಬುರಡಿಕಟ್ಟಿ

ರಾಘವೇಶನಿಗೆ ಮುಖಭಂಗ

ಆವತ್ತು ಗೋಕರ್ಣ ದೇವಸ್ಥಾನವನ್ನು ರಾಮಚಂ[ದ್ರಾ]ಪುರ ಮಠಕ್ಕೆ ಹಸ್ತಾಂತರಿಸಲಾಗಿದೆ ಎಂಬ ಸು[ದ್ದಿ] ಹರಡುತ್ತಿದ್ದಂತೆ ಅತ್ತ ಗೋಕರ್ಣದ ಜನತೆ ಪ್ರತಿಭಟ[ನೆಗೆ] ಗಿಳಿದು ಇಡೀ ಕರಾವಳಿಯೇ ಪ್ರಕ್ಷುಬ್ಧವಾಗಿತ್ತು. ಅದಾ[ದ] ಮೇಲೆ ರಾಘವೇಶನ ಗೋಕರ್ಣ 'ಪುರಪ್ರವೇಶ' ಎಂ[ಬ] ನಾಟಕ ಪ್ರಾರಂಭವಾಗುವುದಿತ್ತು. ಈತನ ವಿರುದ್ಧ ಇಡೀ ಗೋಕರ್ಣವೇ ಎದ್ದು ನಿಂತಿರುವಾಗ ಅಲ್ಲಿ ಪು[ರ] ಪ್ರವೇಶ ಮಾಡಿದರೆ ಜನ ಎಲ್ಲಿ ಒದ್ದುಬಿಡುತ್ತಾರೋ ಎಂದು ಈತ ಭಯಬಿದ್ದಿದ್ದ. ಜನರನ್ನು ದಿಕ್ಕು ತಪ್ಪಿಸುವು[ದ]ಕ್ಕಾಗಿ ತಾನೊಬ್ಬನೇ ಅಲ್ಲ, ತನ್ನ ಜೊತೆ ಬಾಲಗಂಗಾಧರನಾಥ ಸ್ವಾಮಿಯಂಥ ರಾಜ್ಯದ ಎಲ್ಲಾ ಪ್ರಮುಖ ಸ್ವಾಮಿಗಳೂ ಇದ್ದಾರೆ, ಅವರೆಲ್ಲಾ ಪುರ ಪ್ರವೇಶದ ದಿನ ತನ್ನೊಂದಿಗೆ ಬರ್ತಾರೆ ಎಂದೆಲ್ಲಾ ಪೂಸಿ ಹೊಡೆದ.




ವಾಸ್ತವ ಏನೆಂದರೆ, ಬಾಲಗಂಗಾಧರನಾಥ ಸ್ವಾಮಿಯಾದಿಯಾಗಿ ರಾಘವೇ[ಶ] ಹೇಳಿದ್ದ ಎಲ್ಲಾ ಸ್ವಾಮಿಗಳು ಅವನ ವಿರುದ್ಧವೇ ತಿರುಗಿಬಿದ್ದರು! ತಾವೆಲ್ಲಾ ಗೋಕರ್ಣ ದೇವಾಲಯವನ್ನು ರಾಮಚಂದ್ರಾಪುರ ಮಠಕ್ಕೆ ಹಸ್ತಾಂತರಿಸುವುದರ ವಿರು[ದ್ಧ] ಇದ್ದೇವೆ ಎಂದು ಕಿಡಿಕಾರಿದರು. ರಾಘವೇಶನ ಪು[ರ] ಪ್ರವೇಶಕ್ಕೆ ಚೆಡ್ಡಿ ನರಪೇತಲ ಸ್ವಾಮಿ ಪೇಜಾವರರನ್ನು ಬಿಟ್ಟರೆ ರಾಜ್ಯದ ಬೇರಾವ ಪ್ರಮುಖ ಸ್ವಾಮೀಜಿಯೂ ಹೋಗಿರಲಿಲ್ಲ. ಅಲ್ಲಿಗೆ ರಾಘವೇಶನಿಗೆ ಮೊದಲ ಬಾರಿ ಮುಖಭಂಗವಾಗಿತ್ತು.

ಈಗ ಮತ್ತೆ ಮುಖಭಂಗವಾಗುವುದಿದೆ. ಬರು[ವ] ಅಕ್ಟೋಬರ್ ಎರಡನೇ ವಾರದಲ್ಲಿ ರಾಘವೇಶನ ವಿರು[ದ್ಧ] ಕುಮಟಾದ ಮಹಾತ್ಮಾ ಗಾಂಧಿ ಕ್ರೀಡಾಂಗಣದಲ್ಲಿ ಬೃಹತ್ ಪ್ರತಿಭಟನೆಯೊಂದು ನಡೆಯುವುದಿದೆ. ಸ್ವರ್ಣವಲ್ಲಿ ಗಂಗಾಧರೇಂದ್ರ ಸರಸ್ವತಿ ಸ್ವಾಮಿ ಹಾಗೂ ಆದಿ ಚುಂಚನಗಿರಿ ಶಾಖಾ ಮಠದ ಪ್ರಸನ್ನನಾಥ ಸ್ವಾಮೀಜಿ ಇದರ ನೇತೃತ್ವ ವಹಿಸಿಕೊಳ್ಳಲಿದ್ದು ಶೃಂಗೇರಿ ಜಗದ್ಗುರು ಶಂಕರಾಚಾರ್ಯ ಭಾರತೀ ತೀರ್ಥ ಮಹಾಸ್ವಾಮಿ, ಆದಿ ಚುಂಚನಗಿರಿ ಮಠದ ಬಾಲಗಂಗಾಧರನಾಥ ಸ್ವಾಮಿ, ಚಿತ್ರಾಪುರ ಮಠದ ಸದ್ಯೋಜ್ಯಾತ, ಕರ್ಕಿಮಠದ ಸಚ್ಚಿದಾನಂದ ಭಾರತೀ ತೀರ್ಥ ಸ್ವಾಮಿ, ಹಳದಿಪುರ ಮಠದ ವಾಮನಾಶ್ರಮ ಸ್ವಾಮಿಗಳು ಮುಂತಾದ ನಾಡಿನ ಪ್ರಮುಖ ಯತಿಗಳೆಲ್ಲರೂ ಒಗ್ಗಟ್ಟಿನಿಂದ ಇದರಲ್ಲಿ ಭಾಗವಹಿಸಿ ರಾಘವೇಶನ ಜನ್ಮ ಜಾಲಾಡಲಿದ್ದಾರೆ. ಇದಕ್ಕೆ ಬೆಂಬಲವಾಗಿ ವಿವಿಧ ರಾಜಕೀಯ ಪಕ್ಷಗಳ ನಾಯಕರೂ ಬರಲಿದ್ದಾರೆ. ಎಲ್ಲಕ್ಕಿಂತ ಹೆಚ್ಚಾಗಿ ಅಂದು ನಡೆಯಲಿರುವ ಬೃಹತ್ ಪ್ರತಿಭಟನಾ ಸಭೆಯಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಭಕ್ತ ಸಮೂಹ ಸೇರುವ ನಿರೀಕ್ಷೆಯಿದೆ. ಇದರ ಸುದ್ದಿ ತಿಳಿದೇ ರಾಘವೇಶನಿಗೆ ನಡುಕ ಹುಟ್ಟಿದಂತಿದೆ.

ಎಡಬಿಡಂಗಿ ಕಾಗೇರಿ!

ಯಾವಾಗ ಗೋಕರ್ಣದಲ್ಲಿ ದೇವಸ್ಥಾನ ಹಸ್ತಾಂತರದ ವಿರುದ್ಧವಾಗಿ ಜನ ಅಮೋಘವಾಗಿ ಪ್ರತಿಭಟಿಸಿದರೋ ತಕ್ಷಣ ಸಚಿವ ವಿಶ್ವೇಶ್ವರ ಹೆಗಡೆ ಕಾಗೇರಿ ಕೂಡ "ನಾನೂ ಇದರ ವಿರುದ್ಧವಿದ್ದೇನೆ" ಎಂದು ಪೋಜು ಕೊಡುತ್ತಾನೆ. ಅತ್ತ ಯಡ್ಡಿ ಕಿವಿ ಹಿಂಡಿದ ತಕ್ಷಣ "ನಾನು ಅದರ ಪರವಾಗಿದ್ದೇನೆ" ಎಂದು ತೊದಲುತ್ತಾನೆ. ಆವತ್ತು ಸೆಪ್ಟೆಂಬರ್ 15. ಶಿರಸಿಯ ಸ್ವರ್ಣವಲ್ಲಿ ಸ್ವಂದಾ ಮಠದ ಗಂಗಾಧರೇಂದ್ರ ಸರಸ್ವತಿ ಸ್ವಾಮಿ ನೇತೃತ್ವದಲ್ಲಿ ಗೋಕರ್ಣ ಮಹಾಬಲೇಶ್ವರ ದೇವಸ್ಥಾನ ಹಸ್ತಾಂತರ ವಿರೋಧಿ ಸಭೆ ನಡೆದಿತ್ತು. ಅಲ್ಲಿ ಕಾಗೇರಿ ಕೂಡ ಉಪಸ್ಥಿತನಿದ್ದ. ಅಂದಿನ ಸಭೆಯಲ್ಲಿ ಭಾಗ ವಹಿಸಿದ್ದ ಅನೇಕ ಸ್ವಾಮಿಗಳು ಮತ್ತು ಶ್ರೀ ಕ್ಷೇತ್ರ ಗೋಕರ್ಣ ರಕ್ಷಣಾ ಸಮಿತಿಯು ರಾಮಚಂದ್ರಾಪುರ ಮಠಕ್ಕೆ ಗೋಕರ್ಣವನ್ನು ಬಿಟ್ಟುಕೊಡಲು ಸಾಧ್ಯವೇ ಇಲ್ಲವೆಂದೂ, ಅದನ್ನು ಉಳಿಸಿಕೊಳ್ಳುವುದಕ್ಕಾಗಿ ಎಂತಹ ಹೋರಾಟಕ್ಕೂ ಸಿದ್ಧ ಎಂದೂ ಘೋಷಣೆಯನ್ನು ಮಾಡಿದರು. ಇದಕ್ಕೆ ಕಾಗೇರಿ ಕೂಡ ಸಮ್ಮತಿ ಸೂಚಿಸಿ ಜೈ ಎಂದು ಚಪ್ಪಾಳೆ ... ಮಾಡಿದ. ಅದೇ ದಿನ ಸಂಜೆ 5.30 ಗಂಟೆಗೆ ಗೋಕರ್ಣದಲ್ಲಿ ರಾಮಚಂದ್ರಾಪುರ ಮಠದ ರಾಘವೇಶ ಮಹಾಸಂಕಲ್ಪ ಸಮಾವೇಶ ಹಮ್ಮಿಕೊಂಡು ಯಾವುದೇ ಕಾರಣಕ್ಕೂ ಗೋಕರ್ಣವನ್ನು ಬಿಟ್ಟುಕೊಡುವುದಿಲ್ಲ ಎಂದು ಪ್ರತಿಜ್ಞೆಗೈದ. ಆ ಸಭೆಯಲ್ಲೂ ಹಾಜರಿದ್ದ ಕಾಗೇರಿ ಅಲ್ಲಿಯೂ ಜೈಕಾರ ಹಾಕಿ ಸಮ್ಮತಿ ಸೂಚಿಸಿದ.




ಎಡಬಿಡಂಗಿತನಕ್ಕೆ ಈ ಕಾಗೇರಿ ಒಂದು ಉತ್ತಮ ಉದಾಹರಣೆಯಲ್ಲವೆ?

ಜನೋಪಕಾರಿ ದೊಡ್ಡಣ್ಣ ಶೆಟ್ಟರ ಹೆಸರಿನ ಟ್ರಸ್ಟ್ ಈಗ ತಾತ್ಕಾಲಿಕವಾಗಿ ರಾಮಮೂರ್ತಿ ಎಂಬ ಆಡಳಿತಾಧಿಕಾರಿಯ ಕೈಗೆ ಬಂದಿದೆ. ಧಾರ್ಮಿಕ ದತ್ತಿ ಇಲಾಖೆಯ ಈ ಖದೀಮ ಅಧಿಕಾರಿಯ 'ಮನೆಗೆ ಮಾರಿ ಪರರಿಗೆ ಉಪಕಾರಿ' ಪಾಲಿಸಿಯಿಂದ ಈ ಜನೋಪಕಾರಿ ಟ್ರಸ್ಟ್‌ಗೆ ಕೋಟ್ಯಂತರ ರೂಪಾಯಿಗಳ ನಷ್ಟವಾಗುವ ಸಂಭವ ಕಂಡುಬರುತ್ತಿದೆ. ಧಾರ್ಮಿಕ ದತ್ತಿ ಮಂತ್ರಿ, ಹುಟ್ಟುವಂಚಕ ಕೃಷ್ಣಯ್ಯ ಶೆಟ್ಟಿಯ ಕೈವಾಡವೂ ಇದರಲ್ಲಿದ್ದು ನಾಳೆ ಇದೆಲ್ಲಾ ದೊಡ್ಡ ವಿವಾದವಾಗಿ ಗಲಾಟೆಗಳಾದರೂ ಆಶ್ಚರ್ಯವಿಲ್ಲ.

ಬಿಜೆಪಿಗಳ ಧರ್ಮದ್ರೋಹ

ಹಿಂದೂ ಧರ್ಮದ ಉದ್ಧಾರಕ್ಕಾಗೇ ಅವತರಿಸುವಂತೆ ಪೋಸು ಕೊಡುತ್ತಿರುವ ಯಡ್ಡಿ ಪಟಾಲಂ ಪ್ರತಿನಿತ್ಯ ಮಾಡುತ್ತಿರುವ ಕೆಲಸಗಳೆಲ್ಲಾ ಧರ್ಮದ ಸೋಗಿನ ವಂಚನೆ ಮಾತ್ರ. ಗೋಕರ್ಣ ದೇವಸ್ಥಾನವನ್ನೇ ಬ್ರಾಹ್ಮಣ ಸ್ವಾಮಿಯೊಬ್ಬನಿಗೆ ಬರೆದುಕೊಟ್ಟ ವಂಚನೆ ಒಂದಾಯಿತಾ. ಈಗ RSS ನ ವಟುಗಳು ಚಾಮರಾಜಪೇಟೆಯ ರಾಯರಾಯ ಛತ್ರದ ಐದೆಕರೆ ಜಾಗ ನುಂಗಲು ಸ್ಕೆಚ್ ಹಾಕಿಕೊಂಡಿದ್ದಾರೆ.


ರಾಮಮೂರ್ತಿ

ಇನ್ನೊಂದೆಡೆ ಇದೇ ಚಡ್ಡಿಗಳು ಈಗ SLN ಟ್ರಸ್ಟ್‌ನೊಳಗೆ ನುಗ್ಗಲು ನಾಲಿಗೆ ಸವರಿಕೊಂಡು ರೆಡಿಯಾಗುತ್ತಿದ್ದಾರೆ.

SLN ಟ್ರಸ್ಟ್‌ನಲ್ಲಿ ರಾಮಮೂರ್ತಿ ಎಂಬ ಶನಿ

ಕಳೆದ ವರ್ಷದ ಅಕ್ಟೋಬರ್‌ನಲ್ಲಿ ಸರ್ಕಾರಿ ಆದೇಶದಂತೆ ಜ್ಯೋತಿನಗರ ವೈಶ್ಯ ಜನಾಂಗದ ನಾಯಕ ಬಿ.ಜಿ. ರಮೇಶ್ SLN ಟ್ರಸ್ಟ್‌ನ ಅಧ್ಯಕ್ಷರಾಗಿ ನೇಮಕಗೊಂಡಿದ್ದರು. ಮಿಂಚಿನ ವೇಗದಲ್ಲಿ ಕೆಲಸ ಆರಂಭಿಸಿದ ರಮೇಶ್ ಕೇವಲ ಹತ್ತೇ ತಿಂಗಳಲ್ಲಿ ಸಂಸ್ಥೆಗೆ 1 ಕೋಟಿಗೂ ಹೆಚ್ಚು ಆದಾಯ ಬರುವಂತೆ ನೋಡಿಕೊಂಡಿದ್ದರು.

SLN ಟ್ರಸ್ಟ್‌ಗೆ ಸೇರಿರುವ ಅಮೂಲ್ಯ ಆಸ್ತಿಗಳು ಬೆಂಗಳೂರಿನ ಸಿಟಿ ಮಾರ್ಕೆಟ್ ಏರಿಯಾದಲ್ಲಿದೆ. ಅಪ್ಸರ, ಪರಿಮಳ, ಪ್ರದೀಪ್ ಥಿಯೇಟರ್‌ಗಳು, ಚಂದ್ರಭವನ್, ಅನ್ನ ಕುಟೀರದಂತಹ ಹೋಟೆಲ್‌ಗಳೂ ಜೊತೆಗೆ ಡಜನ್ ಗಟ್ಟಲೆ ಅಂಗಡಿ ಮುಂಗಟ್ಟುಗಳಿವೆ. ಇವುಗಳ ಪೈಕಿ ರಮೇಶ್ ಮಾಡಿದ ಮೊದಲ ಕೆಲಸವೆಂದರೆ ಮುಚ್ಚಿಹೋಗಿದ್ದ ಅಪ್ಸರ ಟಾಕೀಸನ್ನು ಕಾವೇರಿ ಟಾಕೀಸಿನ ರಘು ಎಂಬುವರಿಗೆ ಬಾಡಿಗೆಗೆ ಕೊಟ್ಟಿದ್ದು. ಟೆಂಡರ್ ಮೂಲಕ ಯಾವುದೇ ಮುಚ್ಚುಮರೆಯಿರದೆ ನಡೆದ ಈ ನಿರ್ಧಾರದಿಂದಾಗಿ ಸಂಸ್ಥೆಗೆ ತಿಂಗಳಿಗೆ ಮೂರುವರೆ ಲಕ್ಷ ರೂಪಾಯಿ ಕೇವಲ ಬಾಡಿಗೆಯಿಂದಲೇ ಈಗ ಬರುತ್ತಿದೆ. ಜೊತೆಗೆ ಗುಡ್‌ವಿಲ್ ರೂಪದಲ್ಲಿ 50 ಲಕ್ಷ ಅಡ್ವಾನ್ಸ್ ಎಂದು 20 ಲಕ್ಷ SLN ಟ್ರಸ್ಟಿಗೆ ಬಂದಿದೆ. ಅದೇ ರೀತಿ ಚಂದ್ರಭವನ್ ಹಾಗೂ ಅನ್ನಕುಟೀರ ಹೋಟೆಲ್ ಮಾಲೀಕರಿಂದಲೂ ನ್ಯಾಯವಾದ ರೇಟಿನ ಬಾಡಿಗೆ ವಸೂಲಿ ಮಾಡಲು ಟ್ರಸ್ಟಿನವರು ಹೊರಟಾಗ ಆ ಶನಿ ರಾಮಮೂರ್ತಿ ಮಾಡಿರುವ ವಂಚನೆಗಳು ಬೆಳಕಿಗೆ ಬಂದವು. ಧಾರ್ಮಿಕ ದತ್ತಿ ಇಲಾಖೆಯಲ್ಲಿ ಅಸಿಸ್ಟೆಂಟ್ ಕಮಿಷನರ್ ಆಗಿರುವ ರಾಮಮೂರ್ತಿ ವ್ಯಾಪ್ತಿಗೆ ಬೆಂಗಳೂರಿನ ಹಲವಾರು ದೇವಸ್ಥಾನಗಳು, SLN ಟ್ರಸ್ಟ್ ತರದ ಸಂಸ್ಥೆಗಳು ಸೇರಿವೆ. ಈ ರಾಮಮೂರ್ತಿ ತನ್ನ ಅಧಿಕಾರ ಬಳಸಿಕೊಂಡು ಚಂದ್ರಭವನ ಹಾಗೂ ಅನ್ನ ಕುಟೀರ ಹೋಟೆಲ್ ಮಾಲೀಕರಿಂದ ಲಂಚ ತಿಂದು ಚದರಡಿಗೆ ಜುಜುಬಿ 10 ರೂ.ನಂತೆ ಬಾಡಿಗೆ ಫಿಕ್ಸ್ ಮಾಡಿಸಿಬಿಟ್ಟಿದ್ದ.



ಬಿ.ಜಿ. ರಮೇಶ್

ಆ ಏರಿಯಾದಲ್ಲಿ ಇವತ್ತಿನ ರೇಟ್ ಚದರಡಿಗೆ ಮಿನಿಮಂ 50 ರೂಪಾಯಿ ಇದೆ ಅಂದರೆ SLN ಟ್ರಸ್ಟಿಗೆ ತಿಂಗಳಿಗೆಷ್ಟು ನಷ್ಟ ಯೋಚಿಸಿ ನೋಡಿ? ಈಗ ಬಿಜೆಪಿ ಸರ್ಕಾರ ಬಂದ ಮೇಲೆ SLN ಟ್ರಸ್ಟಿನ ಆಡಳಿತದಲ್ಲಿ ತಲೆ ಹಾಕುವ ಅಪಾಯಕಾರಿ ಬೆಳವಣಿಗೆಗಳಾಗುತ್ತಿವೆ. ಈ ಟ್ರಸ್ಟಿಗಿರುವ ಆಸ್ತಿಪಾಸ್ತಿ ಬಗ್ಗೆ ತಿಳಿದುಕೊಂಡಿರುವ ಮುಜರಾಯಿ ಮಂತ್ರಿ ಕೃಷ್ಣಯ್ಯ ಶೆಟ್ಟಿ ಕೀಳು ಜಾತಿ ಜನರ (SLN ಟ್ರಸ್ಟಿನ ಜನಾಂಗ) ಕೈಲಿ ಏನಾಗುತ್ತೆ ಎಂದು ಖಾಸಗಿಯಾಗಿ ಲೇವಡಿ ಮಾಡುತ್ತಾ ಪರಿಮಳ-ಪ್ರದೀಪ್ ಟಾಕೀಸ್ ನುಂಗಲು ಹೊರಟಿದ್ದಾನೆ. ಈ ಥೇಟರ್‌ಗಳು ಹಾಲಿ ನಾಗಮಂಗಲದ ನವೀನ್ ಚಂದ್ರ ಎಂಬುವರ ಕಂಟ್ರೋಲಿನಲ್ಲಿದ್ದು ಈಗ ಕೊಡುತ್ತಿರೊ ತಿಂಗಳ ಬಾಡಿಗೆ ಅತೀ ಹಳೆಯ ರೇಟಿನದ್ದು, ಜೊತೆಗೆ ಲೀಸ್ ಅವಧಿಯೂ ಮುಗಿದಿದೆ ಎನ್ನುತ್ತಾ ಟ್ರಸ್ಟಿನವರು ಬಾಡಿಗೆ ರೇಟು ಬದಲಾಯಿಸಲು ಕೇಳಿದ್ದಾರೆ. ಸದ್ಯಕ್ಕೆ ಈ ವಿಚಾರ ಈಗ ಕೋರ್ಟಿನಲ್ಲಿದೆ. ಈ ವಿಚಾರ ತಿಳಿದ ಕೃಷ್ಣಯ್ಯ ಶೆಟ್ಟಿ ಮಾಲೂರಿನ ತನ್ನ ಚೇಲಾ ಗೋಪಾಲ ಶೆಟ್ಟಿಯನ್ನು ಮುಂದಿಟ್ಟುಕೊಂಡು ಎರಡು ಥಿಯೇಟರ್‌ಗಳನ್ನು ತಾನೇ ಬೇನಾಮಿಯಾಗಿ ಕಡಿಮೆ ರೇಟಿಗೆ ಬಾಡಿಗೆ ಪಡೆಯಲು ಸ್ಕೆಚ್ ಹಾಕಿಕೊಂಡಿದ್ದಾನೆ. ಆದರೆ ಟ್ರಸ್ಟಿನ ಅಧ್ಯಕ್ಷ ರಮೇಶ್ ಹಾಗೂ ಮೆಂಬರ್‌ಗಳಾದ ಮೋಹನಮೂರ್ತಿ, ಆರ್. ವಿಶ್ವನಾಥ್, ಬಿ.ಎಂ. ಚಂದ್ರಶೇಖರ್, ಎಸ್. ವೆಂಕಟೇಶ್, ಎನ್. ದಿನೇಶ್, ಲಕ್ಷ್ಮೀನಾರಾಯಣ್, ವಿಜಯ ಕುಮಾರ್, ನಾಗರಾಜು, ರಾಜಶೇಖರ್, ಮುಂತಾದವರು ಕೃಷ್ಣಯ್ಯ ಶೆಟ್ಟಿಯ ಆಮಿಷ ಹಾಗೂ ಬೆದರಿಕೆಗಳಿಗೆ ಬಗ್ಗದಿದ್ದಾಗ ಈಗ ಶೆಟ್ಟಿ ತಂತ್ರಗಾರಿಕೆ ಶುರು ಮಾಡಿದ್ದಾನೆ. ಅದು ಟ್ರಸ್ಟಿಗೆ ವಿನಾಃಕಾರಣ ಹೊಸ ಸದಸ್ಯರನ್ನು ನೇಮಿಸಿ ತನ್ನ ಹತೋಟಿಗೆ ತಂದುಕೊಳ್ಳುವ ಪ್ರಯತ್ನವಿದು.

ಅದರ ಭಾಗವಾಗಿಯೇ ಈಗ ಇಲಾಖೆಯ ನುಂಗಣ್ಣ ರಾಮಮೂರ್ತಿಯನ್ನು SLN ಟ್ರಸ್ಟಿನ ಆಡಳಿತಾಧಿಕಾರಿಯಾಗಿ ಶೆಟ್ಟಿ ನೇಮಿಸಿದ್ದಾನೆ. ಸಿಕ್ಕಿದ್ದೇ ಛಾನ್ಸ್ ಎಂಬಂತೆ ಈ ರಾಮಮೂರ್ತಿ ಎಲ್ಲಾ ಸರ್ಕಾರಿ ನಿಯಮಗಳನ್ನು ಗಾಳಿಗೆ ತೂರಿ SLN ಟ್ರಸ್ಟಿನ ಆಸ್ತಿಗಳನ್ನು ಬೇಕಾಬಿಟ್ಟಿ ತನಗೆ ಬೇಕಾದವರಿಗೆ ಕೊಡಲು ಹೊರಟುಬಿಟ್ಟಿದ್ದಾನೆ.

ನಯವಂಚಕ ರಾಮಮೂರ್ತಿ ಟ್ರಸ್ಟಿನವರು ಹೊಸ ಶೈಕ್ಷಣಿಕ ಕೋರ್ಸುಗಳನ್ನು ಶುರು ಮಾಡಲು ಹಾಕಿಕೊಂಡಿದ್ದ ಯೋಜನೆಗಳಿಗೂ ಈಗ ಕಲ್ಲು ಹಾಕಲು ಹೊರಟಿದ್ದಾನೆ.

LLB ಕೋರ್ಸಿಗೆ ಅನುಮತಿ ನೀಡುವ ಸಂಬಂಧ ತಜ್ಞರ ತಂಡ ಕಾಲೇಜಿಗೆ ಭೇಟಿ ಕೊಟ್ಟಾಗ ಅವರಿಗೆ ಕನಿಷ್ಠ ಸಾರಿಗೆ ವ್ಯವಸ್ಥೆ ಊಟೋಪಚಾರಗಳಿಗೂ ಇವನು ಗಮನ ಕೊಟ್ಟಿರಲಿಲ್ಲ. ಕಂಪ್ಯೂಟರ್‌ಗೆ ಸಂಬಂಧಿಸಿದ BCA ಕೋರ್ಸ್‌ಗೆ ಪರ್ಮಿಷನ್ ಸಿಗುವ ಹಂತ ಬಂದಾಗ ಈ ಅವಿವೇಕಿ ಸಂಸ್ಥೆಗೆ ಈಗ ಕಟ್ಟಡ ಇಲ್ಲ, ಮುಂದಿನ ವರ್ಷ ನೋಡೋಣ ಎಂದು ಸಬೂಬು ಹೇಳಿ ಕಿರಿಕ್ ಮಾಡಿದ್ದಾನೆ. ಅಷ್ಟೇ ಅಲ್ಲದೆ ಟ್ರಸ್ಟಿನವರೇ ಲೆಕ್ಚರರ್‌ಗಳ ಸಂಬಳ ಜಾಸ್ತಿ ಮಾಡಲು ಹೊರಟಾಗಲು ಅಡ್ಡಗಾಲು ಹಾಕಿದ್ದಾನೆ. ಟ್ರಸ್ಟಿನ ಪೂರ್ಣ ಆಡಳಿತ ಮಂಡಳಿ ಮತ್ತೆ ಅಧಿಕಾರ ವಹಿಸಿಕೊಳ್ಳಲು ಇನ್ನು ಒಂದೆರಡು ತಿಂಗಳಾಗಬಹುದು. ಆದರೆ ಅಷ್ಟರಲ್ಲಿ ಈ ರಾಮಮೂರ್ತಿ ದೆಸೆಯಿಂದಾಗಿ ಸಂಸ್ಥೆಗೆ ಆಗಬಹುದಾದ ಹಾನಿಗೆ ಹೊಣೆ ಯಾರು?


ಕೃಷ್ಣಯ್ಯ ಶೆಟ್ಟಿ

ಜ್ಯೋತಿನಗರ ವೈಶ್ಯರ ಜನಾಂಗ ಸಂಖ್ಯೆಯಲ್ಲಿ ಚಿಕ್ಕದೇ ಇರಬಹುದು. ಆದರೆ ತಮಗಾಗಬಹುದಾದ ಅನ್ಯಾಯಗಳ ಬಗ್ಗೆ ಎಚ್ಚರಾಗಲು, ಅಂತ ದುಷ್ಟ ಪ್ರಯತ್ನಗಳನ್ನು ತಡೆಗಟ್ಟಲು ಹಿಂಜರಿಯ ಕೂಡದಲ್ಲವೆ?

ಸದ್ಯಕ್ಕೆ SLN ಟ್ರಸ್ಟಿನ ಆಡಳಿತಾಧಿಕಾರಿಯಾಗಿರುವ ರಾಮಮೂರ್ತಿ ಎಂಬ ಬಕಾಸುರನನ್ನು ನಂಬಿದರೆ ಆದಾಯ ಕಟ್ಟಿಟ್ಟ ಬುತ್ತಿ ಎಂಬುದು ಅವರಿಗೆ ಅರ್ಥವಾದರೆ ಸಾಕು. ■



ಬುರುಡೆ ಬಸವ ಶ್ರೀಧರ ಭಟ್ಟಾಚಾರ್ಯ

ಕರ್ನಾಟಕದಲ್ಲಿ ಒಂದರ ಹಿಂದೆ ಮತ್ತೊಂದು ಟಿವಿ ಚಾನೆಲ್‌ಗಳು ಆರಂಭವಾಗಿ ಅವುಗಳ ನಡುವೆ ನೆಲೆ ನಿಲ್ಲಲು ಸಾಕಷ್ಟು ಪೈಪೋಟಿ ನಡೆಯುತ್ತಿದೆ. ಈ ಪೈಪೋಟಿಯಲ್ಲಿ ಕವಡೆ ಜ್ಯೋತಿಷಿಗಳಿಗೂ, ಗಿಳಿ ಶಾಸ್ತ್ರ ಹೇಳುವವರಿಗೂ ಎಲ್ಲಿಲ್ಲದ ಡಿಮ್ಯಾಂಡು ಬಂದುಬಿಟ್ಟಿದೆ.

ಮೊದಲಾದರೆ ಉದಯ ಟೀವಿಯಲ್ಲಿ ಎಸ್.ಕೆ.ಜೈನ್ ಎಂಬಾತ ಮಾತ್ರ ಹಾಳೂರಿಗೆ ಉಳಿದವನೇ ಗೌಡ ಎಂಬಂತೆ ಮೆರೆಯುತ್ತಿದ್ದ. ವಾರಕ್ಕೊಮ್ಮೆ ಆತನ ಬಿಟ್ಟಿ ಉಪದೇಶಕ್ಕಾಗಿ ಜನ ಟೀವಿ ಮುಂದೆ ಹಾಜರಾಗುತ್ತಿದ್ದರು. ಆದರೆ ಈಗ ಬೆಳಗಾದರೆ ಸಾಕು, ಈಗಿರುವ ಏಳೆಂಟು ಚಾನೆಲ್‌ಗಳಲ್ಲೂ ತಲಾ ಒಬ್ಬೊಬ್ಬ ಜ್ಯೋತಿಷಿ ಬೋಂಡ್ ಬಿಡಲು ಆರಂಭಿಸುತ್ತಾನೆ. ಇವರ ಈ ಬೂಸಿ ಪುರಾಣಕ್ಕೆ ವಯ್ಯಾರಿ ಆ್ಯಂಕರುಗಳ ಒಗ್ಗರಣೆ ಬೇರೆ!

ಇವರುಗಳು ಬರೀ ಟಿವಿ ಮೇಲೆ ಬೊಗಳೆ ಬಿಟ್ಟು ಹೋಗಿದ್ದರೆ ಪರವಾಗಿರಲಿಲ್ಲ, ಆದರೆ ಈಗ ಅವರಲ್ಲಿ ಹಲವು ಪಾಖಂಡಿ ಜ್ಯೋತಿಷಿಗಳು ಇದೇ ಕಾಂಟ್ಯಾಕ್ಟುಗಳನ್ನು ಬಳಸಿಕೊಂಡು ಹೊರಗೂ ವ್ಯವಹಾರಕ್ಕಿಳಿದಿದ್ದಾರೆ. ಅಂತಹವರಲ್ಲಿ ಹೊಸ ಜ್ಯೋತಿಷಿ ಶ್ರೀಧರ ಭಟ್ಟಾ ಚಾರ್ಯನ ಹಾವಳಿಯಂತೂ ಮಿತಿಮೀರಿದೆ.

ಮೂಲತಃ ತಮಿಳುನಾಡಿನವನಾದ ಈ 420 ಮನುಷ್ಯನ ಮೊದಲ ಹೆಸರು ಯದುಸೆಲ್ವನ್ ಎಂದು. ಈಗ್ಗೆ ಕೆಲವೇ ವರ್ಷಗಳ ಹಿಂದಷ್ಟೇ ಆರ್.ಟಿ ನಗರದ ಗಣೇಶನ ದೇವಸ್ಥಾನದಲ್ಲಿ ಪೌರೋಹಿತ್ಯ ನಡೆಸಿಕೊಂಡಿದ್ದ ಈತ ಒಪ್ಪೊತ್ತಿನ ಊಟಕ್ಕೂ ಪರದಾಡುತ್ತಿದ್ದ. ಈತನ ಮಂಗಳಾರತಿ ತಟ್ಟೆಗೆ ಬೀಳುತ್ತಿದ್ದ ಕಾಸು ಜೀವನ ಸಾಗಿಸಲೂ ಸಾಕಾಗದಿದ್ದಾಗ ಈತ ಆರಂಭಿಸಿದ್ದೇ ಶಾಸ್ತ್ರ ಹೇಳುವ ಈ ಡೋಂಗಿ ಕಸುಬನ್ನು. ಹೀಗೆ ಶಾಸ್ತ್ರ ಹೇಳುವ ಸೈಡ್‌ಬ್ಯುಸಿನೆಸ್ ಅನ್ನು ಮಾಡಿಕೊಂಡಿದ್ದ ಈತನನ್ನು ಅದ್ಯಾರು ಟಿವಿ ಚಾನೆಲ್‌ನ ಕ್ಯಾಮೆರಾ ಮುಂದೆ ತಂದು ಕೂರಿಸಿದರೋ ಬೆಳಗ್ಗೆ ಎದ್ದು ತನ್ನ ಜ್ಯೋತಿಷ್ಯ ಕಾರ್ಯಕ್ರಮವನ್ನು ಪ್ರಾರಂಭಿಸುವ ಈತ ಚಾನೆಲ್‌ಗೆ ಕರೆ ಮಾಡುವವರನ್ನೇ ಹಿಡಿದು, ಅವರಿಗೆ ಮಂಕುಬೂದಿ ಎರಚಿ ಕೆಲ ತಿಂಗಳಲ್ಲೇ ಕೋಟಿಗಟ್ಟಲೆ ಆಸ್ತಿ ಮಾಡಿಕೊಂಡಿದ್ದಾನೆ. ಈ ಮಧ್ಯೆ ತನ್ನ ಹಳೆಯ ಯದುಸೆಲ್ವನ್ ಎಂಬ ಹೆಸರನ್ನು ಬದಲಿಸಿಕೊಂಡು ವೇದಬ್ರಹ್ಮ ಶ್ರೀ ಶ್ರೀಧರ ಭಟ್ಟಾಚಾರ್ಯ ಎಂಬ ಹೊಸ ಹೆಸರನ್ನು ಇಟ್ಟುಕೊಂಡಿದ್ದಾನೆ.

ಒಳ್ಳೆ ಹೆಣ್ಣೆಂಗಸಿನ ಹಾಗೆ ಮುಖಕ್ಕೆ ಮೇಕಪ್ ಸವರಿಕೊಂಡು, ಹಣೆ ತುಂಬಾ ನಾಮ ಬಳಿದುಕೊಂಡು ತನ್ನ ಮುಂದೊಂದು ಲ್ಯಾಪ್‌ಟಾಪ್ ಹಿಡಿದು ಕೂರುವ ಈ ವಂಚಕ ಜ್ಯೋತಿಷಿ ಹೇಳುವುದಾದರೂ ಎಂಥಾ ಭವಿಷ್ಯ ಗೊತ್ತೆ? ತನ್ನ ಲ್ಯಾಪ್‌ಟಾಪ್ ಕಂಪ್ಯೂಟರಿಗೆ ಬೆಂಗಳೂರಿನ ಎಸ್ಪಿ ರಸ್ತೆಯಲ್ಲಿ ಹತ್ತಿಪ್ಪತ್ತು ರೂಪಾಯಿಗೆ ಸಿಗುವ `astrology' ಸಿಡಿಯನ್ನು ಹಾಕಿರುತ್ತಾನೆ. ಕರೆ ಮಾಡುವ ವೀಕ್ಷಕರಿಂದ ಮೊದಲಿಗೆ ಅವರ ಜನ್ಮ ದಿನಾಂಕವನ್ನು ಕೇಳಿಕೊಂಡು ಅದನ್ನು ತನ್ನ ಕಂಪ್ಯೂಟರ್‌ಗೆ ಎಂಟ್ರಿ ಮಾಡುತ್ತಾನೆ. ತಕ್ಷಣ ಕಂಪ್ಯೂಟರ್ ಕರೆ ಮಾಡಿದ ವ್ಯಕ್ತಿಯ ರಾಶಿ, ಕುಂಡಲಿ ಇತ್ಯಾದಿ ವಿವರಗಳನ್ನು ತಿಳಿಸುತ್ತದೆ. ಹೀಗೆ ಮೊದಲೇ ಕಂಪ್ಯೂಟರ್‌ಗೆ ಫೀಡ್ ಮಾಡಿರುವ ಮಾಹಿತಿಯನ್ನೇ ಜನರಿಗೆ ಹೇಳಿ ತಾನೊಬ್ಬ ಪ್ರಖಾಂಡ ಪಂಡಿತನಂತೆ ಪೋಸು ಕೊಡುತ್ತಾನೆ. ಆದರೆ ಇದರ ಬಗ್ಗೆ ಗೊತ್ತಿರದ ಅಮಾಯಕ ಜನರು ಇವನು ನಿಜವಾಗಲೂ ವೇದ ಬ್ರಹ್ಮ ಎಂದು ನಂಬುತ್ತಾರೆ. ಬಕರಾಗಳಂತೆ ತಮ್ಮೆಲ್ಲ ವೀಕ್‌ನೆಸ್ಸುಗಳನ್ನು ಈತನ ಎದುರು ಒದರುತ್ತಾರೆ. ಸಾಲದೆಂಬಂತೆ ಈತನ ಖಾಸಗಿ ಅಡ್ಡೆಗೂ ಭೇಟಿ ಕೊಡುತ್ತಾರೆ. ಅಲ್ಲಿ ಈ ಅಡ್ಡಕಸುಬಿ ಭಟ್ಟಾಚಾರಿಯ ಎರಡನೇ ವರಸೆಯೂ ಆರಂಭವಾಗುತ್ತೆ.

ಆರ್.ಟಿ.ನಗರದಲ್ಲಿ ಈ ಪಾಕಡಾ ಭಟ್ಟಾಚಾರಿ ಮಾಡಿಕೊಂಡಿರುವ ಐಷಾರಾಮಿ ಆಫೀಸಿನ ಗೋಡೆಯ ಮೇಲೆಲ್ಲಾ ಈತ ಗಣ್ಯರೊಂದಿಗೆ, ಸ್ಟಾರ್‌ಗಳೊಂದಿಗೆ ನಿಂತು ತೆಗೆಸಿಕೊಂಡಿರುವ ದೊಡ್ಡ ದೊಡ್ಡ ಫೋಟೋಗಳನ್ನು ನೇತುಹಾಕಿದ್ದಾನೆ. ಇಂಥಾ ಗಣ್ಯರೇ ಬಂದು ಈತನಲ್ಲಿ ಜೋತಿಷ್ಯ ಕೇಳುತ್ತಾರೆಂದರೆ ಈತ ಪ್ರಖಾಂಡ ಪಂಡಿತನೇ ಇರಬೇಕೆಂದು ನಂಬುವ ಜನ ಭಟ್ಟಾಚಾರಿ ತೋಡಿರುವ ಗುಂಡಿಗೆ ಬೀಳುತ್ತಾರೆ.

ಹೀಗೆ ಅವರನ್ನು ತನ್ನ ಖೆಡ್ಡಾಕ್ಕೆ ಕೆಡುವಿಕೊಂಡ ನಂತರ "ಒಂದು ಲಕ್ಷ ರೂಪಾಯಿ ಕೊಟ್ಟರೆ ನಿಮ್ಮೆಲ್ಲ ತೊಂದರೆಯನ್ನು ನಿವಾರಿಸುತ್ತೇನೆ" ಎಂದು ಸುಳ್ಳು ಭರವಸೆಗಳನ್ನು ನೀಡಿ ಅವರಿಂದ ಹಣ ಕೀಳುತ್ತಾನೆ. ಆಗಲೇ ಭಯಗೊಂಡಿರುವ, ಧೃತಿಗೆಟ್ಟಿರುವ, ಈತನನ್ನು ನಂಬಿರುವ ಜನ ಈತ ಕೇಳಿದಷ್ಟು ಹಣ ತಂದು ಅವನ ಪಾದಕ್ಕೆ ಅರ್ಪಿಸುತ್ತಾರೆ. ಅವರಿಂದ ಹಣ ಪೀಕಿದ ನಂತರ ಅವರನ್ನು ಈ ಭಟ್ಟಾಚಾರಿ ಸೀದಾ ಶ್ರೀರಂಗಪಟ್ಟಣದ ಗೋಸಾಯಿ ಘಾಟ್‌ಗೆ ಕರೆದೊಯ್ದು, ನದಿಯ ಮಧ್ಯೆಯಿರುವ ದ್ವೀಪದಂಥಾ ಸ್ಥಳದಲ್ಲಿ ಕೂರಿಸಿ ಒಂದೂವರೆ ಗಂಟೆಗಳ ಕಾಲ ಪೂಜೆಯನ್ನು ಮಾಡಿ ಮುಗಿಸುತ್ತಾನೆ. ಅಲ್ಲಿಗೆ ಮೂರ್ಖ ಜನ ಕೊಟ್ಟ ಒಂದು ಲಕ್ಷಕ್ಕೆ ಭಟ್ಟಾಚಾರಿಯ ಕ್ಷೌರದ ಕೆಲಸ ಸಮಾಪ್ತಿಗೊಳ್ಳುತ್ತದೆ. ಇದಾದನಂತರ ಮತ್ತೊಬ್ಬ ಬಕರಾ ಗಿರಾಕಿಯನ್ನು ಹುಡುಕುವ ಭಟ್ಟಾಚಾರಿಯ ದಂಧೆ ನಿರಾತಂಕವಾಗಿ ಮುಂದುವರೆಯುತ್ತಿದೆ.


ಈ ಬುರುಡೆ ದಾಸನ ವಂಚನೆ ಇಷ್ಟಕ್ಕೇ ಸೀಮಿತವಾಗಿಲ್ಲ. ಒಂದು ಲಕ್ಷ ಕೊಡುವ ತಾಕತ್ತಿಲ್ಲದಿದ್ದರೇನು, ಹತ್ತು ಹಲವು ಸಾವಿರ ಬಿಚ್ಚುವವರನ್ನೂ ಈತ ಬಿಡುವುದಿಲ್ಲ. ಅವರಿಗೆಲ್ಲ "ತಿರುಪತಿಯಲ್ಲಿ ತಿಮ್ಮಪ್ಪನ ವಿಗ್ರಹಕ್ಕೆ ಲೇಪಿಸುವ ಅದೆಂಥದ್ದೋ ಪುನಗನ್ನು ನೀಡುತ್ತೇನೆ. ಅದನ್ನು ಮನೆಯಲ್ಲಿಟ್ಟರೆ ಯಾವ ತೊಂದರೆಯೂ ಬರುವುದಿಲ್ಲ, ಸಿಕ್ಕಾಪಟ್ಟೆ ಅದೃಷ್ಟ ಖುಲಾಯಿಸುತ್ತದೆ..." ಎಂದೆಲ್ಲಾ ಬುರುಡೆ ಬಿಟ್ಟು ಒಂದು ಪ್ಯಾಕೆಟ್ ಕೊಡುತ್ತಾನೆ. ಆ ಪ್ಯಾಕೆಟ್ ಬೆಲೆ ಕೇವಲ ಹದಿನೈದು ಸಾವಿರ ರೂಪಾಯಿ!

ಜನರಿಗೆ ಸುಳ್ಳು ಹೇಳುತ್ತಲೇ, ಅವರನ್ನೆಲ್ಲ ವಂಚಿಸುತ್ತಲೇ ಸಾಗಿರುವ ಈ ಶ್ರೀಧರ ಭಟ್ಟಾಚಾರಿ ಎಂಬ ಜ್ಯೋತಿಷಿಯಿಂದ ಅದೆಷ್ಟು ಜನ ನೆಮ್ಮದಿ ಕಂಡಿದ್ದಾರೋ, ಅದೆಷ್ಟು ಜನರ ಸಮಸ್ಯೆಗಳು ಪರಿಹಾರಗೊಂಡಿದ್ದಾವೋ ಗೊತ್ತಿಲ್ಲ, ಆದರೆ ಕೆಲ ವರ್ಷಗಳ ಹಿಂದೆ ಕೈಯಲ್ಲಿ ನಯಾಪೈಸೆ ಇಲ್ಲದೆ ಒದ್ದಾಡುತ್ತಿದ್ದ ಈ ಕಳ್ಳ ಭಟ್ಟಾಚಾರ್ಯನಂತೂ ತನ್ನ ಎಲ್ಲ ಸಮಸ್ಯೆಗಳನ್ನು ಬಗೆಹರಿಸಿಕೊಂಡಿದ್ದಾನೆ.

ಇವತ್ತು ಆತನ ಮಕ್ಕಳು ಸಾಹುಕಾರರ ಮಕ್ಕಳು ಹೋಗುವ ಪ್ರತಿಷ್ಠಿತ ಪೂರ್ಣಪ್ರಜ್ಞಾದಂತಹ ದುಬಾರಿ ಶಾಲೆಯಲ್ಲಿ ಓದುತ್ತಿದ್ದಾರಲ್ಲದೆ ಸ್ವತಃ ಭಟ್ಟಾಚಾರಿ ಸ್ವಂತ ಮನೆಯಲ್ಲಿ ವಾಸಿಸುತ್ತಾ ದುಬಾರಿ ಕಾರಿನಲ್ಲಿ ಜೂಂ ಅಂತ ಓಡಾಡುತ್ತಿದ್ದಾನೆ!!

■ ಅರುಣ್.ಜಿ

ಎಲ್ಲಾ ಟಿಆರ್‌ಪಿಗಾಗಿ



ಟಿವಿ ಚಾನೆಲ್‌ನವರು ಇವತ್ತು ಲಕ್ಷಗಟ್ಟಲೆ ಹಣ ಖರ್ಚುಮಾಡಿ ನಿರ್ಮಿಸುತ್ತಿರುವ ರಿಯಾಲಿಟಿ ಶೋಗಳೂ ಜನರಿಗೆ ಈಗ ಬೋರ್ ಹೊಡೆಸುತ್ತಿವೆ. ಏಕತಾನತೆಯಿಂದಾಗಿ ಇನ್ನು ಕೆಲ ಬೆರಳೆಣಿಕೆಯ ಧಾರಾವಾಹಿಗಳನ್ನು ಬಿಟ್ಟರೆ ಮತ್ತಾವುದೂ ಪ್ರೇಕ್ಷಕರನ್ನು ಹಿಡಿದು ಟೀವಿ ಮುಂದೆ ಕೂರಿಸುತ್ತಿಲ್ಲ. ಆದರೆ ಈ ನಕಲಿ ಜ್ಯೋತಿಷಿಗಳ ಬುರುಡೆ ಪುರಾಣಗಳಿಗಂತೂ ಸಿಕ್ಕಾಪಟ್ಟೆ ಟಿಆರ್‌ಪಿ ಇದೆ. ಈ ಕಾರಣಕ್ಕೇ ಚಾನೆಲ್‌ನವರು ತಮ್ಮ ಅಸ್ತಿತ್ವಕ್ಕಾಗಿ ನಡೆಸುತ್ತಿರುವ ಪೈಪೋಟಿಯಲ್ಲಿ ಈ ಸುಳ್ಳುಬುರುಕರ ಮೊರೆ ಹೋಗಿದ್ದಾರೆ. ಅವರಿಗೆ ಗಂಟೆಗೆ ಲಕ್ಷಗಟ್ಟಲೆ ಸಂಭಾವನೆ ನೀಡಿ ಕೃತಾರ್ಥರಾಗುತ್ತಿದ್ದಾರೆ.

ಹೋಮ ಹವನಗಳನ್ನೇ ನಂಬುವ ಯಡ್ಡಿ ಎಂಬ ಮುಖ್ಯಮಂತ್ರಿ ಅಧಿಕಾರ ಹಿಡಿದಿರುವಾಗ, ವಾಸ್ತುವನ್ನೇ ನಂಬುವ ಸಚಿವ ಸಂಪುಟ ಇರುವಾಗ, ಸಾಮಾನ್ಯ ಜನರೂ ತಮ್ಮ ಸಮಸ್ಯೆಗಳಿಗೆ ದೇವರು ದಿಂಡರು ಎಂದು ಬಲಿಪಶುಗಳಾಗುತ್ತಿರುವಾಗ, ಎಚ್ ಎನ್ ತರಹದ ವಿಚಾರವಾದಿಗಳು ಕಣ್ಮರೆಯಾಗಿರುವಾಗ, ಶ್ರೀಧರ ಭಟ್ಟಾಚಾರ್ಯನಂತಹ ಖದೀಮರಿಗೆ ಇದು ಹೇಳಿಮಾಡಿಸಿದಂತಹ ಕಾಲವಾಗಿರುವುದೇ ಈ ರಾಜ್ಯದ ದುರಂತ..... ■

ಮಹೇಂದ್ರ ಕುಮಾರ್ ಎಂಬ ಕ್ರಿಮಿ

ಈತನ ಹೆಸರು ಮಹೇಂದ್ರ ಕುಮಾರ್. ಭಜರಂಗ ದಳದ ಸೋಕಾಲ್ಡ್ ನಾಯಕ. ಈತ ಬಾಯ್ಬಿಟ್ಟರೆ ದೇಶಪ್ರೇಮ, ಹಿಂದೂ ಪ್ರೇಮ, ರಾಷ್ಟ್ರದ ಸಂಸ ತಿಯ ರಕ್ಷಣೆಗಳ ಬಗ್ಗೆ ಮುಂಖಾನುಮುಂಖವಾಗಿ ಆವೇಶಭರಿತನಾಗಿ ಮಾತನಾಡುತ್ತಾನೆ. ಆದರೆ ಈತನೊಳಗಿರುವುದು ಬರೀ ದಗಲ್ಬಾಜಿತನ.

ಮಹೇಂದ್ರ ಕುಮಾರ್ ಮೂಲತಃ ಚಿಕ್ಕಮಗಳೂರು ಜಿಲ್ಲೆಯ ಕೊಪ್ಪದವನು. ಒಂದು ಕಾಲದಲ್ಲಿ ತಿನ್ನಲಿಕ್ಕೆ ಮೂರು ಹೊತ್ತಿನ ಊಟಕ್ಕೂ ಗತಿಯಿಲ್ಲದ ಪರಿಸ್ಥಿತಿಯಲ್ಲಿತ್ತು ಈತನ ಕುಟುಂಬ. ತಂದೆ ರಾಮೇಗೌಡ್ರು ಶೆಟ್ಟರ ಜಾತಿಗೆ ಸೇರಿದವರನ್ನು ಮದುವೆಯಾಗುವ ಮೂಲಕ ಅಂತರ್ಜಾತಿ ವಿವಾಹವಾಗಿ ಜಾತ್ಯತೀತ ಮೌಲ್ಯಗಳನ್ನು ಮೆರೆದವರು. ಮೈತುಂಬ ಬಡತನವಿದ್ದರೂ ಅಲ್ಲಿ ಇಲ್ಲಿ ಕೂಲಿನಾಲಿ ಮಾಡಿ ಕಷ್ಟಪಟ್ಟು ಸಂಸಾರ ಸಾಗಿಸುತ್ತಿದ್ದರು. ಇಂಥ ಅಪ್ಪ-ಅಮ್ಮಂದಿರಿಗೆ ಎಂಥ ಸಮಾಜಘಾತುಕ ಮಗ ಹುಟ್ಟಿದ ಅಂದರೆ ಅಚ್ಚರಿಯಾಗುತ್ತದೆ.

ರಾಮೇಗೌಡ್ರಿಗೆ ನಾಲ್ಕು ಜನ ಮಕ್ಕಳು. ಮಹೇಂದ್ರ ಕುಮಾರ್‌ನನ್ನು ಬಿಟ್ಟರೆ ಉಳಿದವರ್‍ಯಾರೂ ಸಮಾಜಘಾತುಕರಲ್ಲ. ಅಣ್ಣಂದಿರಾದ ಪ್ರವೀಣ ಮತ್ತು ಸತೀಶ ತಾವಾಯಿತು ತಮ್ಮ ಕೆಲಸವಾಯಿತು ಎಂದು ಜೀವನ ಸಾಗಿಸುತ್ತಿರುವ ಸಭ್ಯರು. ಒಬ್ಬ ತಂಗಿಯಿದ್ದಾಳೆ. ಆಕೆಯೂ ಅಪ್ಪ-ಅಮ್ಮಂದಿರಂತೆ ಸುಸಂಸ್ಕೃತೆ. ಇಂತಹ ಕುಟುಂಬಕ್ಕೆ ಒಂದು ಕಪ್ಪು ಚುಕ್ಕೆಯಂತಿರುವವನೇ ಈ ಮಹೇಂದ್ರ ಕುಮಾರ್.

ಆವತ್ತು ಮುಸ್ಲಿಮರೇ ರಕ್ಷಿಸಿದ್ದರು!

ಏಳನೇ ತರಗತಿಯಲ್ಲಿಯೇ ಫೇಲಾಗಿ ಸ್ಕೂಲಿನಿಂದ ಡ್ರಾಪ್‌ಔಟ್ ಆದ ಈತ ಚಿಕ್ಕ ಬಾಲಕನಿದ್ದಾಗಲೇ ಬಾಂಬೆ ಸೇರಿಕೊಂಡು ಕರ್ನಾಟಕದ ಕರಾವಳಿ ಜನರು ಅಲ್ಲಿ ನಡೆಸುವ ಹೋಟೆಲ್‌ಗಳಲ್ಲಿ ತಟ್ಟೆ, ಲೋಟ ತೊಳೆಯುವ ಕೆಲಸ ಮಾಡಿಕೊಂಡಿದ್ದ. ಆಮೇಲೆ ಲೇಡಿಸ್ ಬಾರ್‌ನಲ್ಲಿ ಕ್ಲೀನರ್ ಆಗಿ ಪ್ರಮೋಶನ್ ಪಡೆದುಕೊಂಡ. ಮೊದಲೇ ತಿಕ್ಕಲು ಮನುಷ್ಯ. ಬಾಂಬೆಯಲ್ಲಿ ಆಗ ಉತ್ತುಂಗದಲ್ಲಿದ್ದ ರೌಡಿಸಂನ ಅಮಲನ್ನು ಏರಿಸಿಕೊಂಡು ಮಾಡಬಾರದ ಕಿತಾಪತಿಗಳನ್ನು ಮಾಡಿದ್ದ. ಕೊನೆಗೆ ಅಲ್ಲಿನ ಜನರಿಂದ ತಿನ್ನಬಾರದ ಜಾಗದಲ್ಲೆಲ್ಲಾ ಒದೆ ತಿಂದು ಸತ್ತೆನೋ ಕೆಟ್ಟೆನೋ ಎಂದು ಮರಳಿ ಮಣ್ಣಿಗೆ ಬಂದ.

ಬಾಂಬೆಯಿಂದ ಕೊಪ್ಪಕ್ಕೆ ರಿಟರ್ನ್ ಆಗುತ್ತಿದ್ದಂತೆಯೇ ಕೋರಿ ರೊಟ್ಟಿ ತಯಾರಿಸಿ ಅಂಗಡಿಗಳಿಗೆ ಸಪ್ಲೇ ಮಾಡುವ ಪುಟ್ಟ ಬಿಸಿನೆಸ್ ಶುರುಹಚ್ಚಿಕೊಂಡ. ಅದಕ್ಕಾಗಿ ಯಾವ್ಯಾವುದೋ ಫೈನಾನ್ಸ್‌ಗಳಲ್ಲಿ ದುಡ್ಡು ಎತ್ತಿ ಅವರಿಗೂ ತಿರುಪತಿ ನಾಮ ತಿಕ್ಕಿದ. ರೊಟ್ಟಿ ತಯಾರಿಸುವ ಕೆಲಸಕ್ಕಾಗಿ ಒಬ್ಬ ಹೆಲ್ಪರ್‌ನನ್ನೂ ಇಟ್ಟುಕೊಂಡಿದ್ದ. ಕಿತಾಪತಿ, ರೌಡಿಸಂ, ಮಂಗಾಟಗಳಲ್ಲಿ ನಿಸ್ಸೀಮನಾಗಿದ್ದ ಈತ ಒಂದು ದಿನ ಹೆಲ್ಪರ್ ಹುಡುಗನ ಮೇಲೆಯೇ ಜಗಳಕ್ಕೆ ಬಿದ್ದು ಅವನಿಗೆ ಮನಬಂದಂತೆ ಥಳಿಸಿದ್ದ. ಆ ಹುಡಗನೂ ಸುಮ್ಮನಿರಲಿಲ್ಲ. ಪಕ್ಕದ ಸೂರ್ಯದೇವಸ್ಥಾನ ಎಂಬ ಊರಿನಿಂದ ಹತ್ತಾರು ಜನರನ್ನು ಕಟ್ಟಿಕೊಂಡು ಬಂದು ನಡುಬೀದಿಯಲ್ಲಿ ಮಹೇಂದ್ರ ಕುಮಾರ್‌ನ ಬಟ್ಟೆ ಕಳಚಿ ಸಿಕ್ಕ ಸಿಕ್ಕಲ್ಲೆಲ್ಲಾ ಬಾರಿಸಿ ಪಕ್ಕದ ಕಾಲುವೆಯಲ್ಲಿ ಎಸೆದು ಹೋಗಿದ್ದ.

ಒದೆ ತಿಂದು ಸಾವು-ಬದುಕಿನ ಮಧ್ಯೆ ಹೋರಾಡುತ್ತಿದ್ದ ಇವನನ್ನು ಕೆಲವು ಮುಸ್ಲಿಮ್ ಯುವಕರೇ ಎತ್ತಿಕೊಂಡು ಹೋಗಿ ಆಸ್ಪತ್ರೆಗೆ ದಾಖಲಿಸಿದ್ದರು. ಆವತ್ತೇನಾದರೂ ಇವನನ್ನು ಹಾಗೇ ಕಾಲುವೆಯಲ್ಲಿ ಬಿಟ್ಟಬಿದ್ದಿದ್ದರೆ ಇವತ್ತು ಮಹೇಂದ್ರಕುಮಾರ್ ಎಂಬ ಸಮಾಜಘಾತುಕ ಕ್ರಿಮಿಯ ಉಪದ್ರವವಿರುತ್ತಿರಲಿಲ್ಲ. ಆ ಹೊತ್ತು ತನ್ನನ್ನು ರಕ್ಷಿಸಿದ್ದ ಅದೇ ಮುಸ್ಲಿಮರ ಮೇಲೆ ಈಹೊತ್ತು ಅದೆಷ್ಟರ ಮಟ್ಟಿಗೆ ಈತ ದ್ವೇಷ ಬೆಳಸಿಕೊಂಡಿದ್ದಾನೆಂದರೆ ಮುಸ್ಲಿಮ್ ಸಮುದಾಯವನ್ನೇ ಸರ್ವನಾಶ ಮಾಡುವ ಪಣತೊಟ್ಟಿದ್ದಾನೆ.

ಈ ನಡುವೆ ಭಜರಂಗದಳ ಎಂಬ ದರೋಡೆಕೋರರ, ಸ್ಮಗ್ಲರ್‌ಗಳ, ಗಂಧಕಳ್ಳರ ಗುಂಪಿನ ಸಂಪರ್ಕಕ್ಕೆ ಬಂದ ಮಹೇಂದ್ರ ಕುಮಾರ್ ಅದರ ಸಕ್ರಿಯ ಕಾರ್ಯಕರ್ತನಾದ. ಇವನ ವ್ಯಕ್ತಿತ್ವಕ್ಕೂ, ಭಜರಂಗದಳದ ಸ್ವಭಾವಕ್ಕೂ ಹೇಳಿಮಾಡಿಸಿದಂತಿತ್ತು. ತನ್ನ ದಗಲ್ಬಾಜಿ ದಂಧೆಗಳಿಗೆ ಭಜರಂಗದಳ ಎಂ[...] ಉತ್ತಮ ಕವರ್ ಸಿಕ್ಕಂತಾಗಿ ಪಶ್ಚಿಮ ಘಟ್ಟದ ಮಲೆನಾಡಿನಲ್ಲಿ ಹೇರಳವಾಗಿರು[...] ಗಂಧದಮರಗಳ ಕಳ್ಳಸಾಗಾಣಿಕೆಯನ್ನು ಶುರುಹಚ್ಚಿಕೊಂಡ.

ಅದು ಅಚ್ಚರಿ ಮೂಡಿಸುವ ವಿಷಯವೇನಲ್ಲ ಬಿಡಿ. ಏಕೆಂದ[...] ಭಜರಂಗದಳದ ಬಹುತೇಕ ನಾಯಕರು ಇದೇ ದಂಧೆಯಲ್ಲಿ ತೊಡಗಿದ[...] ಒಂದು ಕಾಲದಲ್ಲಿ ಅನ್ನಕ್ಕೂ ಗತಿಯಿಲ್ಲದವರು ಆಗರ್ಭ ಶ್ರೀಮಂತರಾ[...] ಬೆಳೆದಿರುವುದನ್ನು ಈತ ಕಣ್ಣಾರೆ ಕಂಡಿದ್ದ. ಆದ್ದರಿಂದ ಈತನೂ ಸಹಜವಾಗಿಯೇ ತನ್ನನ್ನು ಕಳ್ಳಸಾಗಾಣಿಕೆಯಲ್ಲಿ ತೊಡಗಿಸಿಕೊಂಡ.

ಭಜರಂಗದಳ ಮೊದಲೇ ಪುಂಡರ ಗುಂಪು. ಅದಕ್ಕೆ ರಾಷ್ಟ್ರಪ್ರೇಮ, ಹಿಂದೂಪ್ರೇಮ, ಸಂಸ ತಿ ರಕ್ಷಣೆ ಮುಂತಾದ ಲೇಪನ ಬೇರೆ ಇದೆ. ಅದ[...] ಅಲ್ಲದೇ ಆರ್‌ಎಸ್‌ಎಸ್ ಮತ್ತು ಬಿಜೆಪಿಗಳ ನೇರ ಆಶ್ರಯವಿದ್ದುದರಿಂ[...] ಅರಣ್ಯ ಇಲಾಖೆಯ ಅಧಿಕಾರಿಗಳಾಗಲೀ, ಪೊಲೀಸರಾಗಲೀ ಇವರ ತಂಟೆ[...] ಬರುವುದಿಲ್ಲ.

ಕಾರ್ಕಳದ ಮಾಜಿ ಎಮ್ಮೆಲ್ಲೆಯಾಗಿರುವ ಸುನೀಲ್ ಕುಮಾರ್ ಆವ[...] ಭಜರಂಗದಳದ ಜಿಲ್ಲಾ ಸಂಚಾಲಕನಾಗಿದ್ದ. ಆತ ಮಹೇಂದ್ರ ಕುಮಾರ್[...] ಪುಂಡಾಟಿಕೆಗಳನ್ನು ನೋಡಿ ಇಂಪ್ರೆಸ್ ಆಗಿ ಅವನನ್ನು ಭಜರಂಗದಳ[...] ಕೊಪ್ಪ ತಾಲ್ಲೂಕು ಸಂಚಾಲಕನನ್ನಾಗಿ ನೇಮಿಸಿದ. ಅಲ್ಲಿಂದಾಚೆಗೆ ಅ[...] ನಿರೀಕ್ಷೆಗಿಂತಲೂ ಮಿತಿಮೀರಿ ಬೆಳೆಯಲಾರಂಭಿಸಿದ.

ಬಾಯಿಬಿಟ್ಟರೆ ಹಿಂದೂ ಧರ್ಮ, ಸಂಸ ತಿ, ಭಾರತೀಯ ನಾರಿ ರಕ್ಷ[...] ಎಂದೆಲ್ಲಾ ಬೊಬ್ಬಿಡುವ ಇದೇ ಮಹೇಂದ್ರ ಕುಮಾರ್ ವೈಯಕ್ತಿಕವಾ[...] ಅದೆಷ್ಟು ಡಿಜನರೇಟೆಡ್ ಎಲಿಮೆಂಟ್ ಅ,ದರೆ -ಪ್ರೀತಿ-ಪ್ರೇಮ[...] ನಾಟಕವಾಡುತ್ತಾ, ಮದುವೆಯಾಗುತ್ತೇನೆಂಬ ಭರವಸೆ ನೀಡುತ[...] ಹುಡುಗಿಯರನ್ನು ಬುಟ್ಟಿಗೆ ಹಾಕಿಕೊಂಡು ನಂತರ ಕೈಕೊಡುವುದ[...] ಇವನ ಖಯಾಲಿ. ಜಯಪುರ-ಕೊಪ್ಪಗಳ ನಡುವಿನ ಊರೊಂದರ[...] ಶಿಕ್ಷಕಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಮಹಿಳೆಯೊಬ್ಬಳನ್ನು ಇದ[...] ರೀತಿ ಚೀಟ್ ಮಾಡಿ ರಾದ್ಧಾಂತ ಮಾಡಿಕೊಂಡಿದ[...] ಈತನಿಂದ ಮೋಸ ಹೋದ ಆ ಹುಡುಗಿ ಕೊನೆ[...] ಬ್ರಹ್ಮಕುಮಾರಿ ಸಂಸ್ಥೆ ಸೇರಿಕೊಂಡಳು.

ದಗಲ್ಬಾಜಿಗಳ ಸ್ಯಾಂಪಲ್‌ಗಳು

ಕರ್ನಾಟಕದ ಪಶ್ಚಿಮಘಟ್ಟ ಇಡೀ ವಿಶ್ವದಲ್ಲಿಯೆ[...] ಅತ್ಯಮೂಲ್ಯ ವನ್ಯಸಂಪತ್ತುಗಳಲ್ಲಿ ಒಂದಾಗಿದ್ದು ಅಮೂಲ[...] ವನ್ಯಜೀವಿಗಳ ತಾಣವಾಗಿದೆ. ಆದರೆ ಈ ಜೀವಿಗಳ[...] ಮಹೇಂದ್ರ ಕುಮಾರ್‌ನಂಥ ನಾಡಿನ ವೀರಪ್ಪನ್‌ಗಳಿಂದ[...] ಅಪಾಯದ ಅಂಚಿನಲ್ಲಿವೆ.

ನಿಮಗೆ ನೆನಪಿರಬಹುದು, ಈಗ್ಗೆ ಎಂಟು ವರ್ಷಗ[...] ಹಿಂದೆ ಕಾಡುಪ್ರಾಣಿಗಳ ಚರ್ಮಗಳನ್ನು ಸಾಗಿಸುತ್ತಿದ[...] ವಾಹನವೊಂದನ್ನು ಪೊಲೀಸರು ಹಿಡಿದಿದ್ದರು. ವಾಹನ[...] ಸಮೇತವಾಗಿ ಅರೆಸ್ಟ್ ಆಗಿದ್ದವರೆಲ್ಲರನ್ನೂ ಇದೇ[...] ಮಹೇಂದ್ರ ಕುಮಾರ್ ತನ್ನ ಪೊಲಿಟಿಕಲ್ ಪವರ್[...] ಬಳಸಿ ಬಿಡಿಸಿದ್ದ. ಸೀಜ್ ಆದ ವಾಹನದಿಂದ[...] ಕಾಡುಪ್ರಾಣಿಗಳ ಚರ್ಮಗಳನ್ನೆಲ್ಲಾ ಬೇರೆ ಕಡೆ ಸಾಗಿ[...] ಅದರಲ್ಲಿ ದನಗಳ ಚರ್ಮವನ್ನು ತುಂಬ ಇಡೀ ಕೇಸನ್ನೇ[...] ಮುಚ್ಚಿ ಹಾಕಿಬಿಟ್ಟರು. ಇನ್ನೂ ವಿಚಿತ್ರ ಎಂದರೆ ಇದೇ[...] ವಾಹನವನ್ನು ಬಾಬಾಬುಡನ್‌ಗಿರಿಯಲ್ಲಿ ಭಜರಂಗದಳ ನಡೆಸುವ[...] ದತ್ತಜಯಂತಿಯಲ್ಲಿ ದತ್ತನ ತೇರನ್ನಾಗಿ ಪರಿವರ್ತಿಸಲಾಗಿತ್ತು!

ಮಹೇಂದ್ರ ಕುಮಾರ್‌ನ ಸಾಹಸಗಾಥೆ ಇಷ್ಟಕ್ಕೇ ಮುಗಿಯು[...]ವುದಿಲ್ಲ. ಕೆಲವು ವರ್ಷಗಳ ಹಿಂದೆ ನಾರ್ವೆ ಎಂಬ ಹಳ್ಳಿಯಲ್ಲಿ ಶಿವರಾಮ್ ಎಂಬುವವರ ಕೊಲೆಯಾಗಿತ್ತು. ಅಸಲಿಗೆ ಕೊಲೆಯಾದ ಈ ಶಿವರಾಮ್ ಮಹೇಂದ್ರ ಕುಮಾರ್‌ನ ತಂಗಿಯ ಗಂಡನ ಅಣ್ಣ. ಜಮೀನು ವ್ಯವಹಾರದಲ್ಲಿ ಮಹೇಂದ್ರ ಕುಮಾರ್‌ನ ತಂಗಿಯ ಗಂಡನಿಗೂ ಮತ್ತು ಅವನ ಅಣ್ಣ ಶಿವರಾಮ್‌ಗೂ ಪರಸ್ಪರ ವಿರಸವುಂಟಾಗಿ ಅದು ಹಗೆತನವಾಗಿ ಮಾರ್ಪಟ್ಟಿತ್ತು. ಎಷ್ಟರಮಟ್ಟಿಗೆ ಎಂದರೆ ಕೊನೆಗೊಂದು ದಿನ ಶಿವರಾಮ್‌ನ ಹೆಣ ಉರುಳಿತ್ತು. ಆದರೆ ಆತನನ್ನು ಕೊಂದವರು ಯಾರು ಎಂಬುದು ಇವತ್ತಿಗೂ 'ನಿಗೂಢ'ವಾಗಿದೆ.

ಒಂದು ಕಾಲಕ್ಕೆ ತಿನ್ನಲೂ ಪರದಾಡುತ್ತಿದ್ದ ಮಹೇಂದ್ರ ಕುಮಾರ್ 'ಪವಾಡ'ವೆಂಬಂತೆ ಆಗರ್ಭ ಶ್ರೀಮಂತನಾಗಿ ಬೆಳೆದ, ಕೊಪ್ಪದಲ್ಲಿ ಒಂದು ಭವ್ಯವಾದ ಮನೆ ಕಟ್ಟಿಸಿದ. ವಾಸ್ತವದಲ್ಲಿ ಹೌಸಿಂಗ್ ಬೋರ್ಡ್‌ನ ಜಾಗವನ್ನು ಅಕ್ರಮವಾಗಿ ಅತಿಕ್ರಮಿಸಿ ಕಟ್ಟಿಸಿಕೊಂಡಿರುವ ಮನೆ ಇದು. ಆದರೆ ಮಹೇಂದ್ರ ಕುಮಾರ್‌ನ ಹಿಂದೆ ಭಜರಂಗದಳ ಎಂಬ ಪುಂಡರ ಗ್ಯಾಂಗ್ ಇರುವುದರಿಂದ, ಅದಕ್ಕೆ ಬಿಜೆಪಿಯ ಸಪೋರ್ಟ್ ಇರುವುದರಿಂದ ಯಾವೊಬ್ಬ ಅಧಿಕಾರಿಯೂ ಈತನಕ ಈ ಎನ್‌ಕ್ರೋಚ್‌ಮೆಂಟ್ ಬಗ್ಗೆ ತುಟಿ ಎರಡು ಮಾಡಿಲ್ಲ.

ಮಹಾ ಮತಾಂಧ

ಈ ಹಿಂದೆ ಜಯಪುರ ಮತ್ತು ಆಲ್ದೂರು ಮಸೀದಿಗಳ ಮೇಲೆ ರಾತ್ರೋರಾತ್ರಿ ಪಾಕಿಸ್ತಾನದ ಬಾವುಟ ನೆಟ್ಟು "ನೋಡಿ ಮುಸ್ಲಿಮರು ಪಾಕಿಸ್ತಾನದ ರಾಷ್ಟ್ರಧ್ವಜವನ್ನು ಮಸೀದಿಗಳ ಮೇಲೆ ಹಾರಿಸಿದ್ದಾರೆ, ಭಾರತದೊಳಗೆ ಮಿನಿ ಪಾಕಿಸ್ತಾನ ನಿರ್ಮಿಸಲು ಹೊರಟಿದ್ದಾರೆ" ಎಂದೆಲ್ಲಾ ಬೊಬ್ಬೆಯಿಟ್ಟು ದಾಂಧಲೆ ಎಬ್ಬಿಸಿದ್ದ. ಮಸೀದಿಯ ಮೇಲೆ ಪಾಕ್ ಧ್ವಜವನ್ನು ಇಟ್ಟು ಕಿತಾಪತಿ ಮಾಡಿದ್ದು ಮಹೇಂದ್ರ ಕುಮಾರ್‌ನೆ ಎಂಬುದು ಪೊಲೀಸರಿಗೂ ಗೊತ್ತಿತ್ತು. ಆದರೂ ಅವರು ಏನೂ ಕಿತ್ತುಕೊಳ್ಳಲಿಲ್ಲ.

▶▶▶

ಮಹೇಂದ್ರ ಕುಮಾರನ ಬಂಡವಾಳ

ಹಿಂದೂ ಹೋರಾಟಗಾರನಂತೆ ಪೋಸು ಕೊಡುತ್ತಿರುವ ಈ ಮಹೇಂದ್ರ ಕುಮಾರನ ಅಸಲಿ ಬಂಡವಾಳವೇನು ಎಂದು ನೋಡಿದರೆ ಅಚ್ಚರಿಯಾಗುತ್ತದೆ. ಯಾಕೆಂದರೆ ಇಷ್ಟೆಲ್ಲ ರಾದ್ಧಾಂತ ಸೃಷ್ಟಿಸಿರುವ ಈತನ ಬಂಡವಾಳ ಒಂದು ಲಡಕಾಸಿ ದ್ವಿಚಕ್ರ ವಾಹನ, ಕೆಲ ನಿರುದ್ಯೋಗಿ ಪುಂಡರು ಮತ್ತು ಹತ್ತಾರು ಕಲ್ಲುಗಳು, ಅಷ್ಟೆ.

ಕಳೆದ ತಿಂಗಳು ಒರಿಸ್ಸಾದಲ್ಲಿ ಕ್ರಿಶ್ಚಿಯನ್ ಸಮುದಾಯದ ಮೇಲೆ ನಡೆದ ದಾಳಿಗಳನ್ನು ಖಂಡಿಸುವುದಕ್ಕಾಗಿ ಕರ್ನಾಟಕದ ಎಲ್ಲಾ ಕ್ರಿಶ್ಚಿಯನ್ ಸ್ಕೂಲುಗಳು, ಸಂಸ್ಥೆಗಳೂ ಒಂದು ದಿನದ ರಜಾ ಘೋಷಿಸಿದ್ದವು. ಆಗ ಈ ಮಹೇಂದ್ರ ಕುಮಾರ್ ಪತ್ರಿಕಾ ಹೇಳಿಕೆ ಕೊಟ್ಟು "ಅವರು ಕೇವಲ ಒಂದು ದಿನ ರಜಾ ಘೋಷಿಸಿದ್ದಾರೆ. ನಾನು ರಾಜ್ಯದ ಎಲ್ಲಾ ಕ್ರಿಶ್ಚಿಯನ್ ಸಂಸ್ಥೆಗಳು ಇಡೀ ಒಂದು ವಾರ ರಜಾ ಘೋಷಿಸುವಂತೆ ಮಾಡುತ್ತೇನೆ" ಎಂದು ಧಮಕಿ ಹಾಕಿದ್ದ.

ಅದಾದ ಮರುದಿನವೇ ಸಂತ ಜೋಸೆಫ್ ಕಾನ್ವೆಂಟ್ ಶಾಲೆಗೆ ದಾಳಿಯಿಟ್ಟ. ತನ್ನ ಈ ಪರಾಕ್ರಮ ಎಲ್ಲರಿಗೂ ಗೊತ್ತಾಗಲಿ ಎಂದು ಅವತ್ತು ಮಾಧ್ಯಮದವರನ್ನೂ ಕರೆದಿದ್ದ. ಭಜರಂಗದಳವೆಂಬ ಪುಂಡರ ನಾಯಕ ಮಹೇಂದ್ರ ಕುಮಾರನೇ ಕರೆದಿದ್ದಾನೆಂದರೆ ಏನೋ ದೊಡ್ಡದ್ದು ಆಗಬಹುದೆಂಬ ನಿರೀಕ್ಷೆಯಿಂದ ಬಂದಿದ್ದ ಮಾಧ್ಯಮದವರಿಗೆ ಅಚ್ಚರಿ ಕಾದಿತ್ತು, ಯಾಕೆಂದರೆ ಅವತ್ತು ಈ ಮಂಗಗಳ ನಾಯಕನೊಂದಿಗೆ ಇದ್ದದ್ದು ಏಳೆಂಟು ನಿರುದ್ಯೋಗಿ ಪುಂಡರು ಮಾತ್ರ. ಅದನ್ನು ನೋಡಿ "ಏನ್ರೀ, ನಿಮ್ಮೊಂದಿಗೆ ಇರುವವರು ಇದಿಷ್ಟೇ ಜನಾನ? ನಿಮ್ಮಿಂದ ಏನು ಮಾಡಕ್ಕಾಗುತ್ತೆ?" ಎಂದು ಮಾಧ್ಯಮದವರು ಕೇಳಿಯೇ ಬಿಟ್ಟರು.

ಅದಕ್ಕವನು "ಇನ್ನು ಹತ್ತು ದಿನದಲ್ಲಿ ನಾವೇನು ಎಂಬುದನ್ನು ಮಾಡಿತೋರಿಸುತ್ತೇವೆ" ಎಂದು ಉತ್ತರಿಸಿದ್ದ. ಇದಾಗಿ ಸರಿಯಾಗಿ ಹತ್ತು ದಿನಕ್ಕೆ ಚಿಕ್ಕಮಗಳೂರು ಮತ್ತು ಮಂಗಳೂರು ಜಿಲ್ಲೆಗಳಲ್ಲಿ ಚರ್ಚ್‌ಗಳ ಮೇಲೆ ದಾಳಿ ನಡೆದವು.

ಹೇಳಿ ಕೇಳಿ ಇತ್ತೀಚೆಗೆ ಮಹೇಂದ್ರ ಕುಮಾರನೊಂದಿಗೆ ಮೊದಲಿದ್ದ ಯುವಕರ ಗುಂಪಿಲ್ಲ. ಯಾಕೆಂದರೆ ಈತನ ಸೋಗಲಾಡಿ ದೇಶಪ್ರೇಮದ ಬಗ್ಗೆ ಅರ್ಥಮಾಡಿಕೊಂಡ ಅದೆಷ್ಟೋ ಜನ ಈಗ ದೂರವಾಗಿದ್ದಾರೆ. ಆದರೂ ತನ್ನ 'ಶಕ್ತಿ'ಯನ್ನು ಮೆರೆಯಬೇಕಲ್ಲ. ಅದಕ್ಕೆ ಈತ ಏನು ಮಾಡಿದ್ದನೆಂದರೆ ಚಿಕ್ಕ ಪುಟ್ಟ ಹಳ್ಳಿಗಳಲ್ಲಿರುವ ನಿರುದ್ಯೋಗಿ ಮತ್ತು ಅನಕ್ಷರಸ್ಥ ಪುಂಡರಿಗೆ ಒಂದಿಷ್ಟು ಕಾಸು ಕೊಟ್ಟು, ಅವರಿಗೆ ಒಂದು ದ್ವಿಚಕ್ರ ವಾಹನ ಕೊಟ್ಟು ದಾಳಿ ಮಾಡಲು ಕಳುಹಿಸಿದ್ದ.

ಅವರಲ್ಲಿ ಕೆಲವರು ಇವತ್ತು ಕಂಬಿ ಎಣಿಸುತ್ತಿದ್ದಾರೆ. ಆದರೆ ನಿಜವಾಗಿ ಜೀರೋ ಆಗಿರುವ ಮಹೇಂದ್ರ ಕುಮಾರ್ ಹೀರೋ ಆಗಿ ಮೆರೆಯುತ್ತಿದ್ದಾನೆ.

ಪರಿಸ್ಥಿತಿಯ ವ್ಯಂಗ್ಯ ಎಂದರೆ ಇದೇ ಅಲ್ಲವೇ?



ಜೀವರಾಜ್‌ನೊಂದಿಗೆ ಠಕ್ಕರ್


ಇತ್ತೀಚೆಗೆ ಮಹೇಂದ್ರ ಕುಮಾರ್ ಸಂಘಪರಿವಾರದೊಳಗೇ ಹಿಂದುಗಟ್ಟಲೆ ಶತ್ರುಗಳನ್ನು ಸೃಷ್ಟಿಸಿಕೊಂಡಿದ್ದಾನೆ. ಈಗ ಅವರೆಲ್ಲ ಒಗ್ಗಟ್ಟಾಗಿ ಈತನನ್ನು ವ್ಯವಸ್ಥಿತವಾಗಿ ತುಳಿದು ಹಾಕುವುದಕ್ಕೆ ಪ್ರಯತ್ನಿಸುತ್ತಿದ್ದಾರೆ. ಅಂತಹವರಲ್ಲಿ ಶೃಂಗೇರಿಯ ಶಾಸಕ ಜೀವರಾಜ್ ಮೊದಲಿಗ.

ಕಳೆದ ವರ್ಷ ಕೋ-ಜಾ ಸರ್ಕಾರದಲ್ಲಿ ಬಿಜೆಪಿ ಅರ್ಧ ಅಧಿಕಾರ ಹಿಡಿದಿದ್ದರೂ ಶಾಸಕರನ್ನು ಗೆಲ್ಲಿಸುವುದಕ್ಕೆ ಗೂಂಡಾಗಿರಿಯಿಂದ 'ಶ್ರಮಿಸಿದ್ದ' ಭಜರಂಗ ದಳದ ಹುಡುಗರಿಗೆ ಶಾಸಕರು ಸೊಪ್ಪು ಹಾಕ್ತುತ್ತಿಲ್ಲ ಎಂದು ಮಹೇಂದ್ರ ಕುಮಾರ್ ತಕರಾರು ಎತ್ತಿದ್ದ. ಆಗಲೇ ಕರಾವಳಿ ಪ್ರದೇಶದ ಬಿಜೆಪಿ ನಾಯಕರು ಮುಂದಿನ ಬಾರಿಯ ಚುನಾವಣೆಯಲ್ಲಿ ಭಜರಂಗದಳದ ಪುಂಡರನ್ನು ಅವಲಂಬಿಸಬಾರದು ಎಂದು ನಿರ್ಧರಿಸಿದ್ದರು. ಇವರ ನಡುವಿನ ಭಿನ್ನಾಭಿಪ್ರಾಯ ಯಾವ ಮಟ್ಟಕ್ಕೆ ಹೋಗಿತ್ತೆಂದರೆ "ನಾವಿಲ್ಲದೆ ನೀವು ಹೇಗೆ ಗೆಲ್ಲುತ್ತೀರಿ ಅಂತ ನೋಡುತ್ತೇವೆ" ಎಂದು ಭಜರಂಗದಳ ಸವಾಲು ಹಾಕಿದ್ದರೆ, "ನೀವಿಲ್ಲದೆ ಗೆದ್ದು ತೋರಿಸುತ್ತೇವೆ" ಎಂದು ಚಡ್ಡಿ ನಾಯಕರು ಸೆಡ್ಡುಹೊಡೆದಿದ್ದರು.

ಇದಕ್ಕೆ ಸರಿಯಾಗಿ ಕಳೆದ ಚುನಾವಣೆಯಲ್ಲಿ ಮಹೇಂದ್ರ ಕುಮಾರ್ ಬಿಜೆಪಿಯ ಶೃಂಗೇರಿಯ ಶಾಸಕ ಜೀವರಾಜ್ ವಿರುದ್ಧ ಕಾಂಗ್ರೆಸ್ಸಿನ ಡಿ.ಬಿ.ಚಂದ್ರೇಗೌಡರಿಗೆ ಸಪೋರ್ಟ್ ಮಾಡಿದ್ದ. ಜೀವರಾಜ್‌ನನ್ನು ಸೋಲಿಸುವ ಮೂಲಕ ತನ್ನ ತಾಕತ್ತೇನೆಂದು ತೋರಿಸಲು ಹೊರಟಿದ್ದ. ಆದರೂ ಜೀವರಾಜ್ ಗೆದ್ದ. ಗೆದ್ದ ನಂತರ ಮಹೇಂದ್ರ ಕುಮಾರನನ್ನು ಮುಗಿಸಲು ತಂತ್ರ ರೂಪಿಸಲಾರಂಭಿಸಿದ. ಇದೆಲ್ಲದರಿಂದ ತಾನು ಮತ್ತು ತನ್ನ ಪುಂಡರ ಗುಂಪು ಶಾಶ್ವತವಾಗಿ ಮೂಲೆಗುಂಪಾಗುತ್ತೇವೆ ಎಂದು ಮಹೇಂದ್ರ ಕುಮಾರ್ ಹೆದರಿದ.

ಆದ್ದರಿಂದ ಒಂದಿಷ್ಟು ಗಲಾಟೆ, ಕೋಮು ಗಲಭೆ, ಅನ್ಯ ಕೋಮಿನವರ ರಕ್ತ ಹರಿಸಿದರೆ ತಾನು ದೇಶಭಕ್ತನಂತೆ ಪೋಸೂ ಕೊಡಬಹುದು, ತನ್ನನ್ನು ನಿರ್ಲಕ್ಷಿಸುತ್ತಿರುವ ಚಡ್ಡಿ ನಾಯಕರ ಗಮನವನ್ನೂ ಸೆಳೆಯಬಹುದು ಎಂದು ಲೆಕ್ಕ ಹಾಕಿದ. ಅದೆಲ್ಲ ಈಡೇರಲೆಂದೇ ಚರ್ಚ್‌ಗಳ ಮೇಲೆ ದಾಳಿ ಪ್ರಾರಂಭಿಸಿದ.

ಈಗ ಮಹೇಂದ್ರ ಕುಮಾರ್ ಹಿಂದೂ ಧರ್ಮದ ರಕ್ಷಕನಂತೆ ಬಿಂಬಿತನಾಗುತ್ತಿದ್ದಾನೆ. ಪಾಪ, ಶಾಸಕ ಜೀವರಾಜ್ ಕೈಕೈ ಹೊಸೆಯುತ್ತಾ ಮನೆಯಲ್ಲಿ ಕುಳಿತಿದ್ದಾನೆ.





ಹೆಬ್ಬೆಟ್ಟು ಗಿರಾಕಿಗೇನು ಗೊತ್ತು?

ಈ ಮಹೇಂದ್ರ ಕುಮಾರ್ ಹೆಚ್ಚೂ ಕಡಿಮೆ ಹೆಬ್ಬೆಟ್ ಗಿರಾಕಿ. ಏಳನೇ ಕ್ಲಾಸಿನಲ್ಲಿದ್ದಾಗಲೇ ಫೇಲಾಗಿ ವಿದ್ಯಾಭ್ಯಾಸಕ್ಕೆ ಇತಿಶ್ರೀ ಹಾಡಿದ ಇವನನ್ನು ಸಿಗಿದರೂ ಒಂದು ನೆಟ್ಟಗಿನ ಕನ್ನಡದ ಸಾಲು ಸಿಗುವುದಿಲ್ಲ. ಅಂಥದ್ದರಲ್ಲಿ ಇವನಿಗೆ ಈ ದೇಶದ ಕಾನೂನುಗಳ ಬಗ್ಗೆಯಾಗಲೀ, ನೀತಿ ನಿಯಮಗಳ ಬಗ್ಗೆಯಾಗಲೀ, ಸಂವಿಧಾನಗಳ ಬಗ್ಗೆಯಾಗಲೀ ಗೊತ್ತಿರುವುದಾದರೂ ಹೇಗೆ?

ಹಿಂದೂ ಸಂಸ್ಕೃತಿ, ಹಿಂದೂ ಪದ್ಧತಿ, ಹಿಂದೂ ಇತಿಹಾಸ ಎಂದೆಲ್ಲ ಅರಚುವ ಮಹೇಂದ್ರ ಕುಮಾರ ಕುವೆಂಪುರವರ ಪದ್ಯವೊಂದನ್ನು ಹೇಳಲಿ ನೋಡೋಣ. ಬೇಡ, ನಮ್ಮ ಸಂವಿಧಾನದ ಒಂದು ಸಾಲನ್ನು ಹೇಳಲಿ. ಅದೂ ಬೇಡ, ಭಾರತದ ಇತಿಹಾಸದ ಬಗ್ಗೆ ಒಂದು ಪ್ರಶ್ನೆಗೆ ಉತ್ತರಿಸಲಿ.

ಓದು ಗೊತ್ತಿರದ, ನಮ್ಮ ಪರಂಪರೆ ಗೊತ್ತಿರದ, ಪುಸ್ತಕ ಎಂದರೇನು ಎಂದು ತಿಳಿದಿರದ ಈ ಅಜ್ಞಾನಿ ಏನನ್ನು ರಕ್ಷಿಸುತ್ತಾನೆ?

ಈಗ್ಗೆ ಐದಾರು ವರ್ಷಗಳ ಹಿಂದೆ ನಿತ್ಯಾಧರ ಮಾತೆ ಕ್ಯಾಥೋಲಿಕ್ ಚರ್ಚ್ ಧರ್ಮಗುರುಗಳ ಮೇಲೂ ಹರಿಹಾಯ್ದು ಹಿಂದೂ ರಕ್ಷಕನಂತೆ ಮಿಂಚಲು ಪ್ರಯತ್ನಿಸಿದ್ದ. ಈ ಚರ್ಚಿನಲ್ಲಿ ಧರ್ಮಗುರುಗಳಾಗಿ ಕಾರ್ಯನಿರ್ವಹಿಸುತ್ತಿದ್ದ ಫಾದರ್ ಎಲಿಯಾಸ್ ಸಿಕ್ವೇರಾ ಎಂಬುವವರ ಬಗ್ಗೆ ಇಡೀ ಏರಿಯಾದಲ್ಲಿ ವಿಶೇಷ ಗೌರವವಿದೆ. ಹಿಂದೂ, ಮುಸ್ಲಿಮ್, ಕ್ರಿಶ್ಚಿಯನ್ನರೆನ್ನದೇ ಎಲ್ಲರೂ ಅವರನ್ನು ಅಪಾರವಾಗಿ ಗೌರವಿಸುತ್ತಾರೆ. ಹಲವತ್ತು ವರ್ಷದ ಆಸುಪಾಸಿನಲ್ಲಿರುವ ಈ ಫಾದರ್ ತಾನಾಯಿತು, ತನ್ನ ಧರ್ಮದ ಕೆಲಸ ವಾಯಿತು ಎಂದುಕೊಂಡಿದ್ದು ಸಾಧ್ಯವಾದಷ್ಟೂ ಜನರಿಗೆ ಸಹಾಯ ಮಾಡುವ ವ್ಯಕ್ತಿ.



ಆದರೆ ಈ ಮಹೇಂದ್ರ ಕುಮಾರ್ ಎಂಬ ಕಿಡಿಗೇಡಿ ಲಲಿತಮ್ಮ ಎಂಬ 65 ವರ್ಷ ವಯಸ್ಸಿನ ಮುಗ್ಧ ಅನಕ್ಷರಸ್ಥ ವೃದ್ಧೆಯನ್ನು ಮುಂದಿಟ್ಟುಕೊಂಡು ಈ ಫಾದರ್ ಮೇಲೆ ದಾಳಿ ನಡೆಸಲು ಪ್ರಯತ್ನಿಸಿದ. "ಫಾದರ್ ಎಲಿಯಾಸ್ ಸಿಕ್ವೇರಾ ನನ್ನನ್ನು ಬಲವಂತವಾಗಿ ಮತಾಂತರ ಮಾಡುವುದಕ್ಕೆ ಪ್ರಯತ್ನಿಸಿದ, ನನ್ನ ಮೇಲೆ ಅತ್ಯಾಚಾರ ಮಾಡುವುದಕ್ಕೆ ಪ್ರಯತ್ನಿಸಿದ" ಎಂಬಂತಹ ಆರೋಪಗಳನ್ನು ಲಲಿತಮ್ಮಳಿಂದ ಮಾಡಿಸಿ ಅದನ್ನೇ ನೆಪವಾಗಿಟ್ಟುಕೊಂಡು ಫಾದರ್ ಮೇಲೆ ದಾಳಿ ಮಾಡಲು ನೋಡಿದ. ಅವರನ್ನು ಬಂಧಿಸಬೇಕೆಂದು ಪೊಲೀಸರ ಮೇಲೆ ಒತ್ತಡ ತರಲಾರಂಭಿಸಿದ.

ಆದರೆ ಇವನ ಕುತಂತ್ರದ ವಿರುದ್ಧ ಅದೆಂತಹ ಸಾರ್ವಜನಿಕ ವಿರೋಧ ವ್ಯಕ್ತವಾಯಿತೆಂದರೆ, ಕೊಪ್ಪದ ಇತಿಹಾಸದಲ್ಲಿಯೇ ಕೇಳಿ ಕಂಡರಿಯದಷ್ಟು ಜನ ಹಿಂದೂ, ಮುಸ್ಲಿಮ್, ಕ್ರಿಶ್ಚಿಯನ್ನರು ಸಾಗರೋಪಾದಿಯಲ್ಲಿ ಹರಿದು ಬಂದು ದೊಡ್ಡ ಮಟ್ಟದ ಭಾವೈಕ್ಯತಾ ಸಮಾವೇಶವನ್ನು ಮಾಡಿದರು. ಆಶ್ಚರ್ಯ ಎಂದರೆ, ಈ ಸಮಾವೇಶವನ್ನು ಯಾವುದೇ ಒಂದು ಸಂಘಟನೆ ಯೋಜಿತವಾಗಿ ಸಂಘಟಿಸಿರಲಿಲ್ಲವಾದರೂ ಜನ ಸ್ವಯಂಪ್ರೇರಿತರಾಗಿ ನೆರೆದು ಮಹೇಂದ್ರ ಕುಮಾರ್‌ನನ್ನು ಬಂಧಿಸುವಂತೆ ಆಗ್ರಹಿಸಿದರು.

ಈ ಘಟನೆಯೊಂದಿಗೆ ಕೊಪ್ಪದಲ್ಲಿ ಮಹೇಂದ್ರ ಕುಮಾರ್‌ನ ಬಗ್ಗೆ ಇದ್ದ ಅಲ್ಪಸ್ವಲ್ಪ ಸಹಾನುಭೂತಿಯೂ ಹೊರಟು ಹೋಗಿ ಅವನೊಬ್ಬ ಕೆಟ್ಟ ಕ್ರಿಮಿ ಎಂದು ಸಾಮಾನ್ಯ ಜನ ಕೂಡ ಮಾತನಾಡಿಕೊಳ್ಳಲಾರಂಭಿಸಿಬಿಟ್ಟರು. ಇಂದಿಗೂ ಆತ ಹೊರಗೆ ಭಜರಂಗದಳದ ನಾಯಕನೆಂಬಂತೆ ಪೋಜು ಕೊಡುತ್ತಿದ್ದರೂ ಕೊಪ್ಪದಲ್ಲಿ ಮಾತ್ರ ಆತನನ್ನು ಕಾಲ ಕಸದಂತೆ ಜನ ಕಾಣುತ್ತಾರೆ. ಅವನಿಗೆ ಒಂದಿಷ್ಟು ಮರ್ಯಾದೆ ಕೊಟ್ಟು ಮಾತನಾಡಿಸುವವರೆಂದರೆ ಪೊಲೀಸರು ಮಾತ್ರ!

ತಾನು ಭಜರಂಗದಳದಲ್ಲಿ ಸಕ್ರಿಯವಾಗಿದ್ದಷ್ಟೂ ದಿನ ತನ್ನ ದೋ ನಂಬರ್ ದಂಧೆಗಳು ಸುಸೂತ್ರವಾಗಿ ಸಾಗುತ್ತವೆ; ಅವೆಲ್ಲಾ ಬಾಹ್ಯ ಪ್ರಪಂಚಕ್ಕೆ ಬಂದು ತಾನೊಬ್ಬ ಸ್ಮಗ್ಲರ್ ಎಂಬುದು ಜಗಜ್ಜಾಹೀರಾಗುವುದಿಲ್ಲ; ತನ್ನನ್ನು ಪೊಲೀಸರಾಗಲೀ, ಅರಣ್ಯಾಧಿಕಾರಿಗಳಾಗಲೀ, ಮುಟ್ಟುವುದಿಲ್ಲ ಎಂದು ಮಹೇಂದ್ರ ಕುಮಾರ್‌ಗೆ ಚೆನ್ನಾಗಿ ಗೊತ್ತಿದೆ. ಹಾಗಾಗಿಯೇ ಆತ ಭಜರಂಗದಳದಲ್ಲಿ ಮಿಂಚಲು ಪ್ರಯತ್ನಿಸುತ್ತಾನೆ. ಮತೀಯ ಅಲ್ಪಸಂಖ್ಯಾತರಾದ ಮುಸ್ಲಿಮರ ಮೇಲೆ, ಕ್ರಿಶ್ಚಿಯನ್ನರ ಮೇಲೆ ತಳಬುಡವಿಲ್ಲದ ಆರೋಪ ಹೊರಿಸಿ ದಾಳಿ ಮಾಡುತ್ತಾ ಸಮಸ್ತ ಹಿಂದೂಗಳ ಕಣ್ಣಿಗೆ ಮಹಾ ಹಿಂದೂಭಕ್ತನಂತೆ ಪೋಜು ಕೊಡಲು ಶ್ರಮಿಸುತ್ತಾನೆ.

ಮಹೇಂದ್ರ ಕುಮಾರ್ ಈಹೊತ್ತು ಇಷ್ಟೊಂದು ಸಮಾಜ ಘಾತುಕ ಶಕ್ತಿಯಾಗಿ ಬೆಳೆಯುವುದಕ್ಕೆ ಒಂದು ರೀತಿಯಲ್ಲಿ ಪೊಲೀಸರೇ ಕಾರಣ. ಗಂಧ ಸಾಗಾಣಿಕೆಯಲ್ಲಿ ಆತ ತೊಡಗಿರುವುದು ಗೊತ್ತಾದಾಗಲೇ ಏರೋಪ್ಲೇನ್ ಹತ್ತಿಸಿ ಜೈಲಿಗಟ್ಟಿದ್ದರೆ ಇವತ್ತು ಈತ ಇಷ್ಟು ಅನಾಹುತಕಾರಿಯಾಗಿ ಬೆಳೆಯುತ್ತಿರಲಿಲ್ಲ. ಈಗಲೂ ಕಾಲಮಿಂಚಿಲ್ಲ. ಪೊಲೀಸರು ಅವನಿಗೆ ಮೂಗುದಾರ ಹಾಕಿ ಹದ್ದುಬಸ್ತಿನಲ್ಲಿಡದಿದ್ದರೆ ಜನರೇ ಖುದ್ದಾಗಿ ಮಹೇಂದ್ರ ಕುಮಾರ್‌ನ ಜೊತೆಗೆ ಅವನಿಗೆ ಸಹಕರಿಸುತ್ತಿರುವ ಪೊಲೀಸರನ್ನೂ ಆಟಕಾಯಿಸಿಕೊಂಡರೆ ಅಚ್ಚರಿಯೇನಲ್ಲ.

■ ಕುಮಾರ್ ಬುರಡಿಕಟ್ಟಿ



ಭಜರಂಗದಳ ಎಂಬ ಕ್ರಿಮಿನಲ್‌ಗಳ ಹಿಂಡು

ಭಜರಂಗದಳ ಎಂಬ ಸಂಘಟನೆಯಲ್ಲಿ ನಾಯಕರಿಂದ ಹಿಡಿದು ಕಾರ್ಯಕರ್ತರ ತನಕ ಎಲ್ಲರೂ ಮಹಾನ್ ದೇಶಪ್ರೇಮಿಗಳ ತುಂಡುಗಳಂತೆ ವರ್ತಿಸುತ್ತಾರೆ. ಆದರೆ ಅಸಲಿಯತ್ತೇನೆಂದರೆ ಅವರಲ್ಲಿ ಬಹುಪಾಲು ಜನ ತಮ್ಮ ನಾಯಕ ಮಹೇಂದ್ರ ಕುಮಾರನಂತೆಯೇ ಒಂದಲ್ಲ ಒಂದು ರೀತಿಯಲ್ಲಿ ಕ್ರಿಮಿನಲ್ಲುಗಳಾಗಿದ್ದು ತಮ್ಮ ಕೃತ್ಯಗಳನ್ನು ಮುಚ್ಚಿ ಹಾಕುವುದಕ್ಕೋ ಅಥವಾ ತಮ್ಮ ದಗಲ್ಬಾಜಿ ದಂಧೆಗಳನ್ನು ಸುಸೂತ್ರವಾಗಿ ನಡೆಸಿಕೊಂಡು ಹೋಗುವುದಕ್ಕೋ ಈ ಸಂಘಟನೆ ಸೇರಿಕೊಂಡಿದ್ದಾರೆ.


ನಿಮಗೆ ನೆನಪಿರಬಹುದು, ಕೆಲ ತಿಂಗಳ ಹಿಂದೆ ಬೆಂಗಳೂರಿನಲ್ಲಿರುವ ಚಿಮ್ಮನೂರ್ ಜುವೆಲ್ಲರ್ಸ್ ಎಂಬ ಚಿನ್ನದ ಅಂಗಡಿಯನ್ನು ಹಾಡುಹಗಲೇ ದರೋಡೆ ಮಾಡಲಾಗಿತ್ತು. ಅದರ ತನಿಖೆ ನಡೆಸಿದಾಗ ಗೊತ್ತಾಗಿದ್ದೇನೆಂದರೆ ದರೋಡೆ ನಡೆಸಿದವರೆಲ್ಲರೂ ಭಜರಂಗದಳದ ಕಾರ್ಯಕರ್ತರೇ ಆಗಿದ್ದರು ಎಂಬುದು.

ಆ ದರೋಡೆಯಲ್ಲಿ ಭಾಗವಹಿಸಿ ಈಗ ಉಡುಪಿ ಸಬ್ ಜೈಲಿನಲ್ಲಿರುವ ಯುವರಾಜ ತಿಂಗಳಾಯ ಮತ್ತು ಮಧುಕರ ಪೂಜಾರಿ ಹಾರ್ಡ್‌ಕೋರ್ ಕ್ರಿಮಿನಲ್ಲುಗಳು ಮಾತ್ರವಲ್ಲ, ಅವರಿಬ್ಬರು ಭಜರಂಗದಳದ ಸಕ್ರಿಯ ಕಾರ್ಯಕರ್ತರಾಗಿರುವ ದೇಶ ಪ್ರೇಮಿಗಳು! ಅವರಿಬ್ಬರ ಮೇಲೆ ಈಗಲೂ ಅನೇಕ ರೀತಿಯ ಕೇಸುಗಳಿವೆ.

ಇವತ್ತು ಮಲೆನಾಡಿನಲ್ಲಿ ಶ್ರೀಗಂಧ, ತೇಗ, ಹೊನ್ನೆ, ಬೀಟೆ, ನಂದಿ, ಮತ್ತಿಗಳಂತಹ ಅಮೂಲ್ಯ ಮರಗಳು ಅದೃಶ್ಯವಾಗಿ ಕಾಣೆಯಾಗಿದೆ ಎಂದರೆ ಅದಕ್ಕೆ ಇಂತಹ ಭಜರಂಗಿಗಳೇ ನೇರ ಹೊಣೆಗಾರರು. ಸೌದೆಗಾಗಿ ಕಟ್ಟಿಗೆ ತರುವ, ಮಾವಿನಕಾಯಿ ಒಂದು ದಿನ ಆಹಾರಕ್ಕಾಗಿ ಬೇಟೆಯಾಡುವ ಗಿರಿಜನರು 'ಅರಣ್ಯ ಸಂಪತ್ತನ್ನು ನಾಶಮಾಡುತ್ತಿದ್ದಾರೆ' ಎಂದು ಆರೋಪಿಸಿ ಅವರ ಜೀವ ಹಿಂಡುವ ಇದೇ ಅರಣ್ಯ ಇಲಾಖೆ, ಭಜರಂಗದಳದ ನಾಯಕರು ನಡೆಸುವ ನಾಟಾ ಕಳ್ಳಸಾಗಾಣಿಕೆ, ವನ್ಯಮೃಗಗಳ ಚರ್ಮ ಕಳ್ಳಸಾಗಾಣಿಕೆಯಂತಹ ಕಾನೂನು ಬಾಹಿರ ಅರಣ್ಯ ಲೂಟಿಯಲ್ಲಿ ಶಾಮೀಲಾಗಿದೆ.

ಭಜರಂಗದಳ ಸೇರಿದರೆ ನಿರಾಂತಕವಾಗಿ ಅರಣ್ಯ ಲೂಟಿ ಮಾಡಬಹುದೆಂಬ ಅಭಿಪ್ರಾಯ ಇಡೀ ಮಲೆನಾಡಿನ ನಾಟಾಕಳ್ಳರಿಗೆ ಗೊತ್ತಿದ್ದು ಅವರೆಲ್ಲಾ ತಮ್ಮ ರಕ್ಷಣೆಗಾಗಿ ಭಜರಂಗದಳ ಸೇರುತ್ತಿರುವುದು ಹೊಸ ವಿದ್ಯಮಾನವೇನಲ್ಲ. ನಾವು ಈ ಮಂಗಗಳ ವೇಷಭೂಷ, ಸಾರಿ, 'ಶೀಲ'ದ ಪರಿ!

ಶಿಕಾರಿಪುರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಇಪ್ಪತ್ತೈದು ವರ್ಷಗಳ ಕೆಳಗೆ ವಾಣಿಜ್ಯಶಾಸ್ತ್ರ ಉಪನ್ಯಾಸಕನಾಗಿ ಬಂದ ಪ್ರೊಫೆಸರ್ ಜೆ.ಸಿ.ಹಾದಿಮನಿ ಈಗ ಪ್ರಿನ್ಸಿಪಾಲರಾಗಿ 'ಸಿಲ್ವರ್ ಜೂಬ್ಲಿ' ಸಂಭ್ರಮದಲ್ಲಿರುವುದೇ ಒಂದು ದುರಂತ ಕತೆ. ಸ್ಥಳೀಯ ಅತಿಥಿ ಉಪನ್ಯಾಸಕರಾಗಿದ್ದವರನ್ನು ಬೀದಿಪಾಲು ಮಾಡಿರುವುದೇ ಈತನ ಲೇಟೆಸ್ಟ್ ಕಥನ. ಇದಕ್ಕೆ ಯಡ್ಡಿ ಪುತ್ರ ರಾಘವೇಂದ್ರನ ಕುಮ್ಮಕ್ಕು ಇದೆ ಎಂಬುದೇ ಅಸಲಿ ವ್ಯಥೆ.



ರಾಘವೇಂದ್ರ

ಈ ಹಿಂದೆ ಅರೆಕಾಲಿಕ/ ಅತಿಥಿ ಉಪನ್ಯಾಸಕರ ನೇಮಕಾತಿಯನ್ನು ಕಾಲೇಜು ಶಿಕ್ಷಣ ಇಲಾಖೆಯ ಪ್ರಾದೇಶಿಕ ಜಂಟಿ ನಿರ್ದೇಶಕರು ಯುಜಿಸಿ ನಿಯಮಾವಳಿ ಪ್ರಕಾರ ರೋಸ್ಟರ್ ಪದ್ಧತಿ ಮೇಲೆ ಆಯ್ಕೆ ಮಾಡುತ್ತಿದ್ದರು.

ವರ್ಗಾವಣೆಯ ಲಿಸ್ಟನ್ನು ತಯಾರಿಸಿ, ವರ್ಗಾವಣೆ ಅಪೇಕ್ಷಿಸಿದವರಿಂದ ಒಂದಷ್ಟು ಹಣ ಸಂಗ್ರಹಿಸಿ, ಯಡ್ಡಿ ಸುಪುತ್ರ ರಾಘವೇಂದ್ರನಿಗೆ ಕಾಲೇಜಿನಲ್ಲಿ ಉಪನ್ಯಾಸಕರ ಕೊರತೆ ಇದೆ ಎಂದು ದುಂಬಾಲು ಬಿದ್ದರು.

ಈ ಸರ್ಕಾರಿ ಖೂಳರು ತೋಡಿದ ಖೆಡ್ಡಾದಲ್ಲಿ ಬಿದ್ದ ಯಡ್ಡಿ ಮಗ ತಡಮಾಡದೆ ವರ್ಗಾವಣೆಗೆ ಅಪ್ಪನ ಮೂಲಕ ಹಸಿರು ನಿಶಾನೆ ತೋರಿಸಿದ. ವಾಸ್ತವವಾಗಿ ಉಪನ್ಯಾಸಕರ ಕೊರತೆ ಪೂರ್ಣಕಾಲಿಕವಾಗಿ ಬೇಕಾಗಿರುವುದು ಇಂಗ್ಲಿಷ್, ಕಾಮರ್ಸ್, ಬಿ.ಸಿ.ಎ ಮತ್ತು ಬಿಎಸ್ಸಿ ವಿಭಾಗಗಳಿಗೆ. ದುರಂತವೆಂದರೆ ಯಾವ ವಿಭಾಗಗಳಿಗೆ ಜರೂರಾಗಿ ಅಗತ್ಯವಾಗಿತ್ತೋ ಆ ವಿಭಾಗಕ್ಕೆ ಉಪನ್ಯಾಸಕರನ್ನು ವರ್ಗ ಮಾಡಿಸದೆ, ಅಗತ್ಯವೇ ಇಲ್ಲದ ಕನ್ನಡ, ರಾಜ್ಯಶಾಸ್ತ್ರ ಅರ್ಥಶಾಸ್ತ್ರ ವಿಭಾಗಕ್ಕೆ ಹೆಚ್ಚುವರಿ ಉಪನ್ಯಾಸಕರನ್ನು ವರ್ಗಾ ಮಾಡಿಸಿಬಿಟ್ಟ ರಾಘವೇಂದ್ರ. ಈಗಾಗಲೇ ಈ ವಿಭಾಗಗಳಲ್ಲಿ 10ರಿಂದ 14 ಗಂಟೆ ಕಾರ್ಯಭಾರವಿರುವ ಕಾರಣ ಅತಿಥಿ ಉಪನ್ಯಾಸಕರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಅನಗತ್ಯವಾಗಿ ಕಾರ್ಯಭಾರವೇ ಇಲ್ಲದ ಪೂರ್ಣಕಾಲಿಕ ಕಾಯಂ ಉಪನ್ಯಾಸಕರನ್ನು ಬೇರೆ ಕಾಲೇಜಿನಿಂದ ಅಂದರೆ ಸೊರಬ, ಭದ್ರಾವತಿ, ಹಿರೇಕೆರೂರು ಇತರೇ ಕಾಲೇಜಿನಿಂದ ವರ್ಗಾ ಮಾಡಿಸಿದ್ದಾನೆ. ಆದರಿಂದಾಗಿ ಈಗ ಆ ಕಾಲೇಜುಗಳಲ್ಲಿ ಅಧ್ಯಾಪಕರ ಕೊರತೆ ಬೀಳುತ್ತದೆ ಎಂಬ ಕನಿಷ್ಠ ತಿಳಿವಳಿಕೆಯಿಲ್ಲವೇ ರಾಘವೇಂದ್ರನಿಗೆ.

ಶಿಕ್ಷಣ ಕ್ಷೇತ್ರದಲ್ಲಿ ಯಡ್ಡಿ ಸುಪುತ್ರ ರಾಘವೇಂದ್ರನ ತುಘಲಕ್ ದರ್ಬಾರ್

ಇದರಂತೆ ಈಗಾಗಲೇ ಎರಡು ತಿಂಗಳಿನಿಂದ ಸದ್ರಿ ಕಾಲೇಜಿನಲ್ಲಿ ಅರೆಕಾಲಿಕ/ ಅತಿಥಿ ಉಪನ್ಯಾಸಕರನ್ನು ನೇಮಿಸಿಕೊಂಡು ತರಗತಿಗಳು ಸುಸೂತ್ರವಾಗಿ ನಡೆಯುತ್ತಿವೆ. ಕನ್ನಡ, ರಾಜ್ಯಶಾಸ್ತ್ರ ಅರ್ಥಶಾಸ್ತ್ರ ವಿಭಾಗಗಳಲ್ಲಿ ಈಗಾಗಲೇ 5-10 ವರ್ಷದಿಂದ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳ ಪೈಕಿ ಯುಜಿಸಿ ನಿಯಮಾವಳಿ ಪ್ರಕಾರ NET, Mphil, Phd, ಜೊತೆಗೆ 5ರಿಂದ 10 ವರ್ಷಗಳ ಕಾಲ ಬೋಧನಾ ಅನುಭವ ಹೊಂದಿದವರೇ ಇದ್ದಾರೆ.

ದುರಂತವೆಂದರೆ ಈ ರೀತಿ ನೇಮಕಗೊಂಡ ಅರೆಕಾಲಿಕ/ಅತಿಥಿ ಉಪನ್ಯಾಸಕರಿಗೆ ಅನುಮೋದನೆ ನೀಡಲು ಇಂತಿಷ್ಟು ಹಣ ಲಂಚವಾಗಿ ತನಗೆ ಕೊಡಬೇಕೆಂದು ಡಿಮ್ಯಾಂಡ್ ಮಾಡುತ್ತಾ "ನೀವು ಕೊಡದಿದ್ದರೆ, ನಿಮ್ಮ ಸ್ಥಾನಗಳಿಗೆ ಕಾಯಂ ಉಪನ್ಯಾಸಕರನ್ನು ಸಿ.ಎಂ. ಕಡೆಯಿಂದ ಹಾಕಿಸಿಕೊಂಡು ಬರುತ್ತೇನೆ" ಎಂದು ಬೆದರಿಸುತ್ತಿದ್ದಾನೆ ಮನೆಹಾಳ ಹಾದಿಮನಿ.




ಈ ಉಪನ್ಯಾಸಕರ ಮತ್ತೊಂದು ದುರದೃಷ್ಟವೆಂದರೆ ಕಳೆದ ವರ್ಷ ಅಂದರೆ 2007-08ನೇ ಸಾಲಿನಲ್ಲಿ ಕರ್ತವ್ಯ ನಿರ್ವಹಿಸಿದ 6 ತಿಂಗಳ ವೇತನವನ್ನು ರಾಜ್ಯ ಸರ್ಕಾರ ಬಿಡುಗಡೆಗೊಳಿಸಿ 25ರಿಂದ 30 ದಿನಗಳಾಗುತ್ತಾ ಬಂದರೂ ಅದರಲ್ಲೂ ಲಂಚಕ್ಕಾಗಿ ಬಾಯಿತೆರೆದು ಕೂತಿದ್ದಾನೆ ಹಾದಿಮನಿ.

ಹಾದಿಮನಿ ಕೃಪಾಪೋಷಿತ ನಾಟಕ ಮಂಡಳಿಯೊಳಗೆ ಕೆಲವು ಲೆಕ್ಚರರ್‌ಗಳೂ ಸೇರಿದ್ದು, ಇವರುಗಳು ಯಡ್ಡಿ ಮನೆಗೆ ಸರ್ಕಾರಿ ನೌಕರರ ಟ್ರಾನ್ಸ್‌ಫರ್ ಪಟ್ಟಿ ಹೊತ್ತು ಓಡಾಡುವ ಏಜೆಂಟರಂತಾಗಿದ್ದಾರೆ. ಜೊತೆಗೆ ಕೆಪಿಎಸ್‌ಸಿ ನೇಮಕಾತಿ ಡೀಲಿಂಗ್ ದಂಧೆಯನ್ನೂ ಇವರು ನಿರ್ವಹಿಸುತ್ತಿದ್ದಾರೆಂಬ ದಟ್ಟ ವದಂತಿ ಇದೆ. ಈ ಕೂಟದ ಇಬ್ಬರು ಸದಸ್ಯರು ಬೆಂಗಳೂರಿನಲ್ಲಿ ಕೂತು ತಮ್ಮದೇ ಕಾಲೇಜು ಉಪನ್ಯಾಸಕರ

ಹಾಗೆ ನೋಡಿದರೆ ಒಂದು ವರ್ಷದ ಹಿಂದೆ ಕನ್ನಡ, ಇಂಗ್ಲಿಷ್, ರಾಜ್ಯಶಾಸ್ತ್ರ ಮತ್ತು ಇತಿಹಾಸ ವಿಭಾಗಗಳನ್ನೊಳಗೊಂಡು ಹೊಸದಾಗಿ ತೆರೆಯಲಾದ ಶಿರಾಳಕೊಪ್ಪದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಒಬ್ಬ ಪೂರ್ಣಕಾಲಿಕ ಉಪನ್ಯಾಸಕರಿಲ್ಲ. ಅಲ್ಲಿಗೆ ಉಪನ್ಯಾಸಕರ ಅಗತ್ಯವಿದೆ ಎಂದು ಯಡ್ಡಿ ಸುಪುತ್ರನಿಗೆ ಯಾಕೆ ಹೊಳೆಯಲಿಲ್ಲ?

ಈಗಾಗಲೇ ಸದರಿ ಕಾಲೇಜಿನ ಪ್ರಾಚಾರ್ಯ ಹಾದಿಮನಿ ಬಿಬಿಎಂ ಮತ್ತು ಬಿಸಿಎ ವಿದ್ಯಾರ್ಥಿಗಳಿಂದ ಸಾವಿರಾರು ರೂ. ಡೊನೇಷನ್ ವಸೂಲಿ ಮಾಡಿ ಪೋಷಕರ ಜೇಬಿನಿಂದ ಲಕ್ಷಾಂತರ ರೂಪಾಯಿ ದೋಚಿದ್ದಾನೆ ಎಂಬ ಕತೆ ಕೇಳಿ ಬರುತ್ತಿದೆ. ಈ ರೀತಿ ಖಾಸಗಿ ಕಾಲೇಜನ್ನು ನಾಚಿಸುವಂತೆ ಸರ್ಕಾರಿ ಕಾಲೇಜು ಮಾಡಿರುವುದು ರಾಜ್ಯದಲ್ಲೇ ಪ್ರಥಮ. ಯಾವುದೇ ಸರ್ಕಾರಿ ಕಾಲೇಜಿನಲ್ಲಿ ಡೊನೇಷನ್ ಪದ್ಧತಿಯಿಲ್ಲ. ಈ ಸತ್ಯಸಂಗತಿ ಯಡ್ಡಿ ಮತ್ತು ಯಡ್ಡಿ ಮಗನಿಗೆ ಗೊತ್ತೇ? ಅಥವಾ ಅದರಲ್ಲೂ ರಾಘವೇಂದ್ರ ಕಮೀಷನ್ ಎಂಜಲು ತಿನ್ನುತ್ತಾನಾ? ■



ಕನ್ನಡತಾಯಿಯ ಕೈಯನ್ನೇ ಕತ್ತರಿಸಿದ ಗಣಿರೆಡ್ಡಿ

35 ಎಕರೆ ಆಂಧ್ರಕ್ಕೆ?

ಕತ್ತಿ, ಬಂದೂಕು ಬಳಸಿ ದೋಚುವವನು ದಕಾಯಿತ. ಕಾನೂನಿನ ಕಣ್ಣಿಗೆ ಆತ ಅಪರಾಧಿ. ಅದನ್ನೇ ವ್ಯವಸ್ಥೆ ಬಳಸಿ ಜೈಲಿಗೂ ಹೋಗದೆ, ಅಪರಾಧಿ ಎನ್ನಿಸಿಕೊಳ್ಳದೇ ಸಾಧಿಸುವವನು?

ಆತ ಜನಾರ್ಧನ ರೆಡ್ಡಿ!

ಕರ್ನಾಟಕದ ಗಡಿಯನ್ನೇ ತಿದ್ದಿ ಮೂವತ್ತೈದು ಎಕರೆಗಳಷ್ಟು ಭೂಮಿಯನ್ನು ಆಂಧ್ರದ ಭೂಭಾಗ ಎಂಬಂತೆ ದಾಖಲೆ ಸೃಷ್ಟಿಸಿ, ಎಂಟು ನೂರು ಕೋಟಿಗೂ ಹೆಚ್ಚು ಮೌಲ್ಯದ ಕಬ್ಬಿಣದ ಅದಿರನ್ನು ಕದ್ದು ಸಾಗಿಸಿದ ಬಳ್ಳಾರಿಯ ಜನಾರ್ಧನ ರೆಡ್ಡಿ ಗ್ಯಾಂಗ್ ಈಗ ಕರ್ನಾಟಕಕ್ಕೆ ಈತನಕ ಯಾರೂ ಬಗೆಯದ, ಎಂದೆಂದಿಗೂ ಸರಿಪಡಿಸಲಾಗದ, ಅತೀ ದೊಡ್ಡ ದ್ರೋಹವೊಂದಕ್ಕೆ ಕೈಹಾಕಿದೆ.

ಅದು ಕರ್ನಾಟಕದ ಮೂವತ್ತು ಎಕರೆ ಕಬ್ಬಿಣದ ಅದಿರಿನಿಂದ ಸಮೃದ್ಧವಾಗಿರುವ ಭೂಭಾಗವನ್ನು ಶಾಶ್ವತವಾಗಿ ಆಂಧ್ರಕ್ಕೆ ಸೇರಿಸುವುದು. ತನ್ಮೂಲಕ ಮತ್ತೆ ಸಾವಿರದೈನೂರು ಕೋಟಿಯಷ್ಟು ಬೆಲೆಬಾಳುವ ಕಬ್ಬಿಣದ ಅದಿರನ್ನು ದೋಚುವುದು ರಾಜ್ಯ ಪ್ರವಾಸೋದ್ಯಮ ಮಂತ್ರಿ ಗಾಲಿ ಜನಾರ್ಧನರೆಡ್ಡಿಯ ಷಡ್ಯಂತ್ರ. ಇದೇ 2008 ರ ಸೆಪ್ಟೆಂಬರ್ 21 ಕ್ಕೆ ಕರ್ನಾಟಕ ಸರ್ಕಾರದ ಕಂದಾಯ ಇಲಾಖೆ, ಅರಣ್ಯ ಇಲಾಖೆ, ಗಣಿ ಮತ್ತು ಭೂವಿಜ್ಞಾನ ಇಲಾಖೆ ಮತ್ತು ಬಳ್ಳಾರಿಯ ಜಿಲ್ಲಾಡಳಿತಗಳೆಲ್ಲ ಸೇರಿ ಸಂಡೂರು ತಾಲ್ಲೂಕಿನ ಆಂಧ್ರದ ಗಡಿಯಲ್ಲಿ ಕಾಟಾಚಾರದ ಜಂಟಿ ಸರ್ವೆಯ ಶಾಸ್ತ್ರ ಮುಗಿಸಿಬಿಟ್ಟರೆ ಕರ್ನಾಟಕದ ಮೂವತ್ತೈದು ಎಕರೆಗಳಷ್ಟು ಅದಿರು ಸಮೃದ್ಧ ಭೂಭಾಗವೊಂದು ಶಾಶ್ವತವಾಗಿ ಆಂಧ್ರದ ಪಾಲಾಗುತ್ತದೆ. ಅಲ್ಲಿಗೆ ಗಣಿರೆಡ್ಡಿಯ ಭಯಂಕರ ಹಗಲುದರೋಡೆಯೊಂದು ತನ್ನಿಂತಾನಾಗಿಯೇ ಮುಚ್ಚಿ ಹೋಗುತ್ತದೆ. ಮತ್ತು ಕರ್ನಾಟಕವೇ ಮೇಲೆ ಬಿದ್ದು ತನ್ನ ಮೂವತ್ತೈದು ಎಕರೆಗಳಷ್ಟು ಭೂಭಾಗವೊಂದನ್ನು ಆಂಧ್ರಕ್ಕೆ ಧಾರೆಯೆರೆದು ಕೊಟ್ಟಂತಾಗುತ್ತದೆ!

ಇದು ಬಳ್ಳಾರಿಯ ಗಣಿ ದಕಾಯಿತರಾದ ಪ್ರವಾಸೋದ್ಯಮ ಮಂತ್ರಿ ಜನಾರ್ಧನ ರೆಡ್ಡಿ, ಕಂದಾಯ ಮಂತ್ರಿ ಕರುಣಾಕರ ರೆಡ್ಡಿ ಮತ್ತು ಆರೋಗ್ಯ ಮಂತ್ರಿ ರೌಡಿ ಶ್ರೀರಾಮುಲು ಸೇರಿಕೊಂಡೇ ರಾಜ್ಯ ಬಜೆಪಿ ಸರ್ಕಾರದ ನಿಷ್ಕ್ರಿಯ ಬೆಂಬಲದೊಂದಿಗೆ ಎಸಗುತ್ತಿರುವ ದುಸ್ಸಾಹಸ. ಕಳೆದ ಒಂದು ತಿಂಗಳಿನಿಂದ ಗಣಿ ರೆಡ್ಡಿಗಳಿಗೂ ತುಮಟಿಯ ಟಪಾಲ್ ನಾರಾಯಣರೆಡ್ಡಿ ಮತ್ತವರ ಮಕ್ಕಳಿಗೂ ಮಧ್ಯೆ ದಿನಬೆಳಿಗ್ಗೆಯಾದರೆ ಮಾರಾಮಾರಿಗಳಾಗುತ್ತಿವೆ. ಸಂಡೂರು ತಾಲ್ಲೂಕಿನ ಕರ್ನಾಟಕದ ಕೊನೇ ಗ್ರಾಮವೇ ತುಮಟಿ. ಅದರ ಪಕ್ಕದ ವಿಠಲಾಪುರ ಕೂಡ ಆಂಧ್ರದ ಗಡಿಯ ಕರ್ನಾಟಕದ ಕೊನೇ ಗ್ರಾಮವೇ.

ಈ ಎರಡೂ ಗ್ರಾಮಗಳಿಗೆ ಹೊಂದಿಕೊಂಡಂತೆ ಇರುವುದು ಟಪಾಲ್ ನಾರಾಯಣರೆಡ್ಡಿಯ ತುಮಟಿ ಐರನ್ ಓರ್ ಮೈನ್ಸ್. ತುಮಟಿ ಸರ್ವೆ ನಂಬರ್ 1 ರಲ್ಲಿ ಸರಿಸುಮಾರು 93 ಎಕರೆ ಅರಣ್ಯ ಪ್ರದೇಶಗಳಲ್ಲಿ ಆ ಕಾಲದಿಂದಲೂ ಗಣಿಗಾರಿಕೆ ಮಾಡಿಕೊಂಡು ಬಂದ ನಾರಾಯಣರೆಡ್ಡಿಯ ಮಕ್ಕಳಾದ ಟಪಾಲ್ ಗಣೇಶ್ ಮತ್ತು ಏಕಾಂಬರಂ 2004 ರಿಂದಲೂ ಜನಾರ್ಧನ ರೆಡ್ಡಿಯ ಗೂಂಡಾಗಿರಿಯ ವಿರುದ್ಧ ಹೋರಾಡಿಕೊಂಡೇ ಬಂದವರು.

ಹೀಗೆ ಗಣಿರೆಡ್ಡಿಗಳ ಗೂಂಡಾಗಿರಿ ಮತ್ತು ದೌರ್ಜನ್ಯದ ವಿರುದ್ಧ ಟಪಾಲ್ ಗಣೇಶ್ ಕುಟುಂಬ ಕಿಡಿಕಾರುವುದಕ್ಕೂ ಕಾರಣವಿದೆ. ಅದು ತುಮಟಿಗೆ ಹೊಂದಿಕೊಂಡಂತೆ ಆಂಧ್ರದ ಗಡಿಯೊಳಕ್ಕಿರುವ ಮಲಪನಗುಡಿ ಗ್ರಾಮದಲ್ಲಿರುವ ಟಪಾಲ್ ನಾರಾಯಣರೆಡ್ಡಿಯ ಗಣಿಯನ್ನು ಜನಾರ್ದನ ರೆಡ್ಡಿ ಗ್ಯಾಂಗ್ ಆಕ್ರಮಿಸಿಕೊಂಡಿದ್ದರ ಪರಿಣಾಮ. ಬ್ರಿಟಿಷರ ಕಾಲದಿಂದಲೂ ಆಂಧ್ರದ ಪರವಾನಗಿಯೊಂದಿಗೆ ಟಪಾಲ್ ಕುಟುಂಬ ನಡೆಸಿಕೊಂಡು ಬಂದಿದ್ದ ಮಲಪನಗುಡಿ ಗಣಿಯನ್ನು 2004 ರಲ್ಲಿ ಜನಾರ್ಧನ ರೆಡ್ಡಿ ವಶಪಡಿಸಿಕೊಂಡ.

ಇದಕ್ಕೆಂದು ಆಂಧ್ರದ ಅನಂತಪುರದ ಜಿಲ್ಲಾಡಳಿತವೊಂದೇ ಅಲ್ಲ, ಆಂಧ್ರದ ಮುಖ್ಯಮಂತ್ರಿ ವೈ.ಎಸ್. ರಾಜಶೇಖರ ರೆಡ್ಡಿಯನ್ನೇ ಗಣಿರೆಡ್ಡಿ ಬುಟ್ಟಿಗೆ ಹಾಕಿಕೊಂಡಿದ್ದ. ಟಪಾಲ್ ಫ್ಯಾಮಿಲಿಗೆ ಸದರಿ ಗಣಿಯನ್ನು ನಡೆಸುವ ತಾಕತ್ತಿಲ್ಲವಾದ್ದರಿಂದ ಅದನ್ನು ತನಗೇ ವಹಿಸಿಕೊಡಬೇಕೆಂದು ಜನಾರ್ಧನರೆಡ್ಡಿ ಅರ್ಜಿ ಸಲ್ಲಿಸಿ 2004 ರಲ್ಲಿ ನೂರೆಂಬತ್ತು ಎಕರೆಯ ಇಡೀ ಗಣಿಯನ್ನು ನುಂಗಿ ಹಾಕಿದ್ದ.

ಆಗ ಮುಖ್ಯಮಂತ್ರಿಯಾಗಿದ್ದ ಕುಮಾರಸ್ವಾಮಿಯನ್ನೂ ಸೇರಿಸಿದ ಕರ್ನಾಟಕದ ಎಲ್ಲಾ ಇಲಾಖೆಗಳಿಗೂ ಟಪಾಲ್ ಕುಟುಂಬ ದೂರು ನೀಡಿತಾದರೂ ನಯಾಪೈಸೆಯ ಪ್ರಯೋಜನವಾಗಲಿಲ್ಲ. ಜೆಡಿಎಸ್ ಸರ್ಕಾರವಿತ್ತಾದ್ದರಿಂದ ತುಮ... ಭಾಗದ ಗಣಿಲೂಟಿಯನ್ನು ಅರ್ಧಕ್ಕೇ ಕೈಬಿಟ್ಟ ಜನಾರ್ಧನರೆಡ್ಡಿ ಆಂಧ್ರ... ವಿಠಲಾಪುರದಿಂದ ಅದಿರು ದೋಚಲಾರಂಭಿಸಿದ್ದ. ಯಾವತ್ತು ಬಜೆಪಿ ಅಧಿಕಾ... ಬಂದು ಯಡ್ಡಿ ಮುಖ್ಯಮಂತ್ರಿಯಾದರೋ ರಾಜಾರೋಷವಾಗಿ ಕರ್ನಾಟಕ... ಸ್ಕೆಚ್ಚು ತಿದ್ದಿದ್ದ ಭಾಗದಿಂದ ಅದಿರು ಸಾಗಿಸಲಾರಂಭಿಸಿದ.

ಈ ಮಧ್ಯೆ ಟಪಾಲ್ ಕುಟುಂಬ ಕೈಕಟ್ಟಿ ಕೂರಲಿಲ್ಲ.

ಕರ್ನಾಟಕದ ಗಡಿಯನ್ನೇ ಆಕ್ರಮಿಸಿ ಅದಿರು ದೋಚುತ್ತಿರುವ ರೆ... ಗ್ಯಾಂಗ್ ವಿರುದ್ಧ ಲೋಕಾಯುಕ್ತಕ್ಕೆ ದೂರು ನೀಡಿತು. ಹೈಕೋರ್ಟಿನಲ್ಲಿ ಕೇಸು ಹಾಕಿತು. ವಿರೋಧಿ ಕಾಂಗ್ರೆಸ್‌ನ ಖರ್ಗೆ, ಉಗ್ರಪ್ಪ, ಸಿದ್ಧರಾಮಯ್ಯ... ಜೆಡಿಎಸ್ ನಾಯಕ ಕುಮಾರಸ್ವಾಮಿ, ದೇವೇಗೌಡ ಎಲ್ಲರಿಗೂ ದಾಖ... ಸಮೇತ ದೂರು ನೀಡಿತು. ಪದೇಪದೇ ಪತ್ರಿಕಾಗೋಷ್ಠಿ ನಡೆಸಿತು. ದುರಂತವೆಂದರೆ ತಮಿಳುನಾಡಿನ ವಿರುದ್ಧ ಸಣ್ಣಪುಟ್ಟದ್ದಕ್ಕೂ ಬೀದಿಗಿಳಿದು ಬೊಬ್ಬೆ ಹೊಡೆಯು... ಕನ್ನಡ ಪರ ಸಂಘಟನೆಗಳಾಗಲಿ, ಕನ್ನಡಿಗರ ಅಧಿಕೃತ ಪ್ರಾತಿನಿಧಿಕ ಸಂಸ್ಥೆಯಾ... ಕನ್ನಡ ಸಾಹಿತ್ಯ ಪರಿಷತ್ತಾಗಲಿ, ಗಡಿ ರಕ್ಷಣೆಯ ಬಗ್ಗೆ ಪದೇಪದೇ ಬೀದಿಗಿಳಿಯು... ವಾಟಾಳ್, ಮುಖ್ಯಮಂತ್ರಿ ಚಂದ್ರು ಥರದವರಾಗಲಿ; ಯಾರಿಗೂ ಇದ... ಕರ್ನಾಟಕಕ್ಕಾದ 'ಘಾತ' ಅನ್ನಿಸಲೇ ಇಲ್ಲ.


ನಾಡುನುಡಿಯ ಹಿತಚಿಂತಕರೇ ತೆಪ್ಪಗಾದ ಮೇಲೆ ಗಣಿರೆಡ್ಡಿಗಿನ್ನು ಯಾ... ಮುಲಾಜು?


ಆಂಧ್ರಕ್ಕೆ ಸೇರಿದ ಗಡಿ ಒತ್ತುವರಿ

ಹಕೀಕತ್ತೇನೆಂದರೆ ಆ ಹೊತ್ತಿಗಾಗಲೇ ಮಲಪನಗುಡಿಯ ಟಪಾಲ್ ಗಣಿ ಖಾಲಿ ಹೊಡೆದಿತ್ತು, ಆದರೂ ಖಾಲಿ ಬಿದ್ದ ಅದೇ ಗಣಿಯನ್ನು ಜನಾರ್ಧನರೆಡ್ಡಿ ಮತ್ತೆ ಗುತ್ತಿಗೆ ಹಿಡಿದ ಕಾರಣವೇ ಬೇರೆಯಿತ್ತು. ಅದು ಪಕ್ಕದ ಕರ್ನಾಟಕದ ಗಣಿ ದೋಚುವುದು!

2005 ರ ಹೊತ್ತಿಗೆ ಏಕಾಏಕಿ ಕರ್ನಾಟಕದ ಗಡಿಯೊಳಕ್ಕೆ ಬುಲ್ಡೋಜರ್, ಜೆಸಿಬಿ ಯಂತ್ರಗಳನ್ನು ನುಗ್ಗಿಸಿದ ರೆಡ್ಡಿ ಗ್ಯಾಂಗ್ ಕರ್ನಾಟಕದ ವಿಠಲಾಪುರದಲ್ಲಿದ್ದ ಹಿಂದ್ ಟ್ರೇಡರ್ಸ್ ಗಣಿಯ ಹದಿನೈದು ಎಕರೆಯನ್ನು ಆಕ್ರಮಿಸಿತ್ತು. ಹಿಂದ್ ಟ್ರೇಡರ್ಸ್ ಮಾಲೀಕರು ಬಳ್ಳಾರಿಯ ಅರಣ್ಯಾಧಿಕಾರಿಗಳಿಗೆ ದೂರು ಕೊಟ್ಟರು. ಕರ್ನಾಟಕ ಸರ್ಕಾರದ ಪ್ರತಿ ಇಲಾಖೆಗೂ ದೂರಿತ್ತರು. ನಯಾಪೈಸೆಯ ಪ್ರಯೋಜನವಾಗಲಿಲ್ಲ. ಹಾಗೇ ಕರ್ನಾಟಕದಿಂದ ದೋಚಿದ ನೂರೆಂಬತ್ತು ಕೋಟಿ ರೂಪಾಯಿಗಳ ಮೊತ್ತದ ಅದಿರನ್ನು ಆಂಧ್ರದ ನಕಲಿ ಪರ್ಮಿಟ್ಟಿನ ಮೂಲಕ ದೋಚಿದ ಜನಾರ್ಧನರೆಡ್ಡಿ ಅದಕ್ಕೆಂದು ಕರ್ನಾಟಕದ ಗಡಿರೇಖೆಯನ್ನೇ ಬದಲಾಯಿಸಿದ್ದ!

ಆಂಧ್ರದ ಅನಂತಪುರ ಜಿಲ್ಲೆಯ ಮಲಪನಗುಡಿಯ ಗಡಿ ಎಂದರೆ ಆಂಧ್ರದ ಕೊನೇ ಗಡಿಯ ಸರ್ವೇ ಸ್ಕೆಚ್ಚನ್ನೇ ತಿದ್ದಿದ್ದ ಗಣಿರೆಡ್ಡಿ ಬ್ರಿಟಿಷರ ಕಾಲಕ್ಕೆ ನೆಟ್ಟಿದ ವಿಠಲಾಪುರದ ಸರ್ವೇ ಕಲ್ಲುಗಳನ್ನೇ ಕಿತ್ತೆಸೆದ. ಮುಂದೆ 2007 ರಲ್ಲಿ ಇದೇ ತಂತ್ರ ಬಳಸಿ ಕರ್ನಾಟಕದ ತುಮಟಿಯ ಸರ್ವೆ ಕಲ್ಲುಗಳನ್ನೂ ಕಿತ್ತುಹಾಕಿದ.



ಇದು ಗಡಿ ದೋಚುವ ಗಣಿರೆಡ್ಡಿಯ ಎರಡನೇ ದುಷ್ಕೃತ್ಯವಾಗಿತ್ತು. 2005 ರಲ್ಲಿ ವಿಠಲಾಪುರದ 15 ಎಕರೆ ಕರ್ನಾಟಕದ ಭೂಭಾಗವನ್ನು ಆಂಧ್ರಕ್ಕೆ ಸೇರಿಸಿದಂತೆ ಸ್ಕೆಚ್ ತಿದ್ದಿದ ಜನಾರ್ಧನರೆಡ್ಡಿ ಈ ಬಾರಿ ತುಮಟಿಯ 20 ಎಕರೆಗಳಷ್ಟು ಭೂಪ್ರದೇಶಕ್ಕೆ ನುಗ್ಗಿ ಅದಿರು ದೋಚಿದ್ದ. ತುಮಟಿ ಗಡಿಯ ಸರ್ವೇ ಸ್ಕೆಚ್ಚನ್ನೂ ತಿದ್ದಿಹಾಕಿದ್ದ!

ಆದರೆ ಈಗಾಗಲೇ ತುಮಟಿಯ ಸರ್ವೇ ನಂ. 1ರಲ್ಲಿ ಕರ್ನಾಟಕದಿಂದ ಲೈಸೆನ್ಸ್ ಪಡೆದ ಗಣಿಗಾರಿಕೆ ನಡೆಸುತ್ತಿದ್ದದು ಟಪಾಲ್ ಫ್ಯಾಮಿಲಿ. ಆಂಧ್ರದ ಮಲಪನಗುಡಿಯಲ್ಲಿದ್ದ ತಮ್ಮ ಗಣಿಯನ್ನು ಆಕ್ರಮಿಸಿದ್ದೂ ಅಲ್ಲದೆ, ಈಗ ಕರ್ನಾಟದೊಳಕ್ಕೇ ನುಗ್ಗಿಬಂದು ತಮ್ಮ ಎರಡನೇ ಗಣಿಯನ್ನೂ ಆಕ್ರಮಿಸಿದ ಜನಾರ್ದನರೆಡ್ಡಿಯ ವಿರುದ್ಧ ಟಪಾಲ್ ಫ್ಯಾಮಿಲಿ ತೀವ್ರ ಪ್ರತಿಭಟನೆಗಿಳಿಯಿತು.

ತನ್ನದೇ ಸರ್ಕಾರವಿದೆ. ತನ್ನ ಕೈಗೊಂಬೆಯಂತಿರುವ ನರಸತ್ತ ಮುಖ್ಯಮಂತ್ರಿ... ಅದರಲ್ಲೂ ಬಳ್ಳಾರಿಗೆ ತಾನೇ ಉಸ್ತುವಾರಿ ಮಂತ್ರಿ. ತನ್ನೆಲ್ಲಾ ಗಣಿ ಲೂಟಿ... ನೆರವಾಗಲೆಂದೇ ಬಳ್ಳಾರಿ ಜಿಲ್ಲಾಧಿಕಾರಿ ಹುದ್ದೆಗೆ ಬಿ. ಶಿವಪ್ಪ ಎಂಬ ರ್‍ಯಾಂಕ... ಪ್ರೊಮೋಟಿಯನ್ನು ಕರೆತಂದು, ಈ ಹಿಂದೆ ಕುಮಾರಸ್ವಾಮಿ ಕಾಲದಲ್ಲಿ... ಪೊಲೀಸ್ ವರಿಷ್ಠ ಸೀಮಂತ್‌ಕುಮಾರ್ ಸಿಂಗ್‌ರನ್ನೇ ಮತ್ತೆ ಬಳ್ಳಾರಿಗೆ ಎಸ್‌ಪಿಯಾಗಿ ಹಾಕಿಸಿಕೊಂಡರು. ಈ ಸೀಮಂತ್‌ಕುಮಾರ್ ಸಿಂಗ್ ಹೇಳಿಕೇಳಿ... ಗಣಿರೆಡ್ಡಿಗಳ ಸಾಕುನಾಯಿ. ಜೊತೆಗೆ ಸಂಡೂರಿಗೆ ತಹಶೀಲ್ದಾರ್ ಆಗಿ ಬಂದ... ರೇವಣಸಿದ್ಧಯ್ಯ ಕೂಡ ಗಣಿರೆಡ್ಡಿಗಳ ಮನೆಯಾಳೇ. ಇದೆಲ್ಲಕ್ಕೂ ಪೂರಕವೆಂಬಂತೆ... ಕನ್ಸರ್‌ವೇಟರ್ ಆಫ್ ಫಾರೆಸ್ಟ್ (ಸಿಎಫ್) ಹುದ್ದೆಗೆ ಮನೋಜ್ ಕುಮಾರ್... ಶುಕ್ಲಾ ಅರಣ್ಯ ಇಲಾಖೆಯ ಡಿಸಿಎಫ್ ಮುತ್ತಯ್ಯ, ಎಸಿಎಫ್ ಶ್ರೀನಿವಾಸಮೂರ್ತಿ... ರೇಂಜರ್ ಲೋಕನಾಥ ರೆಡ್ಡಿ, ಫಾರೆಸ್ಟರ್ ವೆಂಕಟೇಶ್, ಗಣಿ ಇಲಾಖೆಯ... ಸರ್ವೇಯರ್ ದೊರಪ್ಪ ನಾಯಕ್ ಮುಂತಾದ ಗಣಿ ರೆಡ್ಡಿಗಳ ನಂಬಿಕಸ್ಥ... ಬಂಟರೆಲ್ಲ ಬಳ್ಳಾರಿಗೆ ವಕ್ಕರಿಸಿದ್ದಾರೆ.


ಅಲ್ಲಿಗೆ ಗಣಿ ಇಲಾಖೆಯಿಂದ ಹಿಡಿದು ಅರಣ್ಯ, ಕಂದಾಯ, ಪೊಲೀಸ್... ಜಿಲ್ಲಾಧಿಕಾರಿಗಳೆಲ್ಲರೂ ಗಣಿಕಳ್ಳರ ಕೂಲಿಯಾಳುಗಳೇ ಆದಂತಾಗಿತ್ತು. ಹೀಗೆ... ಇಡೀ ಜಿಲ್ಲಾಡಳಿತವೇ ರೆಡ್ಡಿಯ ಕೈಗೊಂಬೆಯಾದ ಮೇಲೆ ತನಗಿನ್ನು... ಉಳಿಗಾಲವಿಲ್ಲವೆಂದು ತನ್ನ ಇಡೀ ಗಣಿಯ ರೈಸಿಂಗ್ ಕಾಂಟ್ರ್ಯಾಕ್ಟನ್ನು ರೆಡ್ಡಿಗಳ... ಪಾದಕ್ಕರ್ಪಿಸಿದ್ದು ತುಮಟಿಯ ಎಂಬಿಟಿ ಮೈನ್ಸ್. ಇದು ಟಪಾಲ್ ಕುಟುಂಬದ ತುಮಟಿ ಗಣಿಯ ಪಕ್ಕದ ಗಣಿ.

ಯಾವತ್ತು ಎಂಬಿಟಿ ಮೈನ್ಸ್ ಗಣಿರೆಡ್ಡಿಯ ಪಾಲಾಯಿತೋ ಶರಣಾಗದೇ ಉಳಿದದ್ದು ಟಪಾಲ್ ಕುಟುಂಬದ ಗಣಿ ಮಾತ್ರ. ಈಗಾಗಲೇ ಆಂಧ್ರದ ಗಡಿಯನ್ನು ತಿದ್ದಿ ತುಮಟಿ ಗಣಿಯ ಒಂದು ಭಾಗವನ್ನು ಕಬಳಿಸಿದ್ದ ರೆಡ್ಡಿ ಗ್ಯಾಂಗ್‌ಗೆ ಅದರ ಪಕ್ಕದ ಎಂಬಿಟಿ ಮೈನ್ಸ್ ಸಿಕ್ಕಿದ್ದು ದೊಡ್ಡ ಅನುಕೂಲದಂತಾಯ್ತು. ತನ್ನ ವಿರುದ್ಧ ಆ ಕಾಲದಿಂದಲೂ ಪ್ರತಿಭಟಿಸುತ್ತಲೇ ಬಂದಿರುವ ಟಪಾಲ್ ಕುಟುಂಬವನ್ನು ಗಣಿ ವಿವಾದದ ನೆಪದಲ್ಲಿ ಸದೆಬಡಿದು ಬಿಟ್ಟರೆ ಇಡೀ ಬಳ್ಳಾರಿಯ ಗಣಿ ಸಾಮ್ರಾಜ್ಯದಲ್ಲಿ ತನ್ನ ವಿರುದ್ಧ ಉಸಿರೆತ್ತುವ ಗಂಡೆ...

ಆವತ್ತಿನ ಸರ್ಕಾರಿ ನಿಯತ್ತು ಇವತ್ತೇನಾಯಿತು?

ಹಾಗೊಮ್ಮೆ ಕರ್ನಾಟಕ-ಆಂಧ್ರದ ಗಡಿಗುಂಟ ಸರ್ವೇ ನಡೆಸುವುದೇ ಆದ ಪಕ್ಷದಲ್ಲಿ ಇಡೀ ಗಡಿಯುದ್ದಕ್ಕೂ ಸರ್ವೇ ನಡೆಸಲೇಬೇಕು ತಾನೆ?

ಆದರೆ ಮಂತ್ರಿ ಗಣಿರೆಡ್ಡಿಯ ಚೇಲಾ ಅಧಿಕಾರಿಗಳು ನಡೆಸುತ್ತಿರುವುದು ಟಪಾಲ್ ನಾರಾಯಣ ರೆಡ್ಡಿಯ ಗಣಿ ಎಲ್ಲಿದೆಯೋ ಅಲ್ಲಿ ಮಾತ್ರ. ಏಕೆಂದರೆ ಬೇರೆ ಎಲ್ಲೆಡೆಗೆ ಯಾವ ಬ್ರಿಟಿಷ್ ಕಾಲದ ಟೋಪಾಶೀಟ್ ಸ್ಕೆಚ್ ಅನ್ನು ಆಧಾರವಾಗಿಟ್ಟುಕೊಳ್ಳಬೇಕೋ ಆ ಪ್ರಕಾರವೇ ಮಲಪನಗುಡಿಯ ಸರ್ವೇ ನಡೆಸಿದರೆ ರೆಡ್ಡಿ ಮಾಡಿದ ಮೋಸ ಬಯಲಾಗುತ್ತದೆ.




ಅಷ್ಟಕ್ಕೂ ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದ ಕಾಲಕ್ಕೆ ಬಳ್ಳಾರಿಗೆ ಡಿಸಿಎಫ್ ಆಗಿದ್ದ ಡಾ. ಪಿ. ರಾಜಶೇಖರನ್ ಅವರೇ ಜನಾರ್ಧನ ರೆಡ್ಡಿ ಗ್ಯಾಂಗ್ ಮತ್ತು ಓಬಳಾಪುರಂ ಮೈನಿಂಗ್ ಕಂಪನಿ ಕರ್ನಾಟಕದ ಗಡಿಯನ್ನು ತಿದ್ದಿ ನೂರಾರು ಕೋಟಿ ಮೊತ್ತದ ಅದಿರು ದೋಚಿದ್ದರ ವಿರುದ್ಧ ಕೂಲಂಕಷ ತನಿಖೆ ನಡೆಸಿ 2007ರ ಆಗಸ್ಟ್ ತಿಂಗಳಲ್ಲಿ ಸರ್ಕಾರಕ್ಕೆ ವರದಿ ಸಲ್ಲಿಸಿದ್ದಾರೆ. ಗಣಿ ದೋಚಿದ್ದರ ವಿರುದ್ಧ ದೂರನ್ನು ಸಲ್ಲಿಸಿದ್ದಾರೆ.

ಆ ಪ್ರಕಾರವೇ ಕ್ರಮ ಕೈಗೊಂಡರೆ ಪ್ರವಾಸೋದ್ಯಮ ಮಂತ್ರಿ ಜನಾರ್ಧನ ರೆಡ್ಡಿ, ಕಂದಾಯ ಮಂತ್ರಿ ಕರುಣಾಕರ ರೆಡ್ಡಿ ಮತ್ತು ಆರೋಗ್ಯ ಮಂತ್ರಿ ಶ್ರೀರಾಮುಲು ಮೂವರನ್ನೂ ಬಂಧಿಸಿ ಜೈಲಿಗೆ ಹಾಕಬೇಕಾಗುತ್ತದೆ.


ಆದರೆ ನಿಷ್ಠಾವಂತ ಅರಣ್ಯಾಧಿಕಾರಿಯೊಬ್ಬ ನಡೆಸಿದ ತನಿಖೆಯ ಬಗ್ಗೆ ನಂಬಿಕೆಯಿಲ್ಲ, ಅದಕ್ಕೆ ಮತ್ತೊಮ್ಮೆ ಮೂರು ಇಲಾಖೆಗಳ ಜಂಟಿ ಸರ್ವೇ ನಡೆಸಬೇಕೆನ್ನುವುದು ಜನಾರ್ಧನ ರೆಡ್ಡಿಯ ಆದೇಶ?

ಇದು ತಾನು ಕಳ್ಳ ಪರರ ನಂಬ ಎಂಬ ಬಜೆಪಿ ಸರ್ಕಾರದ ಬುದ್ಧಿಯಲ್ಲದೇ ಮತ್ತೇನಲ್ಲ. ಇರಲಿ ಇವತ್ತಿಗೆ ಸರಿಸುಮಾರು ಮೂವತ್ತು ವರ್ಷಗಳ ಹಿಂದೆಯೂ ಇದೇ ರೀತಿಯ ಗಡಿ


ರೆಡ್ಡಿ ತಿದ್ದಿದ್ದ ಗಡಿ ಸ್ಕೆಚ್ಚು

ತಗಾದೆಯೊಂದು ನಡೆದಾಗ ಆವತ್ತು ಕರ್ನಾಟಕ ಸರ್ಕಾರ ಹೇಗೆ ನಡೆದುಕೊಂಡಿತು ಎಂಬುದೊಂದೇ ಸಾಕು ಕಾಂಗ್ರೆಸ್, ಜೆಡಿಎಸ್ ಮತ್ತು ಬಿಜೆಪಿ ಸರ್ಕಾರಗಳು ಎಂಥಾ ಮನೆಹಾಳರೆಂಬುದನ್ನು ಸಾರಿ ಹೇಳುತ್ತವೆ.

ಅದು 1965ರ ಕಾಲ. ಆವತ್ತು ಆಂಧ್ರದ ಮಲಪನಗುಡಿಯಲ್ಲಿ ಗಣಿ ಗುತ್ತಿಗೆ ಪಡೆದಿದ್ದ ಇದೇ ಟಪಾಲ್ ನಾರಾಯಣ ರೆಡ್ಡಿ ಕರ್ನಾಟಕದ ಗಡಿ



ಗಣಿರೆಡ್ಡಿಯ ಒತ್ತುವರಿಯ ವಿರುದ್ಧ ಸರ್ಕಾರವೇ ನೀಡಿದ ಸ್ಕೆಚ್

...ಇಲ್ಲದಂತಾಗುತ್ತದೆ. ಇಂಥದೊಂದು ಲೆಕ್ಕ ಹಾಕಿಯೇ 2008 ರ ಆಗಸ್ಟ್ 18 ರಂದು ತುಮಟಿಯ ಟಪಾಲ್ ಗಣಿ ಮೇಲೆ ರೆಡ್ಡಿ ಗ್ಯಾಂಗ್ ದಾಳಿ ನಡೆಸಿದೆ. ಏಕಾಏಕಿ ತುಮಟ ಗಣಿಗೆ ನುಗ್ಗಿದ ರೆಡ್ಡಿಯ ಓಬಳಾಪುರಂ ಮೈನಿಂಗ್ ಕಂಪೆನಿಯ ರೌಡಿ ಆಂಜನೇಯಲು ಮತ್ತು ಮ್ಯಾನೇಜರ್ ಶ್ರೀನಿವಾಸರೆಡ್ಡಿ ಬಂದೂಕುದಾರಿಗಳ ಗ್ಯಾಂಗ್ ಛೂಬಿಟ್ಟು ತುಮಟ ಗಣಿಯ ಫೋರ್‌ಮನ್ ಅಮರ್‌ನಾಥ್‌ನ ಕೈ ಮುರಿದಿದ್ದಾರೆ.

ಈ ಬಗ್ಗೆ ತೋರಣಗಲ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಯಿತಾದರೂ ರೆಡ್ಡಿ ಗ್ಯಾಂಗಿನ ಯಾರೇ ಒಬ್ಬರನ್ನೂ ಪೊಲೀಸರು ಬಂಧಿಸಲಿಲ್ಲ. ರೆಡ್ಡಿ ಗ್ಯಾಂಗ್‌ನ ಅಟ್ಟಹಾಸ ಹೇಗಿತ್ತೆಂದರೆ ಇದಾಗಿ ಮೂರೇ ದಿನಕ್ಕೆ ಅಂದರೆ ಆಗಸ್ಟ್ 21 ಕ್ಕೆ ಓಬಳಾಪುರಂ ಮೈನಿಂಗ್ ಕಂಪೆನಿಯ ಇದೇ ಗ್ಯಾಂಗ್ ಮತ್ತೆ ಎರಡನೇ ದಾಳಿ ನಡೆಸಿ ತುಮಟ ಗಣಿಯ ಸಿಬ್ಬಂದಿಗಳನ್ನು ಹಿಡಿದು ಬಡಿಯಿತು. ಆದರೆ ಈ ಬಾರಿ ಪೊಲೀಸರು ಕಟಾಚಾರದ ದೂರನ್ನೂ ದಾಖಲಿಸಲಿಲ್ಲ. ಬದಲಾಗಿ ಪೊಲೀಸರು ತುಮಟ ಗಣಿ ಮೇಲೆ ನಿಷೇಧಾಜ್ಞೆ ಹಾಕಿ ಗಣಿ ರೆಡ್ಡಿಗಳಿಗೆ ನೆರವಾದರು. ಟಪಾಲ್ ಗಣೇಶ್ ಬಳ್ಳಾರಿ ಮತ್ತು ಬೆಂಗಳೂರಿನಲ್ಲಿ ಪತ್ರಿಕಾಗೋಷ್ಠಿ ನಡೆಸಿ ರೆಡ್ಡಿ ಗ್ಯಾಂಗ್ ಅಟ್ಟಹಾಸವನ್ನು ಬಯಲುಗೊಳಿಸಿಬಿಟ್ಟರು. ಇದು ರೆಡ್ಡಿಗಾದ ದೊಡ್ಡ ಮುಖಭಂಗ.

ಒಂದೆಡೆ ಗಡಿಯನ್ನೇ ತಿದ್ದಿದ ಪಾಪ, ಮತ್ತೊಂದೆಡೆ ಗಣಿ ಸಂಪತ್ತು ದೋಚಿದ ಆರೋಪ, ಮಗದೊಂದೆಡೆ ತುಮಟಿ ಗಣಿಯನ್ನು ಆಕ್ರಮಿಸಿ ಗೂಂಡಾಗಿರಿ ನಡೆಸಿದ ಪ್ರತಾಪ ಇತ್ಯಾದಿಗಳೆಲ್ಲವನ್ನೂ ಒಟ್ಟೊಟ್ಟಿಗೇ ಮುಚ್ಚಿಹಾಕಲು ಜನಾರ್ಧನರೆಡ್ಡಿಗೊಂದು ಅವಕಾಶ ಬೇಕಿತ್ತು. ಅದೇ ಸೆಪ್ಟೆಂಬರ್ 21 ರ ಜಂಟಿ ಸರ್ವೇ!

ಇದರ ಉದ್ದೇಶವಿಷ್ಟೆ. ಅರಣ್ಯ, ಕಂದಾಯ ಮತ್ತು ಗಣಿ ಇಲಾಖೆಗಳೆಲ್ಲ ಜಂಟಿಯಾಗಿ ಆಂಧ್ರದ ಮಲಪನಗುಡಿ ಗಡಿಯಲ್ಲಿ ಕಪಟ ಸರ್ವೇ ನಡೆಸುವುದು. ಜನಾರ್ಧನರೆಡ್ಡಿ ಈಗಾಗಲೇ ತಿದ್ದಿದ ಗಡಿಯ ಸ್ಕೆಚ್ಚೇ ಸರಿಯಾದುದ್ದೆಂದು ನಿರ್ಧರಿಸುವುದು. ಅಲ್ಲಿಗೆ ತುಮಟ ಗಣಿಯ ಟಪಾಲ್ ನಾರಾಯಣರೆಡ್ಡಿಯದೇ ತಪ್ಪೆಂದೂ, ಜನಾರ್ಧನರೆಡ್ಡಿ ಈಗಾಗಲೇ ಕರ್ನಾಟಕದ ಗಡಿ ಆಕ್ರಮಿಸಿ ದೋಚಿದ ಅದಿರೆಲ್ಲವೂ ಆಂಧ್ರದ ಪರ್ಮಿಟ್ಟಿನ ಮೇರೆಗೆ ಅಗೆದ ಸೊತ್ತೆಂದೂ, ಅದು ಆಂಧ್ರಕ್ಕೆ ಸೇರಿದ ಭೂಪ್ರದೇಶವೆಂದೂ ಅಧಿಕೃತವಾಗಿ ಅಧಿಕಾರಿಗಳ ಬಾಯಿಂದಲೇ ಘೋಷಿಸಿಬಿಡುವುದು!

ಏಕೆಂದರೆ ಸರ್ವೇ ನಡೆಸುವ ಕಂದಾಯ ಇಲಾಖೆಗೆ ಮಂತ್ರಿಯಾಗಿರುವವನು ಜನಾರ್ಧನರೆಡ್ಡಿಯ ಅಣ್ಣ ಕರುಣಾಕರರೆಡ್ಡಿ. ಗಣಿ ಇಲಾಖೆ, ಅರಣ್ಯ ಇಲಾಖೆ, ಪೊಲೀಸ್ ಇಲಾಖೆಗಳೆಲ್ಲಕ್ಕೂ ರೆಡ್ಡಿಯ ಬಂಟರೇ ಬಂದಿದ್ದಾರೆ. ರೆಡ್ಡಿ ಹಾಕಿದ ಗೆರೆಯನ್ನು ಯಾರೂ ದಾಟುವವರಿಲ್ಲ. ಸಾಲದ್ದಕ್ಕೆ ಕರ್ನಾಟಕದ ಗಡಿ ಒತ್ತುವರಿಗೆ ಸಂಬಂಧಪಟ್ಟಂತೆ ತನಿಖೆ ನಡೆಸಿ ವರದಿ ನೀಡಲೆಂದು ಮುಖ್ಯಮಂತ್ರಿ ಯಡ್ಡಿಯಿಂದ ನೇಮಕಗೊಂಡ ಹಿರಿಯ ಅರಣ್ಯ ಅಧಿಕಾರಿ ಯು.ಬಿ. ಸಿಂಗ್ ಕೂಡ ರೆಡ್ಡಿಯ ಪರಮಾಪ್ತನೇ.

ಅಷ್ಟಕ್ಕೂ ಕರ್ನಾಟಕ ಮತ್ತು ಆಂಧ್ರದ ಗಡಿಯನ್ನು ನಿರ್ಧರಿಸುವುದು ಕೇಂದ್ರ ಸರ್ಕಾರ. ಈ ಬಗ್ಗೆ ಸಿಬಿಐ ತನಿಖೆಯಾಗಬೇಕು. ಕೇಂದ್ರದ ಅಧಿಕಾರಿಗಳು ಸರ್ವೇ ನಡೆಸಿದರಷ್ಟೇ ನಿಷ್ಪಕ್ಷಪಾತ ಗಡಿರೇಖೆ ನಿಗದಿಗೊಳ್ಳಲು ಸಾಧ್ಯ. ಹೀಗಿರುವಾಗ ತಾನೇ ಜಂಟಿ ಸರ್ವೆಗೆ ಆದೇಶ ನೀಡಲು ಜನಾರ್ಧನರೆಡ್ಡಿ ಯಾರು? ಕರ್ನಾಟಕದ ಅಧಿಕಾರಿಗಳು ಮಾತ್ರ ನಡೆಸುವ ಅದು ಹೇಗೆ ಜಂಟಿ ಸರ್ವೆಯಾಗುತ್ತದೆ? ರೆಡ್ಡಿಯ ಹಂಗಿಗೆ ಬಿದ್ದ ಅಧಿಕಾರಿಗಳು ನಡೆಸುವ ಸರ್ವೇ ಹೇಗೆ ತಾನೇ ನಿಷ್ಪಕ್ಷಪಾತವಾಗಿರಲು ಸಾಧ್ಯ?

ಬಹುಶಃ ಈ ವರದಿ ಪ್ರಕಟಗೊಳ್ಳುವ ಹೊತ್ತಿಗೆ ಹಿರಿಯ ಅರಣ್ಯಾಧಿಕಾರಿ ಯು.ಬಿ. ಸಿಂಗ್ ಕರ್ನಾಟಕದ ಗಡಿ ಒತ್ತುವರಿಯಾಗಿಲ್ಲ, ವಿಠಲಾಪುರದ ಹದಿನೈದೆಕರೆ ಮತ್ತು ತುಮಟಿಯ ಇಪ್ಪತ್ತೆಕರೆ ಭೂಪ್ರದೇಶ ಆಂಧ್ರಕ್ಕೇ ಸೇರಿದ್ದು ಎಂದು ತೀರ್ಪು ಕೊಟ್ಟರೆ ಅಚ್ಚರಿಯೇನಿಲ್ಲ. ಏಕೆಂದರೆ ವಿರೋಧಿ ಕಾಂಗ್ರೆಸ್ ಮತ್ತು ಜೆಡಿಎಸ್‌ಗಳ ಪಾಲಿಗದು ವಿಷಯವೇ ಅಲ್ಲವಲ್ಲ?

ಜೈಲಿಗೆ ಹಾಕಬೇಕಿದ್ದ ಗಣಿ ಧಕಾಯಿತರನ್ನು ಮಂತ್ರಿಗಳನ್ನಾಗಿ ಮಾಡಿದ ತಪ್ಪಿಗೆ ಕನ್ನಡಿಗರು ಕನಿಷ್ಠ 35 ಎಕರೆ ಭೂಭಾಗವನ್ನಾದರೂ ಕಳೆದುಕೊಳ್ಳದಿದ್ದರೆ ಹೇಗೆ?

■ ರಾ. ಸೋಮನಾಥ್

...ಉಲ್ಲಂಘಿಸಿ ವಿಠಲಾಪುರದಲ್ಲಿ ಇವತ್ತು ಜನಾರ್ಧನ ರೆಡ್ಡಿ ಗಣಿ ದೋಚಿದ ಜಾಗದಲ್ಲೇ ಮೂರೂವರೆ ಸಾವಿರ ಟನ್ ಅದಿರನ್ನು ಅಗೆದು ಸಾಗಿಸುತ್ತಾರೆ. ಇದರ ವಿರುದ್ಧ 1966ರಲ್ಲಿ ...ಂಡ್ ಟ್ರೇಡರ್ಸ್‌ನವರು ಬಳ್ಳಾರಿಯ ಜಿಲ್ಲಾಧಿಕಾರಿಗಳಿಗೆ ದೂರು ಕೊಡುತ್ತಾರೆ. ಅಂತಿಮವಾಗಿ ಬಳ್ಳಾರಿ ಕರ್ನಾಟಕ ಮುನ್ಸಿಫ್ 1970ರಲ್ಲಿ ಈ ಬಗ್ಗೆ ತೀರ್ಪಿತ್ತು ಕರ್ನಾಟಕಕ್ಕೆ ಸೇರಿದ ಅರಣ್ಯದಲ್ಲಿ ಟಪಾಲ್ ನಾರಾಯಣ ರೆಡ್ಡಿ ಕಂಪೆನಿಯವರು ಅದಿರು ತೆಗೆದದ್ದೇ ತಪ್ಪೆಂದೂ ...ಾಗೇ ಅಗೆದ ತಲಾ ಟನ್ ಅದಿರಿಗೆ ಒಂದು ರೂಪಾಯಿಯಂತೆ ದಂಡ ಕಟ್ಟಬೇಕೆಂದೂ ಆದೇಶಿಸುತ್ತದೆ. (05.387/70 ಬಳ್ಳಾರಿ ಮುನ್ಸೀಫ್ ಕೋರ್ಟ್)

ಆದರೆ ಇದೇ ಕೃತ್ಯವನ್ನು 2005 ರಿಂದ 2007ರ ಮಧ್ಯೆ ಜನಾರ್ಧನ ರೆಡ್ಡಿ ಎಸಗಿದರೆ, ...ಮೂಲಕ ಎಂಟುನೂರು ಕೋಟಿಗೂ ಅಧಿಕ ಮೊತ್ತದ ಅದಿರು ದೋಚಿದರೆ ಈಗ ಮಾತ್ರ ...ಕೆ ಅದು ಗಡಿ ವಿವಾದವಾಗುತ್ತದೆ?

ತನ್ನ ಸರಹದ್ದಿಗೆ ನುಗ್ಗಿದ ಗಣಿಕಳ್ಳನೊಬ್ಬನನ್ನು ಬಂಧಿಸಿ, ಆತ ದೋಚಿದ ಅದಿರನ್ನು ಜಪ್ತಿ ಮಾಡಿಕೊಳ್ಳಬೇಕೇ ಹೊರತು ಆತ ಕೊಟ್ಟ ಯಾವುದೋ ಕಳ್ಳ ಸ್ಕೆಚ್ಚನ್ನು ಅರಣ್ಯಾಧಿಕಾರಿಗಳು ...ಸುಬುತ್ತಾರೆಂದರೆ ಇಲ್ಲಿ ಕಳ್ಳರ್‍ಯಾರು? ದ್ರೋಹಿ ಯಾರು?

ಗಡಿ ಒತ್ತುವರಿಗೂ ಗಣಿ ಲೂಟಿಗೂ ಸರ್ಕಾರಿ ಅಧಿಕಾರಿಗಳ ದ್ರೋಹಕ್ಕೂ ಆಳುವ ...ಪಕ್ಷಗಳ ಆತ್ಮವಂಚನೆಗೂ ಮತ್ತು ನಂಬಿದ ನಾಯಕರ ಕಪಟಕ್ಕೂ ಎಂಥಾ ಸಂಬಂಧವಲ್ಲವೇ?

ಅಳಿಲು ಹುಟ್ಟುವಾಗಲೇ ಮೂರು ಪಟ್ಟೆ ಇರುತ್ತವೆ!

"ಇಂಡಿಯಾದಲ್ಲಿ ಇರುವ ಪಾರ್ಟಿಗಳಲ್ಲೇ ಬಿಜೆಪಿ ಒಳ್ಳೆಯ ಪಾರ್ಟಿ. ನಂಬಿಕೆಗೆ ಯೋಗ್ಯವಾದ ಪಾರ್ಟಿ. ಆ ಪಾರ್ಟಿಯಲ್ಲಿ ಅಲ್ಪಸಂಖ್ಯಾತರು ಆರಾಮವಾಗಿರಬಹುದು. ಸಾಬರು ಸುಖವಾಗಿ ನಮಾಜು ಮಾಡಬಹುದು. ಕ್ರಿಶ್ಚಿಯನ್ನರು ಸದ್ದಿಲ್ಲದೆ ಮತಾಂತರ ಮಾಡಬಹುದು" ಎಂದು ಲಾಟ ಬಸಾಡಿ ಬಿಜೆಪಿ ಸೇರಿದ್ದ ಸಾಂಗ್ಲಿಯಾನ, ವಾಪಸು ಓಡಿ ಬಂದು ನ್ಯೂಕ್ಲಿಯಸ್ ಸೇರಿ ಸುಧಾರಿಸಿಕೊಳ್ಳುತ್ತಿದ್ದಾರಂತಲ್ಲಾ, ಸಾಂಗ್ಲಿಯಾನ ಪ್ರಾಮಾಣಿಕ, ದಕ್ಷ. ಈತನಿಗೆ ಒಂದೆರಡು ಕರಾಟೆ ಹೊಡೆತ ಗೊತ್ತಿದ್ದ ಕಾರಣಕ್ಕೆ ಮಾಧ್ಯಮಗಳು ಮನಸೋ ಇಚ್ಛೆ ಬರೆದು ಬೆಳಕಿಗೆ ತಂದವು. ಬರೆದದ್ದನ್ನೇ ಬಂಡವಾಳ ಮಾಡಿಕೊಂಡು ಬದುಕಿದ್ದ ಸಾಂಗ್ಲಿಯಾನ, ದಿಢೀರನೆ ಬಿಜೆಪಿ ಸೇರಿದಾಗ ಈತನ ಮೂರ್ಖತನಕ್ಕೆ ಮರುಗಿದವರುಂಟು. ಅಳಿಲು ಜನ್ಮತಾಳಿದಾಗಲೇ ಬೆನ್ನಮೇಲೆ ಮೂರು ಪಟ್ಟೆಯಿರುತ್ತದೆ. ಅವು ಸಾಯುವವರೆಗೂ ಹೋಗುವುದಿಲ್ಲ. ಹಾಗೆಯೇ ಬಿಜೆಪಿ ರಚನೆಯಾದಾಗಲೆ ಅದಕ್ಕೆ ಅಂಟಬಂದಿರುವ ಹೀನ ಸುಳಿ ಬೋಳಿಸಿದರೆ ಹೋದೀತೆ ಸಾಂಗ್ಲಿಯಾನ? ಥೂತ್ತೇರಿ!

* * * * * * *

ಒಂದೆಡೆ ಚೆಡ್ಡಿಗಳು, ಇನ್ನೊಂದೆಡೆ ಭಜರಂಗಿಗಳು. ಆಕಡೆ ರೇಣುಕಾಚಾರಿ, ಈಕಡೆ ಶೋಭಾ ಕರಂದ್ಲಾಜೆ. ಇವರ ನಡುವೆ ಸಿಕ್ಕಿ ನಿಜಕ್ಕೂ ಹುಚ್ಚಾಸ್ಪತ್ರೆ ಸೇರುವಂತಾಗಿರುವ ಎಡೂರಪ್ಪ ಸಿಟ್ಟು ಬಂದಾಗ ಮುಖ್ಯಮಂತ್ರಿ ಎಂಬುದನ್ನ ಮರೆತು ವಿರೋಧ ಪಕ್ಷದ ನಾಯಕನಂತೆ ಮಾತನಾಡುತ್ತಾರಂತಲ್ಲಾ, ಇಂಥ ಯಡಿಯೂರಪ್ಪನಿಗೆ ಧೈರ್ಯ ತುಂಬಲಿ ಕೋಸ್ಕರ ಚೆಡ್ಡಿಗಳು "ಯಡಿಯೂರಪ್ಪನವರೇ ನೀವೇನೂ ಹೆದರಬೇಡಿ. ಗುರಿ ಮುಟ್ಟುವವರೆಗೂ ನಿಲ್ಲದಿರಿ. ನಾವು ಸದರಿ ಚರ್ಚ್ ಪ್ರಕರಣವನ್ನು ಕಾಂಗ್ರೆ ಮೇಲೆ ಎತ್ತಿ ಹಾಕುವ ಸಾಕ್ಷಿಗಳನ್ನು ತಯಾರು ಮಾಡುತ್ತೇವೆ. ಮೊದಲನೆಯದಾಗಿ ಹಿಂದೂ ದೇವತೆಗಳನ್ನು ಆಡಿಕೊಳ್ಳುವ ಲೇಖನ ಪ್ರಿಂಟ್ ಮಾಡಿ ಅದನ್ನು ನ್ಯೂಲೈಫ್ ಮೇಲೆ ಹಾಕುತ್ತೇವೆ. ದಾಳಿಯನ್ನು ಕಾಂಗ್ರೆ ತಲೆಗೆ ಕಟ್ಟುತ್ತೇವೆ" ಎಂದು ಯಡಿಯೂರಿಗೆ ಧೈರ್ಯ ತುಂಬಿದರಂತಲ್ಲಾ ಥೂತ್ತೇರಿ!



ಮಗನನ್ನು ಮುಖ್ಯಮಂತ್ರಿ ಮಾಡಿದಷ್ಟೇ ಕಷ್ಟದಿಂದ ಎಡೂರಪ್ಪನನ್ನು ಅಧಿಕಾರಕ್ಕೆ ತಂದಿರುವ ದೇವೇಗೌಡರು, ಎಡೂರಪ್ಪ ಎಲ್ಲೆಡೆ ಕೆರೆದುಕೊಂಡು ಮಾಡಿಕೊಳ್ಳುತ್ತಿರುವ ರಣಗಾಯ ನೋಡಿ ಒಳಗೊಳಗೆ ನಗುತ್ತ ಟವಲ್ ಕೊಡವಿ ಮಂಗಳೂರು ಕಡೆ ಹೋಗಿ ಬಂದವರಂತಲ್ಲಾ, ಅಲ್ಲಿ ಎಲ್ಲರನ್ನು ಮಾತನಾಡಿಸಿ, ಮೊಸಳೆ ಕಣ್ಣೀರು ಹರಿಸಿದ ನಂತರ, ರೇವಣ್ಣನನ್ನ ಮುಂದೆ ಏನಾದರೂ ಮಾಡಬೇಕೆಂಬುದಕ್ಕೆ ಹಲವಾರು ಮಾರ್ಗೋಪಾಯಗಳು ಹೊಳೆದುಬಿಟ್ಟವಂತಲ್ಲಾ, ಅಲ್ಲಿಂದ ಬಂದವರೆ ಕುಮಾರನಿಗೆ ಸನ್ನೆ ಸೂಚನೆ ಕೊಟ್ಟ ಕೂಡಲೇ, ಕುಮಾರ ಕಾಂಗ್ರೆಸ್‌ನವರಿಗಿಂತಲೂ ಒಂದು ಹೆಜ್ಜೆ ಮುಂದೆ ಹೋಗಿ "ಗೃಹಮಂತ್ರಿ ಹಿಜಡ, ಪೋಲೀಸರು ನಪುಂಸಕರು, ನನ್ನ ಕಾಲದಲ್ಲಿ ಪೋಲೀಸರು ಹೇಗಿದ್ರು ನೋಡಿ. ಒಂದೇ ಒಂದು ಹುಕುಂ ಜಾರಿಯಾದ್ರೆ ಸಾಕು, ಬಳ್ಳಾರಿಯಿಂದ ನನ್ನ ವಿರೋಧಿಗಳ ಒಂದು ಲಾರಿಯೂ ಮುಂದೆ ಹೋಗುತ್ತಿರಲಿಲ್ಲ." ಎಂದರಂತಲ್ಲಾ, ಥೂತ್ತೇರಿ!!

* * * * * * *

ಥೂತ್ತೇರಿ

ಯಾಹೂ

ಅಜ್ಜಿಗೆ ಹಸಿವು, ಅರಿವೆ ಚಿಂತೆ; ಮಗಳಿಗೆ ಮದುವೆ, ಮಿಂಡರ ಚಿಂತೆ ಎಂಬಂತೆ ಎಡೂರಪ್ಪ ಗೊಣ್ಣೆಯಲ್ಲಿ ಸಿಕ್ಕಿದ್ದ ನೊಣದಂತಾಗಿರುವಾಗ, ಅತ್ತ ಬಳ್ಳಾರಿ ಗಣಿಕಳ್ಳ ರೆಡ್ಡಿ, ಗಡಿಗಳನ್ನೇ ನುಂಗುತ್ತ ಹೊರಟಿದ್ದಾನಂತಲ್ಲಾ, ಹೀಗೆ ನುಂಗುತ್ತಲೇ "ನಮಗೂ ಯಡ್ಡಿಗೂ ಯಾವ ಮನಸ್ತಾಪವೂ ಇಲ್ಲ, ಅವರು ಅವರ ಕೆಲಸ ಮಾಡುತ್ತಿದ್ದಾರೆ. ನಾವು ನಮ್ಮ ಕೆಲಸ ಮಾಡುತ್ತಿದ್ದೇವೆ. ಯಾರ ಹಂಗಿನಲ್ಲಿ ಯಾರೂ ಇಲ್ಲ" ಎಂದನಂತಲ್ಲಾ, "ಸರಿ ಸ್ವಾಮಿ ಆಂಧ್ರ-ಕರ್ನಾಟಕದ ಗಡಿಯನ್ನೇ ಅಳಿಸಿಹಾಕುತ್ತಿದ್ದೀಯಲ್ಲಾ?" ಎಂದರೆ ಅದೇ ತೆಲುಗು ವರಸೆ ಕನ್ನಡದಲ್ಲಿ "ನೋಡಿ, ಗಡಿಗಳನ್ನ ನಾವು ನಿರ್ಮಿಸಿಕೊಂಡಿದ್ದೇವೆ ಹೊರತು ಗಣಿ ಎಂದೂ ಗಡಿ ನಿರ್ಮಿಸಿಕೊಂಡಿಲ್ಲ. ಅದಕ್ಕೆ ನೋಡಿ ನಾನು ಆಂಧ್ರದಲ್ಲಿ ಉಕ್ಕಿನ ಕಾರ್ಖಾನೆ ಸ್ಥಾಪಿಸಿದ್ದೇನೆ. ಇಲ್ಲಿ ಮಂತ್ರಿಯಾಗಿದ್ದೇನೆ. ವ್ಯವಹಾರ ಅಲ್ಲಿ, ಸೇವೆ ಇಲ್ಲಿ, ಅಧಿಕಾರ ಇಲ್ಲಿ, ಬಂಡವಾಳ ಅಲ್ಲಿ ಹೀಗೆ ನನಗೆ ರಾಜ್ಯಗಳು ನಿರ್ಮಿಸಿಕೊಂಡಿರುವ ಗಡಿಗಳ ಬಗ್ಗೆ ನಂಬಿಕೆಯಿಲ್ಲ" ಎಂದನಂತಲ್ಲಾ, ಥೂತ್ತೇರಿ!!

* * * * * * *

ಚರ್ಚುಗಳ ಮೇಲಿನ ನಿರಂತರ ದಾಳಿಗೆ ಸಂಬಂಧಿಸಿದಂತೆ ಯಾವುದಾದರೂ ದೊಗಳೆ ಚೆಡ್ಡಿಯನ್ನು ಮಾತನಾಡಿಸಬೇಕೆನಿಸಿತಲ್ಲಾ. ಯಾವ ಚೆಡ್ಡಿಯನ್ನೇ ಮಾತನಾಡಿಸಿದರೂ ಒಂದೇ ತರಹ ಮಾತನಾಡುವುದರಿಂದ ದೊಡ್ಡ ಚೆಡ್ಡಿ ಸದಾನಂದಗೌಡರನ್ನೇ ಮಾತನಾಡಿಸಿದರೆ ಹೇಗೆ ಅನ್ನಿಸಿತು. ಕೂಡಲೇ ಫೋನ್ ಮಾಡಲಾಗಿ,

ರಿಂಗ್‌ಟೋನ್: ಓಂ ಶಕ್ತಿ ಓಂ ಶಕ್ತಿ ಧಿಯೋಯೋನ : ಪ್ರಚೋದಯತ್...

"ಹಲೋ? ನಮಸ್ಕಾರ ಸದಾನಂದಗೌಡ್ರಿಗೆ, ನಾನು ಯಾಹು."

"ನಮಸ್ಕಾರ ಯಾಹೂ ಅವರೆ. ಏನು ಸಮಾಚಾರ?"

"ಸಮಾಚಾರವೆಲ್ಲಾ ನಿಮ್ಮದೆ ಆಗಿದೆಯಲ್ಲಾ ಸಾರ್? ಕರ್ನಾಟಕದ ಜನಕ್ಕೆ ನೂರು ದಿನದ ಕಾಣಿಕೆನ ಈ ತರ ಕೊಡ್ತೀರಲ್ಲಾ ಸಾರ್?"

"ಯಾವ ತರಹ ಅಂತ ನೀವು ಹೇಳುವುದು?"

"ಚರ್ಚಿನ ಮೇಲೆ ದಾಳಿ ಮಾಡುಸ್ತಯಿದ್ದೀರಲ್ಲ ಸಾರ್?"

"ಚರ್ಚಿನ ಮೇಲೆ ದಾಳಿ ಮಾಡಿಸಿದ್ದವರು ನಾವು ಅಂತ ನಿಮಗ್ಯಾರು ಹೇಳಿದ್ದು?"

"ಭಜರಂಗಿ ಲೀಡ್ರೆ ಹೇಳ್ತಾಯಿದಾನಲ್ಲ ಸಾರ್?"

"ಅವನಿಗೆ ಮಂಡೆ ಸಮ ಇಲ್ಲ, ಅವ ಹಾಗೆ ಹೇಳದೆಯಿದ್ದರೆ ನಾವು ಇದನ್ನ ಮುಸ್ಲಿಮರ ಮೇಲೆ ಹಾಕುವ ತಯಾರಿ ನಡೆಸಿದ್ದೆವು. ಈ ಜನ ಸುಮ್ಮನೆ ಇದ್ದಿದ್ದರೆ ಹೀಗಾಗುತ್ತಿರಲಿಲ್ಲ"

"ಚರ್ಚಿನ ದಾಳಿಯಿಂದ ಬೇಸರ ಆಗಿದೆಯಾ ಸಾರ್"

"ಬೇಸರ ಯಂತಕ್ಕೆ? ಬೇಸರ ಆಗಲಿಕ್ಕೆ ನನ್ನ ಮನೆಗೆ ಬೆಂಕಿ ಬಿದ್ದಿದೆಯಾ?"

"ನಿಮ್ಮ ಮನೆಗೆ ಬೆಂಕಿ ಬಿದ್ರೆ ಬೇಸರ ಆಗುತ್ತ ಸಾರ್?"

"ಆಗುವುದಿಲ್ಲವೆ? ನಾನು ಕಷ್ಟಪಟ್ಟು ಕಟ್ಟಿದ ಮನೆಗೆ ಬೆಂಕಿ ಬಿದ್ರೆ?"

"ಹಾಗಾದರೆ ಕ್ರಿಶ್ಚಿಯನ್ನರ ಚರ್ಚಿಗೆ ಬೆಂಕಿ ಹಾಕಿ ದಾಳಿ ಮಾಡಿರೋದ್ರಿಂದ ಅವರಿಗೆ ಬೇಸರ ಆಗಲ್ವಾ ಸಾರ್?"

"ಅವರಿಗೆ ಆಗಲಿ ಅಂತ ಹೇಳಿ ನಾವು ಹಾಗೆ ಮಾಡಿದ್ದು. ಕ್ರಿಶ್ಚಿಯನ್, ಮುಸ್ಲಿಂ ನಮ್ಮ ದೇಶಕ್ಕೆ ಹೊರಗಿನಿಂದ ಬಂದ ಧರ್ಮ. ಅವರಿಲ್ಲಿ ಹಿಂದೂ ಧರ್ಮದವರಿಗೆ ಬಗ್ಗಿ ನಡೆಯಬೇಕು. ಇಲ್ಲಾ ಅಂದ್ರೆ ನಾವು ದಾಳಿ ಮಾಡ್ತೇವೆ. ಪ್ರತಿ ದಾಳಿಗೂ ಹೆದರುವುದಿಲ್ಲ ಗೊತ್ತುಂಟ?"

ಥೂತ್ತೇರಿ!!! ■

ಪುಂಡ ಮುಖ್ಯಮಂತ್ರಿ

ಯಡಿಯೂರಪ್ಪ ಇವತ್ತು ಪುಂಡ ಮುಖ್ಯಮಂತ್ರಿ ಅನ್ನಿಸಿಕೊಳ್ಳುವಂತ ಎಲ್ಲಾ ಅಯೋಗ್ಯ ಗುಣಗಳನ್ನು ಪ್ರದರ್ಶಿಸುತ್ತಿದ್ದಾರೆ. ಲೋಕಲ್ ರೌಡಿಗಳೂ, ಬೀದಿ ಪುಂಡರೂ ಮಾಡುವಂತೆ ತಮ್ಮ ಚೆಡ್ಡಿ ಸಂಘಟನೆಯ ಕೆಟ್ಟ ಜನರನ್ನು ಛೂ ಬಿಟ್ಟು ಕ್ರಿಶ್ಚಿಯನ್ನರಿಗೆ ಏಟು ಹಾಕಿಸುತ್ತಿದ್ದಾರೆ. ತನ್ನದೇ ಸಂಘ ಪರಿವಾರ ಯಾವುದೇ ಅಡೆತಡೆಯಿಲ್ಲದೆ, ಕಾಯ್ದೆ ಕಾನೂನಿನ ಭೀತಿಯೂ ಇದರೆ ನಡೆಸುತ್ತಿರುವ ಈ ದುಷ್ಕೃತ್ಯಗಳನ್ನು ವಿರೋಧ ಪಕ್ಷಗಳು ಟೀಕಿಸಬಾರದೆಂದು ಮುಖ್ಯಮಂತ್ರಿ ಫರ್ಮಾನು ಹೊರಡಿಸಿದ್ದಾರೆ.

■ ಬಿಳಿದಾಳೆ ಪಾರ್ವತೀಶ



'ಲಂಕೇಶ್' ಪತ್ರಿಕೆಯು ಇತಿಹಾಸದಲ್ಲಿ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯೊಬ್ಬರನ್ನು ಭ್ರಷ್ಟ ಎಂದಿದ್ದಿದೆ, ಸ್ವಜನಪಕ್ಷಪಾತಿ, ಬೇಜವಾಬ್ದಾರಿ ಎಂದು ಟೀಕಿಸಿದ್ದಿದೆ. ನಿರ್ಲಜ್ಜ ಎಂದು ವಿಮರ್ಶಿಸಿದ್ದೂ ಉಂಟು.

ಆದರೆ 'ಪುಂಡ' ಎಂದು ಯಾವ ಮುಖ್ಯಮಂತ್ರಿಗೂ ಹೇಳಿರಲಿಲ್ಲ... ಒಬ್ಬ ಯಡಿಯೂರಪ್ಪನ ಹೊರತಾಗಿ!

ದುರದೃಷ್ಟವಶಾತ್ ಶ್ರೀಮಾನ್ ಯಡಿಯೂರಪ್ಪ ಇವತ್ತು ಪುಂಡ ಮುಖ್ಯಮಂತ್ರಿ ಅನ್ನಿಸಿಕೊಳ್ಳುವಂತ ಎಲ್ಲಾ ಅಯೋಗ್ಯ ಗುಣಗಳನ್ನು ಪ್ರದರ್ಶಿಸುತ್ತಿದ್ದಾರೆ. ಲೋಕಲ್ ರೌಡಿಗಳೂ, ಬೀದಿ ಪುಂಡರೂ ಮಾಡುವಂತೆ ತಮ್ಮ ಚೆಡ್ಡಿ ಸಂಘಟನೆಯ ಕೆಟ್ಟ ಜನರನ್ನು ಛೂ ಬಿಟ್ಟು ಕ್ರಿಶ್ಚಿಯನ್ನರಿಗೆ ಏಟು ಹಾಕಿಸುತ್ತಿದ್ದಾರೆ. ಈತನ ಬಗಲಲ್ಲಿರುವ ಗೃಹಮಂತ್ರಿ ವಿ.ಎಸ್. ಆಚಾರ್ಯರ ವರ್ತನೆ ಗಮನಿಸಿ ನೋಡಿ. ಈತ ಹೊಟ್ಟೆ ಭರ್ತಿಯಾದ ದೇವಸ್ಥಾನವೊಂದರ ಆಡಳಿತಾಧಿಕಾರಿಯಂತೆ ಕಾಣುತ್ತಿದ್ದಾರೆ ಹೊರತು 6 ಕೋಟಿ ಜನಸಂಖ್ಯೆಯಿರುವ ಕರ್ನಾಟಕದಂತಹ ದೊಡ್ಡ ರಾಜ್ಯದ ಜವಾಬ್ದಾರಿಯುತ ಗೃಹಮಂತ್ರಿ ತರ ಕಾಣುತ್ತಿಲ್ಲ.

ಕಳೆದ ಒಂದು ವಾರದಿಂದ ನಡೆಯುತ್ತಿರುವ ಕ್ರಿಶ್ಚಿಯನ್ನರ ಮೇಲಿನ ವ್ಯವಸ್ಥಿತ ದಾಳಿಗಳ ವಿವರಗಳನ್ನೆಲ್ಲಾ ಒಂದೆಡೆ ಇಟ್ಟು ವಿಶ್ಲೇಷಿಸಿದರೆ ಒಂದಂಶ ಸ್ಪಷ್ಟವಾಗುತ್ತದೆ.

ಯಡ್ಡಿ ಸರ್ಕಾರ ಈ ಹೀನಕೃತ್ಯದಲ್ಲಿ ಶಾಮೀಲಾಗಿದೆ!

ಒಂದು ಕಡೆ 'ನಾವೇ ಈ ದಾಳಿ ನಡೆಸುತ್ತಿರುವುದು' ಎಂದು ಯಡ್ಡಿಯ ಪುಂಡ ಶಿಷ್ಯ ಭಜರಂಗ ದಳದ ಮಹೇಂದ್ರ ಕುಮಾರ್ ರಾಜಾರೋಷವಾಗಿ ಹೇಳಿಕೆ ಕೊಡುತ್ತಿದ್ದರೆ ಮತ್ತೊಂದೆಡೆ ಈ ಮುಖ್ಯಮಂತ್ರಿ 'ಇದೆಲ್ಲಾ ವಿರೋಧ ಪಕ್ಷದವರ ಪಿತೂರಿ' ಎಂದು ಚೀರಿಕೊಳ್ಳುತ್ತಿದ್ದ.

ಇದೆಂತಹ ಅಸಹ್ಯ ನೋಡಿ. ಗಂಧದ ಸ್ಮಗ್ಲರ್ ಮಹೇಂದ್ರ ಕುಮಾರ್ ಸಂಘ ಪರಿವಾರಿಗಳ ಗುಂಪಿನವನು. ಅಂಥವನು ವಿರೋಧ ಪಕ್ಷ ಹೇಗಾಗುತ್ತಾನೆ? ಒಂದು ವೇಳೆ ಯಡ್ಡಿ ಬಡಬಡಿಸಿದಂತೆ ಸರ್ಕಾರದ ಯಶಸ್ಸು, ಪ್ರಗತಿ ಸಹಿಸದ ವಿರೋಧಿಗಳ ಕೈಗೊಂಬೆಯಾಗಿ ಈ ದುಷ್ಕೃತ್ಯ ನಡೆಸಿದ್ದೇ ಆದಲ್ಲಿ ಅವನನ್ನು ಹಿಡಿಸಿ ಒದ್ದು ಒಳಗೆ ಹಾಕಿಸಲು ಯಡ್ಡಿ ಯಾಕೆ ನಾಲ್ಕು ದಿನ ತಡ ಮಾಡಿದರು? ಒಂದು ವೇಳೆ ಕೇಂದ್ರ ಸರ್ಕಾರ ಮಧ್ಯೆ ಪ್ರವೇಶಿಸಿ ಗದರಿ ಸದೇ ಹೋಗದಿದ್ದರೆ ಮಹೇಂದ್ರ ಕುಮಾರ್ ಈಗಲೂ ಮೀಸೆ ತಿರುವಿಕೊಂಡು ಓಡಾಡಿಕೊಂಡಿರುತ್ತಿರಲಿಲ್ಲವೆ?

ಮುಖ್ಯಮಂತ್ರಿ ಯಡಿಯೂರಪ್ಪ ಒಬ್ಬ ಭ್ರಷ್ಟ, ಅವಕಾಶವಾದಿ ಎಂಬುದು ಈಗ ಹಳಸಲು ಮಾತಾಯಿತು. ಇದನ್ನು ಮೀರಿದ, ಹಿಂಸಪಶುವಿನ ಗುಣ ಅತ್ಯಂತ ಅಪಾಯಕಾರಿಯಾಗಿ ಈತನಲ್ಲಿ ಈಗ ಅನಾವರಣಗೊಳ್ಳುತ್ತಿದೆ.

▶▶▶



ಸಚಿವ ಕಾಗೇರಿಯ 'ಮತಾಂತರ' ಪ್ರಯತ್ನಗಳು

ಕರ್ನಾಟಕದ ಎಲ್ಲಾ ಜಾತಿ-ಧರ್ಮಗಳ ವಿದ್ಯಾರ್ಥಿಗಳಿಗೆ ಇನ್ನುಮುಂದೆ ಶಾಲೆಯಲ್ಲಿ 'ಭಗವದ್ಗೀತೆ' ಓದಿಸಲು ಶಿಕ್ಷಣ ಸಚಿವ ಕಾಗೇರಿ ನಿರ್ಧರಿಸಿದ್ದಾರೆ!

ಇಂತಾದ್ದೊಂದು ಆದೇಶ ಹೊರಡಿಸುವ ಯೋಚನೆಯಿದೆ ಎಂದು ಕಾಗೇರಿ ಅಲ್ಲಲ್ಲಿ ಹೇಳಿಕೊಂಡು ಬರುತ್ತಿದ್ದಾರೆ. ಅಂದರೆ ಇದರರ್ಥ ಇಡೀ ಶಿಕ್ಷಣ ವ್ಯವಸ್ಥೆಯನ್ನೇ 'ಬ್ರಾಹ್ಮಣೀಕರಿಸುವ' ಪಿತೂರಿ!

ಜಾತಿಭೇದ, ವರ್ಗಭೇದವನ್ನು ಪ್ರತಿಪಾದಿಸುವ ಭಗವದ್ಗೀತೆ ಅದ್ಯಾವ ರೀತಿಯಲ್ಲಿ ನಮ್ಮ ಮಕ್ಕಳು ಕಲಿಯಬೇಕಾದ ಒಂದು ಮಹಾನ್ ಗ್ರಂಥ ಎಂಬುದನ್ನು ಕಾಗೇರಿ ಸ್ಪಷ್ಟಪಡಿಸಿಲ್ಲ.

ಒರಿಸ್ಸಾದಲ್ಲಿ ಕ್ರೈಸ್ತರ ಮೇಲೆ ಬಜೆಪಿಗಳು ನಡೆಸಿದ ದಾಳಿ ಖಂಡಿಸಿ ಒಂದು ದಿನ ಶಾಲೆ-ಕಾಲೇಜು ಬಂದ್ ಮಾಡಿದ ಕ್ರಿಶ್ಚಿಯನ್ ಶಿಕ್ಷಣ ಸಂಸ್ಥೆಗಳ ವಿರುದ್ಧ ಕಾನೂನು ಕ್ರಮದ ಬೆದರಿಕೆ ಹಾಕಿರುವ ಕಾಗೇರಿಗೆ ಭಗವದ್ಗೀತೆಯೂ ಕೇವಲ 'ಬ್ರಾಹ್ಮಣ ಧರ್ಮ'ದ ಪ್ರಚಾರ ಮಾಡುತ್ತದೆ ಎಂಬುದು ತಪ್ಪಾಗಿ ಕಾಣುತ್ತಿಲ್ಲ.

ಅಂಬೇಡ್ಕರ್, ಜ್ಯೋತಿಬಾಫುಲೆ, ಪೆರಿಯರ್‌ರಂತಹ ದಮನಿತ ಜನತೆಯ ನಾಯಕರು 'ಭಗವದ್ಗೀತೆ'ಯನ್ನು ಉದ್ದಕ್ಕೂ ಖಂಡಿಸಿಕೊಂಡೇ ಬಂದಿದ್ದರು. ಇಂಥ ಜೀವ ವಿರೋಧಿ ಗ್ರಂಥವನ್ನು ಮುಗ್ಧ ಶಾಲಾ ಮಕ್ಕಳಿಗೆ ಬೋಧಿಸುವ ಪ್ರಯತ್ನಗಳೂ ಎಲ್ಲರನ್ನು 'ಬ್ರಾಹ್ಮಣಶಾಹಿ' ಸಿದ್ಧಾಂತದಡಿ ಕಟ್ಟಿಹಾಕುವ 'ಮತಾಂತರದ ಪ್ರಯತ್ನಗಳಲ್ಲವೆ?

ಬೆಲೆ ಏರಿಕೆ, ಭ್ರಷ್ಟಾಚಾರ, ಗೊಬ್ಬರ ಕೊರತೆ ಎಲ್ಲಾ ಮೂಲೆಗುಂಪು

ಕರ್ನಾಟಕದ ಜನ ಗಂಭೀರವಾಗಿ ಯೋಚಿಸಬೇಕಾದ ವಿಚಾರ ಇದು.

ಬಿಜೆಪಿಯನ್ನು ಗೆಲ್ಲಿಸಿ ಅಧಿಕಾರಕ್ಕೆ ತಂದು ಕೂರಿಸಿದ ಮೇಲೆ ರಾಜ್ಯದ ನಾನಾ ಭಾಗಗಳಲ್ಲಿ ಜನರು ಎದುರಿಸುತ್ತಿರುವ ಕಷ್ಟಗಳೆಲ್ಲಾ ಈಗ ಭಜರಂಗಿಗಳ ಪುಂಡಾಟಿಕೆಗಳಿಂದಾಗಿ ಮೂಲೆಗುಂಪಾಗಿ ಹೋಗಿವೆ.

ಬಿಜೆಪಿ ಅಧಿಕಾರಕ್ಕೆ ಬಂದ ಹೊಸತರಲ್ಲೇ ರೈತರಿಗೆ ಬಿತ್ತನೆ ಬೀಜ, ರಸಗೊಬ್ಬರ ಕೊರತೆ ಉಂಟಾಗಿತ್ತು. ಈ ಕೊರತೆ ಬಿಕ್ಕಟ್ಟಿಗೆ ತಿರುಗಿ ಗೋಲಿಬಾರ್ ನಡೆದು ಇಬ್ಬರು ರೈತರ ರಕ್ತತರ್ಪಣೆಯೂ ಆಗಿಹೋಯಿತು. ಆದರೆ ಈ ಸಮಸ್ಯೆ ಬಗೆಹರಿಯಿತಾ ಅಥವಾ ಇಲ್ಲವಾ ಎಂಬುದು ಮತಾಂತರದ ಸುಳ್ಳು ಆರೋಪಗಳಡಿ ಕೇಳಿಸುತ್ತಲೇ ಇಲ್ಲ.

ಯಡಿಯೂರಪ್ಪ ಮತ್ತವರ ಪುಂಡರ ಗುಂಪಿನ ವರ್ಗಾ ದಂಧೆ, ಲ್ಯಾಂಡ್ ಡೀಲುಗಳು, ಅಕ್ರಮ ವ್ಯವಹಾರಗಳೂ ಯಾರ ಗಮನಕ್ಕೂ ಬರದಂತಾಗಿ ಹೋಗಿವೆ. ಪ್ರವಾಹದ ಸಂಕಷ್ಟಗಳಿಗೆ ಸಿಲುಕಿದ್ದ ಲಕ್ಷಾಂತರ ಜನರಿಗೆ ಒಪ್ಪೊತ್ತಿನ ಗಂಜಿಯಾದರೂ ಸಿಕ್ಕಿತಾ ಎಂಬುದಂತೂ ಯಾರಿಗೂ ಗೊತ್ತಾಗುತ್ತಿಲ್ಲ. ಈ ಚೆಂದಕ್ಕೆ ಜನ ಬಿಜೆಪಿಗಳಿಗೆ ಓಟು ಹಾಕಬೇಕಿತ್ತಾ?

ಬೀದಿ ಪುಂಡರಿಗೂ ಸರ್ಕಾರ ನಡೆಸುವವರಿಗೂ ವ್ಯತ್ಯಾಸವೇ ಇರದ ಸ್ಥಿತಿ ಇವತ್ತು ಕರ್ನಾಟಕದಲ್ಲಿದೆ.

ಜನ ಚೆಡ್ಡಿಗಳ ಈ ದೊಂಬಿ, ಅನಗತ್ಯ ದಾಂಧಲೆಗಳ ಬಗ್ಗೆ ಇನ್ನು ಮುಂದಾದರೂ ತಿರಸ್ಕಾರ ಬೆಳೆಸಿಕೊಳ್ಳದೇ ಹೋದರೆ ಬಹುಶಃ ಕರ್ನಾಟಕ ಮುಂದೆಂದೂ ನೆಮ್ಮದಿ ಕಾಣಲಾರದು.




ಆಂತೂ ಇಂತೂ ಕಾಂಗ್ರೆಸ್‌ಗೆ ಎಚ್ಚರಾಯಿತು – ಜೆಡಿಎಸ್ ಆವಾದಕ್ಕೆಳಿಯಿತು



ಕನಿಷ್ಠ ಇದೊಂದಾದರೂ ಸಮಾಧಾನಕರ ಬೆಳವಣಿಗೆ ರಾಜ್ಯ ರಾಜಕಾರಣದಲ್ಲಿ ಈಗ ಕಂಡುಬಂದಿದೆ.

ಯಾವಾಗ ಕರಾವಳಿಯಲ್ಲಿ ಕ್ರೈಸ್ತರ ವಿರುದ್ಧ ಯಡ್ಡಿ ಸರ್ಕಾರ ದಾಳಿಗಿಳಿಯಿತೋ ಕೂಡಲೇ ವಿರೋಧಿ ನಾಯಕರು ಮೈಚಳಿ ಬಿಟ್ಟು ಕರಾವಳಿಯುದ್ದಕ್ಕೂ ಓಡಾಡಿ ಬಂದಿದ್ದಾರೆ.

ಖರ್ಗೆ, ಎಂ.ಪಿ. ಪ್ರಕಾಶ್ ನೊಂದವರ ಬಳಿಗೇ ಹೋಗಿ ಧೈರ್ಯ ನೀಡಿ ಬಂದರೆ, ಎಐಸಿಸಿ ನಾಯಕ ಮೊಯ್ಲಿ 'ಸರ್ಕಾರ ವಜಾ ಮಾಡಿಸ ಬೇಕಾಗುತ್ತೆ ಹುಷಾರ್' ಎಂದು ಯಡ್ಡಿಗೆ ಗದರಿಸಿದ್ದು ನಿಜಕ್ಕೂ ಪರಿಣಾಮ ಬೀರಿತು. ಕಿಂಚಿತ್ತಾದರೂ ಮಾನ ಮರ್ಯಾದೆಯಿರುವ ಯಾವನೇ ಮುಖ್ಯಮಂತ್ರಿಗೆ ಈ ಮಾತುಗಳು ಕೆನ್ನೆಗೆ ಹೊಡೆದಂತೆ. ಆದರೆ ಯಡಿಯೂರಪ್ಪ ನಿಗೆಲ್ಲಿಂದ ಬರಬೇಕು ಮಾನ-ಮರ್ಯಾದೆಗಳು?



ಇದುವರೆಗೂ ಬಿಜೆಪಿ ಪುಂಡರು ಮುಸ್ಲಿಂ-ದಲಿತ-ಕ್ರೈಸ್ತರ ವಿರುದ್ಧ ಏನೆಲ್ಲಾ ದೊಂಬಿ ಮಾಡಿಕೊಂಡು ಹೋದರೂ ಕಂಡೂ ಕಾಣದಂತೆ ಇರುತ್ತಿದ್ದ ಕಾಂಗ್ರೆಸ್‌ನವರು ಈ ಬಾರಿ ಕೊಂಚ ದಿಟ್ಟತನದಿಂದ ಪ್ರತಿಕ್ರಿಯಿಸಿರುವುದು ನಿಜಕ್ಕೂ ಆಶಾದಾಯಕವಾಗಿದೆ.


ಹಾಗೆ ಹೇಳಬೇಕೆಂದರೆ ಕಾಂಗ್ರೆಸ್‌ಗಿಂತ ಜೆಡಿಎಸ್ ಇನ್ನೂ ಒಂದೆರಡು ಹೆಜ್ಜೆ ಮುಂದಕ್ಕೇ ಹೋಯಿತು.

ದಳದ ನಾಯಕ ದೇವೇಗೌಡರು ಮಂಗಳೂರಿಗೇ ಹೋಗಿ ಬಿಜೆಪಿಗಳನ್ನು ಹಿಗ್ಗಾಮುಗ್ಗಾ ಟೀಕಿಸಿ ಬಂದರು. ಇತ್ತ ಕುಮಾರಸ್ವಾಮಿ ಬೆಂಗಳೂರಿನಲ್ಲಿ ಬೃಹತ್ ಪ್ರತಿಭಟನೆ ನಡೆಸಿ 'ಭಜರಂಗದಳ, ವಿಶ್ವಹಿಂದೂ ಪರಿಷತ್‌ಗಳು ದೇಶದ್ರೋಹಿಗ'ಳೆಂದು ಅಪರೂಪದ, ಧೈರ್ಯದ, ಸತ್ಯದ ಹೇಳಿಕೆ ನೀಡಿದರು.

ಜೆಡಿಎಸ್ ಹಾಗೂ ಕಾಂಗ್ರೆಸ್ ಪಕ್ಷಗಳೇನಾದರೂ ಬಿಜೆಪಿಗಳ ಈ ಕೋಮುವಾದಿ ನೀಚ ಚಟುವಟಿಕೆಗಳನ್ನು ನಿಜಕ್ಕೂ ತುಳಿದು ಹಾಕಬೇಕೆಂದು ಹೊರಟರೆ ಅದೇನೂ ಕಷ್ಟದ ಕೆಲಸವಲ್ಲ. ಎಲ್ಲಾ ಹಿಂದೂಗಳೂ ಸಂಘ ಪರಿವಾರದವರಲ್ಲ. ಅದೇರೀತಿ ಸಂಘ ಪರಿವಾರವೆಂದರೆ ಇಡೀ ರಾಜ್ಯದ ಜನರ ವಕ್ತಾರರೂ ಅಲ್ಲಾ ಎಂಬ ಸತ್ಯ ಇವೆರಡೂ ಪಕ್ಷಗಳಿಗೆ ಅರ್ಥವಾದರೆ ಸಾಕು. ಅವತ್ತು ನಿಜವಾಗಲೂ ಸೆಕ್ಯುಲರ್‌ವಾದಿಗಳ ಹೋರಾಟಕ್ಕೆ ನೂರಾನೆ ಬಲ ಸಿಗುತ್ತದೆ.

ಬಿಜೆಪಿಗಳು ಕಟ್ಟುತ್ತಿರುವ ಈ ಅಸಹ್ಯ 'ಹಿಂದೂ ರಾಜ್ಯ'ದ ತಳಹದಿಯನ್ನು ಚಿಂದಿ ಎಬ್ಬಿಸದೇ ಹೋದರೆ ಕಾಂಗ್ರೆಸ್-ದಳ ಇಬ್ಬರಿಗೂ ರಾಜಕೀಯದಲ್ಲಿ space ಉಳಿಯುವುದಿಲ್ಲ ಎಂಬ ಸತ್ಯ ಗೊತ್ತಾಗಬೇಕಿದೆ.

ಈ ಸಂದರ್ಭದಲ್ಲಿ ಕುಮಾರಸ್ವಾಮಿ ಒಬ್ಬ ಜವಾಬ್ದಾರಿಯುತ, ಪ್ರಬುದ್ಧ ನಾಯಕನಂತೆ ವರ್ತಿಸುತ್ತಿರುವುದು ಮೆಚ್ಚಬೇಕಾದ ಸಂಗತಿ.



ಭಜರಂಗದಳವೇ ಕಾನೂನಾ?

ಹತ್ತಾರು ಉಪಗುಂಪುಗಳಿರುವ ಕ್ರಿಶ್ಚಿಯನ್ನರಲ್ಲಿ ನ್ಯೂಲೈಫ್ ಚರ್ಚ್ ಕೂಡಾ ಒಂದಾಗಿದೆ. ಹಿಂದೂ ದೇವತೆಗಳನ್ನು ಅವಹೇಳನ ಮಾಡಿರುವ ಪುಸ್ತಕಗಳನ್ನು ನ್ಯೂ ಲೈಫ್‌ನವರು ಹಂಚಿ ಮತಾಂತರ ಮಾಡುತ್ತಿದ್ದಾರೆ, ಅಂತ ಪುಸ್ತಕವನ್ನು ಹೈದರಾಬಾದಿನವನೊಬ್ಬ ಬರೆದಿದ್ದಾನೆ ಎಂದು ಕೆಲವರು ಹೇಳಿದರೆ ಮತ್ತೊಂದೆಡೆ ಅದು ಬೆಟಗೇರಿಯಲ್ಲಿ ಪ್ರಿಂಟಾಗಿದೆ. ಬರೆದವರ್ಯಾರೋ ಗೊತ್ತಿಲ್ಲ ಎನ್ನಲಾಗುತ್ತಿದೆ. ಹಾಗಿದ್ದ ಮೇಲೆ ಬೆಟಗೇರಿಯಲ್ಲಿ ಪ್ರಿಂಟಾಗಿದೆ ಎನ್ನಲಾದ ತೀರಾ ಕೆಟ್ಟ ಭಾಷೆಯ ಪುಸ್ತಕವನ್ನು ಭಜರಂಗಿಗಳೇ ಪ್ರಿಂಟು ಮಾಡಿಸಿ ಹಂಚಿ ಆಮೇಲೆ ತಾವೇ ದಾಳಿಕರೆದು ಜಗಳ ಶುರು ಮಾಡಿದ್ದಾರೆಂಬ ಅನುಮಾನಗಳೂ ಇದೆಯಲ್ಲ.



ಭಜರಂಗಿಗಳಿಂದಲೂ ಏಟು..

ಗೃಹಮಂತ್ರಿ ಆಚಾರ್ಯ ಇದನ್ಯಾಕೆ ತನಿಖೆ ಮಾಡಿಸುತ್ತಿಲ್ಲ?

ಸೆಪ್ಟೆಂಬರ್ 14 ರ ಬೆಳಗ್ಗೆ ಒಂದೇ ಸಾರಿ 14 ಚರ್ಚ್‌ಗಳ ಮೇಲೆ ದಾಳಿ ನಡೆಸಿದ ಮೇಲೆ ಇದೇ ಭಜರಂಗಿ ಮಹೇಂದ್ರ ಕುಮಾರ್ ಮಂಗಳೂರಿನಲ್ಲಿ ಒಂದು ಪತ್ರಿಕಾಗೋಷ್ಠಿ ನಡೆಸಿದ.

'ದಾಳಿ ನಾವೇ ಮಾಡಿದ್ದು' ಅಂತಲೂ ಹೇಳಿಕೆ ಕೊಟ್ಟ. ಅವತ್ತು ಅವನ ಅಕ್ಕಪಕ್ಕ ಎಂ.ಬಿ. ಪುರಾಣಿಕ, ರಮೇಶ್ ಹಾಗೂ ದಯಾನಂದ [illegible] ಎಂಬ ಇನ್ನು ಮೂವರು ಭಜರಂಗಿಗಳಿದ್ದರು.

ಚರ್ಚ್ ನಾಶ, ಶಿಲುಬೆಗಳ ಧ್ವಂಸ, ಜನರ ಮೇಲಿನ ಹಲ್ಲೆ, [illegible] ಇರಿತದಂತಹ ನೀಚ ಕೃತ್ಯಗಳು ಘಟಿಸಿದ ಮೇಲೂ ಮಂಗಳೂರು ಪೊಲೀಸರು ಇವತ್ತಿಗೂ ಈ ಮೂವರನ್ನು ಅರೆಸ್ಟ್ ಮಾಡಿಲ್ಲ.

ಏನಿದರ ಅರ್ಥ?

ಮಂಗಳೂರಿನ ಅಡೋರ್‌ನೆಸ್ ಚರ್ಚಿನ ಯೇಸು ಪ್ರತಿಮೆ ಮುರಿದು, ಕುಂದಾಪುರದ ಪಾದ್ರಿಯೊಬ್ಬರ ಕಾರಿಗೆ ಬೆಂಕಿ ಹಾಕಿ, ಉಡುಪಿ ಬಳಿ ಚರ್ಚಿಗೆ ಹೊರಟಿದ್ದ [illegible] ನಿರ್ಜನ ಪ್ರದೇಶದಲ್ಲಿ [illegible] ಚೂರಿ ಹಾಕಿ ಹೋಗಿರುವ ಮಹೇಂದ್ರ ಕುಮಾರನ ಗ್ಯಾಂಗಿಗೆ ಯಡ್ಡಿ ಸರ್ಕಾರದ ಪೊಲೀಸರ ಬಗ್ಗೆ ಕಿಂಚಿತ್ತೂ ಭಯ ಇದ್ದಂತಿಲ್ಲ. ಪರಿಸ್ಥಿತಿ ಕೈ ಮೀರುತ್ತಾ ಹೋಯಿತು. ಯಡಿಯೂರಪ್ಪ ಮಾತ್ರ ಅಪ್ಪಟ [illegible] ಪ್ರಚಾರಕನಂತೆ 'ಮತಾಂತರ ಮಾಡುತ್ತಿರುವ ಚರ್ಚ್‌ಗಳ ಮೇಲೆ ಮಾತ್ರ ದಾಳಿ ಆಗುತ್ತಿದೆ' ಎಂದು [illegible] ಮಾಡಿಬಿಟ್ಟರು. ಮತ್ತೊಂದೆಡೆ ವಿ.ಎಸ್. ಆಚಾರ್ಯ '[illegible] ಬಗ್ಗೆ ತನಿಖೆ ನಡೆಸುತ್ತೇವೆ' ಎಂದರೆ [illegible] ಭಜರಂಗಿಗಳನ್ನು ಕಂಟ್ರೋಲ್ ಮಾಡುವ [illegible] ಯಾರೂ ತಕ್ಕ [illegible] ಪ್ರತಿಕ್ರಿಯೆಗಳಿಲ್ಲ.

ಕ್ರಿಶ್ಚಿಯನ್ನರ ಆಕ್ರೋಶ ಸ್ಫೋಟಗೊಳ್ಳಲು ಇದೇ ಪ್ರಧಾನ ಕಾರಣ. [illegible] ಅವರು ಪೊಲೀಸರೊಂದಿಗೆ ಬೀದಿ ಕಾಳಗ ನಡೆಸುವ ಮೂಲಕ ಕರ್ನಾಟಕದ ಪ್ರತಿಭಟನಾ ಚಳವಳಿಗೊಂದು ಹೊಸ ಭಾಷ್ಯ ಬರೆದುಬಿಟ್ಟರು. ಇದುವರೆಗೂ ಭಜರಂಗದಳದವರ ದಾಳಿಗಳಿಂದ ಕ್ರಿಶ್ಚಿಯನ್ನರು ತಪ್ಪಿಸಿಕೊಳ್ಳದಂತೆ ಕಾವಲು ಕಾಯುತ್ತಿದ್ದ ಪೊಲೀಸರಿಗೆ ಇದು ಅನಿರೀಕ್ಷಿತ ತಿರುಗೇಟಾಗಿತ್ತು. ಕಾಯ್ದೆ ಕಾನೂನು ರಕ್ಷಣೆ ಮರೆತು ಸಮಾಜದ್ರೋಹಿಗಳ ಚೇಲಾಗಳಂತೆ ವರ್ತಿಸುತ್ತಿದ್ದ ಪೊಲೀಸರು ಆ ನಂತರವೂ ತಮ್ಮ ತಪ್ಪು ತಿದ್ದಿಕೊಳ್ಳದೆ ಪುನಃ ಕ್ರಿಶ್ಚಿಯನ್ನರನ್ನೇ ಬೆರೆಸಾಡಿ ಚಚ್ಚಿ ಹಾಕಿದರು.

ಮಂಗಳೂರಿನ ಪೆರ್ಮನ್ನೂರು ಚರ್ಚ್ ಹಾಗೂ ಕುಲಶೇಖರದ ಕ್ರೈಸ್ತ ದೇವಾಲಯಗಳಿಗೆ ನುಗ್ಗಿದ ಪೊಲೀಸರು ಲಾಠಿಯಿಂದ ಬಾರಿಸಿದ್ದು ಕ್ರೈಸ್ತರಿಗೇನೇ!

ಕಳೆದ ನಾಲ್ಕಾರು ದಿನಗಳಿಂದ ಮಂಗಳೂರು, ಉಡುಪಿ, ಚಿಕ್ಕಮಗಳೂರು, ಬೆಂಗಳೂರು, ದಾವಣಗೆರೆ, ಕೋಲಾರಗಳಲ್ಲಿ ಚರ್ಚ್‌ಗಳ ಮೇಲೆ ದಾಳಿ ನಡೆಸಿದ ಒಬ್ಬಾನೊಬ್ಬ ಯಡ್ಡಿ ಗುಂಪಿನವರನ್ನು ಬಂಧಿಸಲಾಗದ ಪೊಲೀಸರು ತಮ್ಮ ಹೊಡೆಯುವ ಚಟ ತೀರಿಸಿಕೊಳ್ಳಲು ಕೊನೆಗೆ ಕ್ರೈಸ್ತರನ್ನೇ ಆರಿಸಿಕೊಂಡಿದ್ದು ವಿಪರ್ಯಾಸಕರವಾಗಿತ್ತು.

ಮಂಗಳೂರಿನ ಸರ್ಕಲ್ ಇನ್ಸ್‌ಪೆಕ್ಟರ್ ಗಣಪತಿ ಮಹಿಳೆಯರು ಮಕ್ಕಳೆನ್ನದೆ ಲಾಠಿ ಬೀಸುತ್ತಾ ಹುಚ್ಚನಂತೆ ಅಟ್ಟಾಡಿಸಿದ್ದು ನೋಡಿದರಿಗೆ ಇವನೇನು ಪೊಲೀಸಾ ಇಲ್ಲಾ ಭಜರಂಗಿಯಾ ಎಂಬ ಅನುಮಾನ ಮೂಡಿಸುವಂತಿತ್ತು.

ಇಷ್ಟೆಲ್ಲಾ ಸರ್ಕಾರಿ ಬೆಂಬಲಿತ ದಾಂಧಲೆಗಳು ನಡೆದು ಕೇಂದ್ರ ಸರ್ಕಾರದಿಂದ ಎಚ್ಚರಿಕೆ ಸಂದೇಶ ಪಡೆದುಕೊಂಡ ಮೇಲೂ ಯಡಿಯೂರಪ್ಪ ಬದಲಾಗುವಂತೆ ಕಾಣುತ್ತಿಲ್ಲ.

ಈ ಭಾನುವಾರ ಬೆಂಗಳೂರಿನಲ್ಲಿ ಮತ್ತೆ ಮೂರು ಚರ್ಚ್‌ಗಳ ಮೇಲೆ ದಾಳಿಯಾಗಿದೆ.

ತನ್ನದೇ ಸಂಘ ಪರಿವಾರ ಯಾವುದೇ ಅಡೆತಡೆಯಿಲ್ಲದೆ, ಕಾಯ್ದೆ ಕಾನೂನಿನ ಭೀತಿಯೂ ಇಲ್ಲದೆ ನಡೆಸುತ್ತಿರುವ ಈ ದುಷ್ಕೃತ್ಯಗಳನ್ನು ವಿರೋಧ ಪಕ್ಷಗಳು ಟೀಕಿಸಬಾರದೆಂದು ಮುಖ್ಯಮಂತ್ರಿ ಫರ್ಮಾನು ಹೊರಡಿಸಿದ್ದಾರೆ. ಟೀಕೆಗೆ ಬದಲಾಗಿ ಸರ್ಕಾರದೊಂದಿಗೆ ಸಹಕರಿಸುವಂತೆಯೂ ಯಡ್ಡಿ ಕರೆ ಕೊಟ್ಟಿದ್ದಾರೆ. ಅಂದರೆ ಕ್ರಿಶ್ಚಿಯನ್ನರು, ಮುಸ್ಲಿಮರ ಮೇಲಿನ ಯಡ್ಡಿ ಸರ್ಕಾರದ ದಾಳಿಗಳಿಗೆ ವಿರೋಧ ಪಕ್ಷಗಳೂ ಬೆಂಬಲ ನೀಡಬೇಕಂತೆ!



ಪೊಲೀಸರಿಂದಲೂ ಏಟು..

ಯಡಿಯೂರಪ್ಪ ಈ ನಾಟಕಗಳನ್ನು ತಕ್ಷಣ ನಿಲ್ಲಿಸದಿದ್ದರೆ ನಾಳೆ ಜನರೇ ಪಾಠ ಕಲಿಸುತ್ತಾರೆ.

ತುರ್ತು ಸಂಪುಟ ಸಭೆ, ಪೊಲೀಸ್ ಅಧಿಕಾರಿಗಳ ಸಭೆ, ವೀಡಿಯೋ ಕಾನ್ಫರೆನ್ಸ್‌ಗಳಂತಹ ನಕಲಿ ಕೆಲಸಗಳನ್ನು ಮಾಡುತ್ತಲೇ ಮತ್ತೊಂದೆಡೆ ಯಡ್ಡಿ ತಮ್ಮ ಭಜರಂಗಿ ಭಂಟರಿಗೆ ಕುಮ್ಮಕ್ಕು ನೀಡುತ್ತಿರುವುದು ಸ್ಪಷ್ಟವಾಗಿ ಕಾಣುತ್ತಿದೆ.

[illegible] ಮುಖ್ಯಮಂತ್ರಿಯೇ ಹೀಗೆ ಪುಂಡಾಟ, ದಮನ, [illegible]ಗಳಿಗೆ ಕುಮ್ಮಕ್ಕು ಕೊಟ್ಟ ಉದಾಹರಣೆ ಕರ್ನಾಟಕದ ಇತಿಹಾಸದಲ್ಲೇ ನಡೆದಿರಲಿಲ್ಲ.

ಯಡಿಯೂರಪ್ಪ ಒಬ್ಬ ಪುಂಡ ಮುಖ್ಯಮಂತ್ರಿಯಲ್ಲದೇ ಬೇರೇನೂ ಅಲ್ಲ. ■

ಸ್ವಯಂ ರಕ್ಷಣೆಗಾಗಿ ಒಂದು ನೆಟ್‌ವರ್ಕ್



ರಾಜ್ಯದ ಕ್ರಿಶ್ಚಿಯನ್ನರ ಪರಿಸ್ಥಿತಿ ಈಗ ಹೇಗಾಗಿ ಹೋಗಿದೆಯೆಂದರೆ...

ಅವರು ತಮ್ಮ ರಕ್ಷಣೆಗಾಗಿ ಯಡ್ಡಿ ಸರ್ಕಾರವನ್ನು ನಂಬಿ ಕೂರುವಂತಿಲ್ಲ. ಇನ್ನು ಪೊಲೀಸರು ಅವರ ನಂಬಿಕೆಯನ್ನು ಈಗಾಗಲೇ ಕಳೆದುಕೊಂಡು ಬಿಟ್ಟಿದ್ದಾರೆ.

ಇಂಥ ವಿಷಮ ಪರಿಸ್ಥಿತಿಯಲ್ಲಿ ಏನಾಗಬೇಕೋ ಅದೇ ಈಗ ಸ್ಪಷ್ಟ ರೂಪ ಪಡೆಯುತ್ತಿದೆ.

ಕ್ರಿಶ್ಚಿಯನ್ನರು ಸ್ವಯಂ ರಕ್ಷಣೆಗಾಗಿ ತಮ್ಮದೇ ಆದ ನೆಟ್‌ವರ್ಕ್ ಒಂದನ್ನು ರೂಪಿಸಿಕೊಳ್ಳುತ್ತಿದ್ದಾರೆ. ಈ ಯಡಿಯೂರಪ್ಪನ ಪುಂಡರ ಗುಂಪು "ನಾವು ನ್ಯೂ ಲೈಫ್ ಚರ್ಚಿನವರ ಮೇಲೆ ಮಾತ್ರ ದಾಳಿ ಮಾಡುತ್ತೇವೆ. ಕ್ಯಾಥೋಲಿಕರು, ಪ್ರಾಟೆಸ್ಟಂಟ್‌ರು ಮೇಲಲ್ಲ ಎಂದು ಕ್ರಿಶ್ಚಿಯನ್ನರನ್ನೇ ವಿಭಜಿಸುವ ಪಿತೂರಿ ನಡೆಸಿದ್ದಾರಾದರೂ ಈಗ ಯಾರೂ ಅವರ ಮಾತನ್ನು ನಂಬುತ್ತಿಲ್ಲ.

ಬೆಂಗಳೂರಿನಲ್ಲಿ ಈಗ ಅಂತಹ ಆತ್ಮರಕ್ಷಣೆಯ ತಂಡಗಳ ರಚನೆಗೆ ಚಾಲನೆ ನೀಡಲಾಗುತ್ತಿದೆ.


ಕ್ರಿಶ್ಚಿಯನ್ನರ ಮೇಲೆ ದಾಳಿ ನಡೆಯುತ್ತಿರುವ ವಿಚಾರ ಗೊತ್ತಾದ ಕೂಡಲೇ ತಮ್ಮ network ಮೂಲಕ ಆ ಸ್ಥಳಕ್ಕೆ ಎಲ್ಲೆಡೆಯಿಂದ ಜನರನ್ನು ಕರೆಸಿ ಸ್ವಯಂರಕ್ಷಣೆ ಮಾಡಿಕೊಳ್ಳುವುದು. ಯಡಿಯೂರಪ್ಪನ ಪುಂಡರ ಗುಂಪನ್ನು ಸಾಧ್ಯವಾದರೆ ಹಿಡಿದು ಪೊಲೀಸರಿಗೆ ಒಪ್ಪಿಸುವುದು ಸಧ್ಯದ ಅವರ ಉದ್ದೇಶವಾಗಿದೆ. [illegible] ವೇಳೆ ಪೊಲೀಸರೇನಾದರೂ ಮಂಗಳೂರಿನಲ್ಲಿ [illegible] ಮತ್ತೆ ನೊಂದ ಕ್ರಿಶ್ಚಿಯನ್ನರ [illegible] ಹೋದರೆ ಪೊಲೀಸರ ವಿರುದ್ಧವೂ ಪ್ರತಿಭಟನೆಗೆ [illegible] ಅವರು [illegible]

ಹಾಗೆ [illegible] network ನ [illegible] network [illegible] invisible [illegible] practical [illegible]

[illegible]

ಬಾಗಲಕೋಟೆಗೆ ಕೊಳ್ಳಿ ಇಡಲು ಚೆಡ್ಡಿಗಳ ಸ್ಕೆಚ್

ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಾಗಿನಿಂದ ಹೆಂಡ ಕುಡಿದ ಮಂಗಗಳಂತಾಗಿರುವ ಕೇಸರಿ ಪುಂಡರು ನಾಡಿನ ದಕ್ಷಿಣ ಭಾಗದಲ್ಲಿ ಹಚ್ಚುತ್ತಿರುವ ಬೆಂಕಿ ಇನ್ನೂ ಧಗಧಗಿಸಿ ಉರಿಯುತ್ತಿರುವಾಗಲೇ ಉತ್ತರ ಕರ್ನಾಟಕದಲ್ಲೂ ಕೊಳ್ಳಿ ಇಡುವ ಕೆಲಸಕ್ಕೆ ತಯಾರಿ ನಡೆಸುತ್ತಿದ್ದಾರೆ. ಈ ಭಾಗದ ಚೆಡ್ಡಿಗಳ ಕೇಂದ್ರಸ್ಥಾನವಾಗಿರುವ ಬಾಗಲಕೋಟೆಯಲ್ಲಿ ಇವರು ನಡೆಸುತ್ತಿರುವ ಭಂಡತನಗಳಿಂದಾಗಿ ಇಷ್ಟರಲ್ಲೇ ಕೋಮು ದಳ್ಳುರಿ ಹೊತ್ತಿ ಉರಿಯಲಿದೆ ಎಂಬ ಆತಂಕ ಇಲ್ಲಿನ ಜನರನ್ನು ಕಾಡುತ್ತಿದೆ.



ಬಾಗಲಕೋಟೆ ನಗರದ ಬಸವೇಶ್ವರ ವೃತ್ತದ ಎದುರಿಗಿರುವ ನಗರಸಭೆಯ ಖುಲ್ಲಾ ಜಾಗದಲ್ಲಿ ಹಲವಾರು ವರ್ಷಗಳಿಂದ ಸಣ್ಣಪುಟ್ಟ ವ್ಯಾಪಾರಸ್ಥರು ತಮ್ಮ ಬದುಕು ಕಂಡುಕೊಂಡಿದ್ದರು. ಇವರಲ್ಲಿ ಹೆಚ್ಚಿನವರು ಬಡದಲಿತ ಸಮುದಾಯಕ್ಕೆ ಸೇರಿದವರಾಗಿದ್ದು ಚಪ್ಪಲಿ ಹೊಲಿಯುವ ಕಾಯಕ ಮಾಡಿಕೊಂಡಿದ್ದರು. ಇನ್ನುಳಿದವರು ಮುಸ್ಲಿಮರಾಗಿದ್ದು ತಳ್ಳುವ ಗಾಡಿಗಳಲ್ಲಿ ಸಣ್ಣಪುಟ್ಟ ವ್ಯಾಪಾರ ಮಾಡಿಕೊಂಡಿದ್ದರು. ಇಲ್ಲಿ ಮುಸ್ಲಿಮರು ಮತ್ತು ದಲಿತರು ಬಡತನದಲ್ಲಿ ಜೊತೆಯಾಗಿ ಅನ್ನ ಸಂಪಾದಿಸುತ್ತಿರುವುದನ್ನು ಕಂಡು ಚೆಡ್ಡಿಯಲ್ಲಿ ಚೇಳು ಬಿಟ್ಟುಕೊಂಡವರಂತೆ ಯಾತನೆ ಅನುಭವಿಸಿದ ಚೆಡ್ಡಿ ಪುಂಡರು ಈಗ ಇವರ ಹೊಟ್ಟೆಮೇಲೆ ಕಲ್ಲು ಹಾಕಲು ಹೊರಟಿದ್ದಾರೆ.

ಅತ್ತ ತಾನು ರೈತಪರ, ದಲಿತ ಪರ, ಅಲ್ಪಸಂಖ್ಯಾತರ ರಕ್ಷಣೆ ಅಂತೆಲ್ಲ ಭೊಂಗ ಬಿಡುತ್ತಲೇ ಅಧಿಕಾರಕ್ಕೆ ಬಂದಯಡ್ಡಿ ನೂರೇ ನೂರು ದಿನದಲ್ಲಿ ರೈತರ ಮೇಲೆ ಗುಂಡು ಹಾರಿಸಿ, ಬಜೆಟ್‌ನಲ್ಲಿ ದಲಿತರಿಗೆ ವಂಚಿಸಿ, ಅಲ್ಪಸಂಖ್ಯಾತರ ಮೇಲೆ ಮಾರಣಾಂತಿಕ ಹಲ್ಲೆ ಮಾಡಿಸಿ ತನ್ನ ಆಡಳಿತದಲ್ಲಿ ಇವರಿಗೆಲ್ಲ ಉಳಿಗಾಲವಿಲ್ಲ ಎಂಬುದನ್ನು ಸಾಬೀತುಪಡಿಸುತ್ತಿದ್ದರೆ, ಇತ್ತ ಚೆಡ್ಡಿ ಶನಿ ಸಂತಾನದ ಪುಂಡರು ಇಲ್ಲಿನ ನಗರ ಸಭೆಗೆ ವಕ್ಕರಿಸಿಕೊಂಡು ತಮ್ಮಲ್ಲಿನ ಮಾನಸಿಕ ವಿಕೃತಿಯನ್ನೆಲ್ಲ ಕಾರ್ಯರೂಪಕ್ಕಿಳಿಸತೊಡಗಿದರು. ಅದರ ಭಾಗವಾಗಿಯೇ ನಗರ ಸಭೆಯ ಖಾಲಿ ಜಾಗಗಳನ್ನು ತೆರವುಗೊಳಿಸತೊಡಗಿದರು. ತಮ್ಮ ಬದುಕಿಗೆ ಆ ಸ್ಥಳವನ್ನೇ ಆಧಾರ ಮಾಡಿಕೊಂಡು ಹಲವಾರು ವರ್ಷಗಳಿಂದ ಬದುಕುತ್ತ ಬಂದಿದ್ದ ಕುಟುಂಬಗಳಿಗೆ ಕನಿಷ್ಠ ಪರ್ಯಾಯ ವ್ಯವಸ್ಥೆಯನ್ನೂ ಮಾಡದೆ, ಪುಡಿಗಾಸಿನ ಪರಿಹಾರವನ್ನೂ ಕೊಡದೆ ಏಕಾಏಕಿ ತಮ್ಮ ಖಾಸಗಿ ಆಸ್ತಿಯನ್ನು ತೆರವುಗೊಳಿಸಿದಂತೆ ಅಲ್ಲಿಂದ ಹೊರದಬ್ಬಲಾಯಿತು. ಕಪಟಿ ಶಾಸಕ ಚರಂತಿಮಠನ ಆದೇಶದಂತೆ ಪಾರ್ಕಿಂಗ್ ಸ್ಥಳದ ನೆಪದಲ್ಲಿ ನಡೆದ ಈ ಕಾರ್ಯಾಚರಣೆಯಿಂದ ಸಾರ್ವಜನಿಕರಿಗೇನಾದರೂ ಅನುಕೂಲ



ಆಯಿತಾ? ಖಾಲಿ ಮಾಡಿಸಲಾದ ಸ್ಥಳದಲ್ಲಿ ಪಾರ್ಕಿಂಗ್ ವ್ಯವಸ್ಥೆಯಾಯಿತಾ? ಇಲ್ಲ, ಈಗ ಇದು ಇಲ್ಲಿನ ಸಾರ್ವಜನಿಕರ ನೆಮ್ಮದಿ ಹಾಳುಮಾಡುವ ಚೆಡ್ಡಿಗಳ ಕುತಂತ್ರಕ್ಕೆ ವೇದಿಕೆಯಾಗಿದೆ.

ಮೊನ್ನೆ ಮೊನ್ನೆ ಮುಗಿದುಹೋದ ಗಣೇಶನ ಹಬ್ಬದಂದು ಇಲ್ಲಿನ ಬಸವರಾಜ ಸಿದ್ಲಿಂಗಪ್ಪನವರ, ಮಂಜುನಾಥ ಎಳೆಮ್ಮೆ, ನಾಗರಾಜ ಹದಲಿ, ಅಶೋಕ ಮುತ್ತಿನಮಠ ಮುಂತಾದವರ ಕೇಸರಿ ಪಡೆ ಇಲ್ಲಿ ಗಣಪತಿ ಮೂರ್ತಿ ತಂದು ಕೂಡಿಸಿದೆ. ಸಾಮಾನ್ಯವಾಗಿ ಬೇರೆಕಡೆಯಂತೆ ಐದು ದಿನ ಅಥವಾ ಏಳು ದಿನ ಕೂಡಿಸಿ ಆಮೇಲೆ ತೆಗೆಯಬಹುದೆಂದು ಯಾರೂ ಅಪ್ಪಾಗಿ ತಲೆ ಕೆಡಿಸಿಕೊಂಡಿರಲಿಲ್ಲ. ಆದರೆ ಪಟಾಲಮ್ಮಿನ ಸ್ಕೆಚ್ಚೇ ಬೇರೆ ಇತ್ತು, ಹಬ್ಬ ಮುಗಿದು ಹಲವಾರು ದಿನಗಳೆ ಕಳೆದರೂ ಇಲ್ಲಿನ ಗಣಪ ಅಲುಗಾಡದೆ ಇದ್ದುದ್ದನ್ನು ಕಂಡು ಆಶ್ಚರ್ಯದಿಂದ ಜನ ಹೋಗಿ ನೋಡಲಾಗಿ ಹಬ್ಬಕ್ಕೆ ನಿರ್ಮಿಸಿದ್ದ ಶೆಡ್ ಒಳಗೊಳಗೆ ಶಾಶ್ವತ ಗುಡಿಯಾಗಿ ಮಾರ್ಪಾಡಾಗಿದೆ. ಸಿಮೆಂಟ್ ಕಾಂಕ್ರೀಟು, ಪೈಪು ಮತ್ತು ತಗಡಿನ ಶೀಟುಗಳನ್ನು ಬಳಸಿ ಗುಡಿ ನಿರ್ಮಿಸಲಾಗಿದೆ. ಪಾರ್ಕಿಂಗ್ ಹೆಸರಲ್ಲಿ ಬಡವರ ಹೊಟ್ಟೆಗೆ ಹೊಡೆದು ಅಂಗಡಿಗಳನ್ನು ತೆರವುಗೊಳಿಸಿದ, ಶಾಸಕ ಚರಂತಿಮಠನ ಗುಲಾಮರಂತಾಗಿರುವ ನಗರಸಭೆಯ ಯಾವೊಬ್ಬ ಅಧಿಕಾರಿಯೂ ಇಲ್ಲಿಯವರೆಗೂ ಇದನ್ನು ತೆಗೆಸುವ ಧೈರ್ಯ ಮಾಡಿಲ್ಲ, ಇಲ್ಲಿನ ಆಡಳಿತಾಧಿಕಾರಿ ಹಿರೇಮಠನಂತೂ ಪಕ್ಕಾ ಚೆಡ್ಡಿ ತೊಟ್ಟವರಂತೆ "ಇಲ್ಲಿ ಗಣೇಶನ ಗುಡಿ ನಿರ್ಮಿಸಲು ಯಾವುದೇ ತಕರಾರುಗಳೂ ಬಂದಿಲ್ಲ, ಹಾಗಾಗಿ ನಮ್ಮದೇನೂ ಅಭ್ಯಂತರ ಇಲ್ಲ" ಎನ್ನುತ್ತಿದ್ದಾನೆ. ಚರಂತಿಮಠನ ಋಣ ತೀರಿಸಲು ಈ ಅಧಿಕಾರಿ ಹೀಗೆ ಹೇಳುತ್ತಿದ್ದಾನೆ. ಆದರೆ ಇಲ್ಲಿನ ದಲಿತ ಸಂಘರ್ಷ ಸಮಿತಿ ಹಾಗೂ ಇನ್ನೂ ಕೆಲ ಜನಪರ ಸಂಘಟನೆಗಳು "ಜಾಗ ಖಾಲಿ ಮಾಡಿಸಿ ಸಾರ್ವಜನಿಕ ಪಾರ್ಕಿಂಗ್ ವ್ಯವಸ್ಥೆ ಮಾಡಿ. ಇಲ್ಲವೆ ಬೀದಿಬದಿಯ ವ್ಯಾಪಾರಸ್ಥರ ಬಳಕೆಗೆ ಕೊಡಿ. ಇಲ್ಲದಿದ್ದರೆ ನಮಗೂ ಸಹ ಅಲ್ಲಿಯೇ ಬುದ್ಧ ವಿಹಾರ ನಿರ್ಮಾಣಕ್ಕೆ ಅವಕಾಶ ಕೊಡಿ" ಎಂದು ಜಿಲ್ಲಾಧಿಕಾರಿಗಳಿಗೆ ಬೇಡಿಕೆ ಸಲ್ಲಿಸಿದೆ. ಇದು ಚೆಡ್ಡಿ ಪರಿವಾರ ಮತ್ತು ದಲಿತ, ಅಲ್ಪಸಂಖ್ಯಾತರ ಮಧ್ಯ ಸಂಘರ್ಷಕ್ಕೆ ಕಾರಣವಾಗಿದೆ. ಆದರೆ ಗುಡಿ ತೆರವು ಗೊಳಿಸಲು ಚೆಡ್ಡಿಗಳು ಸಿದ್ಧರಿಲ್ಲ, ಇದೇ ವಿವಾದವನ್ನು ಬಳಸಿಕೊಂಡು ಕೋಮುಗಲಭೆ ಎಬ್ಬಿಸಿ ಜನರ ನೆಮ್ಮದಿಗೆ ಕೊಳ್ಳಿ ಇಡುವ ತಯಾರಿಯಲ್ಲಿದ್ದಾರೆ. ಆದಷ್ಟು ಬೇಗ ಈ ಪುಂಡರಿಗೆ ಪಾಠ ಕಲಿಸಿ ಸಮಸ್ಯೆಯನ್ನು ಬಗೆಹರಿಸದಿದ್ದಲ್ಲಿ ಜನರೇ ಆ ಕೆಲಸ ಮಾಡುವ ಸಮಯ ದೂರವಿಲ್ಲ, ಆಗ ನಡೆಯುವ ಘಟನೆಗಳ ಜವಾಬ್ದಾರಿಯನ್ನು ಜಿಲ್ಲಾಡಳಿತವೇ ಹೊರಬೇಕಾಗುತ್ತದೆ. ಆದಷ್ಟು ಬೇಗ ಜಿಲ್ಲಾಡಳಿತ ಎಚ್ಚೆತ್ತುಕೊಳ್ಳಬೇಕಿದೆ.....

■ ಮಹಾಲಿಂಗಪ್ಪ ಆಲಬಾಳ

ಚಿತ್ರದುರ್ಗ: ಕರವೇಗೆ ವಸೂಲಿ ವೀರ ಶಶಿಧರನೇ ನಾಯಕ

ಕರ್ನಾಟಕ ರಕ್ಷಣಾ ವೇದಿಕೆಯ ಜಿಲ್ಲಾಧ್ಯಕ್ಷನಾಗಿರುವ ಮೊಳಕಾಲ್ಮೂರು ಶಶಿಧರನಿಗೆ ಧರ್ಮದೇಟು ಬೀಳುವುದು ಗ್ಯಾರಂಟಿ ಎಂಬಂತ ವಾತಾವರಣ ನಿರ್ಮಾಣವಾಗಿದೆ. ರಕ್ಷಣಾ ವೇದಿಕೆಯ ಹೆಸರಲ್ಲಿ ಶಶಿಧರನ ಜೊತೆ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಆಟೋ ರವಿ ಮತ್ತು ನಗರಾಧ್ಯಕ್ಷ ಅಶ್ವಾಕ್ ಅಲಿ ಎಂಬ ಕ್ರಿಮಿನಲ್ ಹಿನ್ನೆಲೆಯವನೊಬ್ಬ ಸೇರಿಕೊಂಡು ನಡೆಸುತ್ತಿರುವ ವಸೂಲಿ ಹುಚ್ಚಾಟಗಳಿಗೆ ಅಧಿಕಾರಿಗಳು, ಗುತ್ತಿಗೆದಾರರು, ಗಣಿ ಮಾಲೀಕರು ರೋಸಿ ಹೋಗಿದ್ದಾರೆ.

ಕಾಂಗ್ರೆಸ್‌ನಲ್ಲಿ ಪುಡಾರಿ ರಾಜಕೀಯ ಮಾಡಿಕೊಂಡಿದ್ದ ಈ ಶಶಿಧರ ಎರಡು ವರ್ಷಗಳ ಹಿಂದೆ ಕರ್ನಾಟಕ ರಕ್ಷಣಾ ವೇದಿಕೆಯ ರಾಜ್ಯಾಧ್ಯಕ್ಷ ನಾರಾಯಣಗೌಡನ ಕಾಲಿಗೆ ಬಿದ್ದು ಜಿಲ್ಲಾಧ್ಯಕ್ಷನಾಗಿ ದೀಕ್ಷೆ ಪಡೆದು ಬಂದು ಇಲ್ಲಿಯವರೆಗೂ ಮಾಡಿದ್ದೂ ಮಾಡುತ್ತಿರುವುದೆಲ್ಲಾ ಅಪ್ಪಟ ವಶೀಲಿಬಾಜಿ ಕೆಲಸವನ್ನೇ.

ಶಶಿಧರ ಕರವೇ ಜಿಲ್ಲಾಧ್ಯಕ್ಷನಾಗುವುದರ ಜೊತೆಗೆ ಮೊಳಕಾಲ್ಮೂರು ಪಟ್ಟಣದಲ್ಲೊಂದು ಕಂಪ್ಯೂಟರ್ ಸೆಂಟರ್‌ನ್ನು ನಡೆಸುತ್ತಾ ಸರ್ಕಾರಿ ತರಬೇತಿ ಸ್ಕೀಮುಗಳನ್ನೆಲ್ಲಾ ಬಾಚಿಕೊಂಡು ಲಕ್ಷಾಂತರ ರೂಪಾಯಿ ಹಣವನ್ನು ಮುಂಡಾಮೋಚಿದ್ದಾನೆ. ಇವನ ಕಂಪ್ಯೂಟರ್ ಸೆಂಟರಿನಲ್ಲಿ ಯಾರೊಬ್ಬರೂ ತರಬೇತಿ ಪಡೆದ ನಿದರ್ಶನಗಳಿಲ್ಲ, ಸುಳ್ಳು ಸರ್ಟಿಫಿಕೇಟ್‌ಗಳನ್ನು ನೀಡಿ, ಸ್ಟೈಫಂಡ್ ಕೊಟ್ಟು ಸಾಗ ಹಾಕುತ್ತಾನೆ. ಅಧಿಕಾರಿಗಳಿಗೊಂದಿಷ್ಟು ಪರ್ಸೆಂಟೇಜ್ ಕೊಟ್ಟು ಬಿಲ್‌ಗಳನ್ನು ಮಾಡಿಸಿಕೊಳ್ಳುತ್ತಾನೆ.

ಇಂತಹ ಅಡ್ನಾಡಿಗೆ ಆಟೋ ರವಿ, ಅಶ್ವಾಕ್ ಅಲಿ ಎಂಬ ಪುಂಡರಿಬ್ಬರು ಜೊತೆಗೂಡಿದ್ದಾರೆ. ಆ ಆಟೋ ರವಿ ಮೊನ್ನೆ ಮುನ್ಸಿಪಲ್ ಚುನಾವಣೆಗೆ ನಿಂತು ಕೇವಲ 30 ಓಟು ಪಡೆದು ಠೇವಣಿ ಕಳೆದುಕೊಂಡವ. ಅಶ್ವಾಕ್ ಅಲಿ ಆಂಧ್ರ ರೋಡ್ ಲೈನ್ಸ್‌ನ ಆಫೀಸ್‌ನ ಉಸ್ತುವಾರಿ ನೋಡಿಕೊಳ್ಳುತ್ತಿರುವಾತ. ಈ ತ್ರಿಮೂರ್ತಿಗಳು ಒಟ್ಟಾಗಿ ಮಾಡಿದ ಕನ್ನಡ ಸೇವೆಯೆಂದರೆ once again ವಶೀಲಿ ಬಾಜಿ ಕೆಲಸ.

ಮೊನ್ನೆ ನಡೆದ ಚುನಾವಣೆಗೆ ಮುನ್ನ ರಕ್ಷಣಾ ವೇದಿಕೆಯ ಜಿಲ್ಲಾ ಸಮಾವೇಶ ಮಾಡುತ್ತೇವೆಂದು ಹೇಳಿ ಲಕ್ಷಾಂತರ ಎತ್ತುವಳಿ ಮಾಡಿದ್ದರು. ಹಾಲಿ ಸಚಿವರಾಗಿರುವ ಗೂಳಿಹಟ್ಟಿ ಶೇಖರ್, ಸುಪ್ರೀಮ್ ಕ್ರಷರ್ಸ್ ಮಾಲೀಕ, ಜಾನ್‌ಮೈನ್ಸ್ ಹಾಗೂ ರಾಷ್ಟ್ರೀಯ ಹೆದ್ದಾರಿ ಗುತ್ತಿಗೆದಾರರು ಸೇರಿದಂತೆ ಎಲ್ಲಾ ಕಡೆ ಬೆದರಿಸಿ ಹಣ ವಸೂಲಿ ಮಾಡಿದ್ದರು.

ರಕ್ಷಣಾ ವೇದಿಕೆಯೆಂದರೆ ಕನ್ನಡಕ್ಕಾಗಿ ಹೋರಾಡುವ ಸಂಘಟನೆ ಎಂದು ಭ್ರಮಿಸಿ ರಕ್ಷಣಾ ವೇದಿಕೆಗೆ ಸೇರಿದ್ದ ಯುವಕರೆಲ್ಲಾ ಈಗ ಇವರ ಭಂಡಾಟಗಳನ್ನು ನೋಡಿ



ಬೆಸ್ತುಬಿದ್ದಿದ್ದಾರೆ. ರಕ್ಷಣಾ ವೇದಿಕೆಯ ಸದಸ್ಯತ್ವದ ಶುಲ್ಕ ಇರುವುದು 25 ರೂ. ಆದರೆ ಈ ಮಹಾಶಯರಿಂದ ರಕ್ಷಣಾ ವೇದಿಕೆಯ ಸಾಮಾನ್ಯ ಸದಸ್ಯರಾಗಿ ದೀಕ್ಷೆ ಪಡೆಯಬೇಕೆಂದರೆ ನೂರು ರೂಪಾಯಿ ಕಕ್ಕಬೇಕು. ಜೊತೆಗೆ ತಮ್ಮ ವೆಚ್ಚದಲ್ಲೇ ಕಾರ್ಯಕ್ರಮ ನಡೆಸಬೇಕು.

ಎರಡು ತಿಂಗಳ ಹಿಂದೆ ಭರಮಸಾಗರದಲ್ಲಿ ರಕ್ಷಣಾ ವೇದಿಕೆಯ ವಿದ್ಯಾರ್ಥಿ ಘಟಕದ ಉದ್ಘಾಟನೆಗೆ ಆಗಮಿಸಿದ್ದ ವಿದ್ಯಾರ್ಥಿ ಘಟಕದ ರಾಜ್ಯಾಧ್ಯಕ್ಷ ಭೀಮಾಶಂಕರ ಪಾಟೀಲ್‌ಗೆ ಕೆಲ ಕಾರ್ಯಕರ್ತರು ಶಶಿಧರ, ಆಟೋ ರವಿ, ಅಶ್ವಾಕ್ ಅಲಿ ಬಗ್ಗೆ ದೂರಿದ್ದಾರೆ. ಭೀಮಾಶಂಕರ ಪಾಟೀಲ್ ಈ ಬಗ್ಗೆ ವಿಚಾರಿಸಿದರೆ ಇವರೆಲ್ಲ ಆತನ ವಿರುದ್ಧವೇ ಗಲಾಟೆ ಮಾಡಿ ನಾವಿಲ್ಲಾಂದ್ರೆ ಯಾವನೂ ಇಲ್ಲಿ ಏನೂ ಮಾಡಲ್ಲ, ನಿನ್ನ ಕೆಲಸ ಮುಗಿಸ್ಕೊಂಡು ನಿನ್ನ ಪಾಡಿಗೆ ನೀನು ಹೊರಟು ಬಿಡು" ಅಂತಾ ಧಮಕಿ ಹಾಕಿದ್ದಾರೆ. ರಾಜಾಧ್ಯಕ್ಷ ನಾರಾಯಣಗೌಡನಿಗೆ ಈ ವಿಷಯ ತಿಳಿದು ಮೂವರನ್ನೂ ಕರೆಸಿ ಛೀಮಾರಿ ಹಾಕಿ, ಅಶ್ವಾಕ್ ಅಲಿ, ಆಟೋ ರವಿಯನ್ನು ಸಂಘಟನೆಯಿಂದ ಹೊರ ಹಾಕುವಂತೆ ಶಶಿಧರನಿಗೆ ಹೇಳಿದ್ದರೂ ತನ್ನ ವಸೂಲಿ ದಂಧೆಗೆ ಸಾಥ್ ನೀಡುವವರಿಲ್ಲದಂತಾಗುತ್ತದೆ ಎಂಬ ಕಾರಣಕ್ಕೆ ಶಶಿಧರ ಜಪ್ಪಯ್ಯ ಅನ್ನುತ್ತಿಲ್ಲ.

ಈ ಶಶಿಧರ ಎಂಥಾ ನಮಕ್‌ಹರಾಮ್ ಎಂಬುದಕ್ಕೆ ಮತ್ತೊಂದು ನಿದರ್ಶನ ಇಲ್ಲಿದೆ. ಮಹಾರಾಷ್ಟ್ರದಲ್ಲಿ ಕನ್ನಡಿಗರ ಮೇಲೆ ಹಲ್ಲೆ ನಡೆದ ಸಂದರ್ಭದಲ್ಲಿ ಮಲ್ಲಾಪುರದ ಕೆಲ ಉತ್ಸಾಹಿ ಯುವಕರು ಈತನ ಹಿಂದೆ ಪ್ರತಿಭಟನೆಗೆ ಹೋಗಿದ್ದಾರೆ. ಆ ಸಂದರ್ಭದಲ್ಲಿ ಬಸ್ಸೊಂದರ ಗಾಜು ಒಡೆದ ಕೇಸಿನಲ್ಲಿ ಮಲ್ಲಾಪುರದ ಏಳು ಜನ ಯುವಕರ ಹೆಸರನ್ನು ಸೇರಿಸಿ ಪೊಲೀಸರು ಕೇಸು ಹಾಕಿದ್ದರು. ಈ ಯುವಕರು ಹೇಗೋ ಮಾಡಿ ಹೊರಬಂದರೆ, ಇವರನ್ನು ಜೈಲಿನಿಂದ ಜಾಮೀನಿನ ಮೇಲೆ ಬಿಡಿಸಲು 30 ಸಾವಿರ ಖರ್ಚಾಗಿದೆ ಎಂದು ನಾರಾಯಣಗೌಡನಿಂದ ಹಣ ಪಡೆದು ಜೇಬಿಗಿಳಿಸಿಕೊಂಡಿದ್ದ ಇದೂ ಸಾಲದೆಂಬಂತೆ ಕೇಸು ಹಾಕಿಸಿಕೊಂಡ ಯುವಕರಿಗೂ ತಲಾ 5 ಸಾವಿರ ಸ್ಕೀಮು ಹಾಕಿದ್ದಾನೆ. ಹೀಗೆ ಎತ್ತುವಳಿ ಸ್ಕೀಮುಗಳಲ್ಲೇ ಕಾಲ ಕಳೆಯುವ ಶಶಿಧರನಿಗೆ ಕನ್ನಡ ನಾಡು ನುಡಿಯ ಓನಾಮಗಳೂ ಗೊತ್ತಿಲ್ಲ, ಹಗಲೆಲ್ಲಾ ವಸೂಲಿ ಮಾಡಿ ರಾತ್ರಿಯಾಗುತ್ತಿದ್ದಂತೆ ರಕ್ಷಣಾ ವೇದಿಕೆಯ ಶಾಲುಗಳನ್ನು ಹಾಕಿಕೊಂಡ ಬಾರು-ರೆಸ್ಟೋರೆಂಟ್‌ಗಳಿಗೆ ನುಗ್ಗುತ್ತಾರೆ. ಚೆನ್ನಾಗಿ ಕುಡಿದು-ತಿಂದು ಬಿಲ್ ಪಾವತಿಸುವಾಗ ರಿಯಾಯ್ತಿ ಕೊಡಬೇಕೆಂದು ಜಗಳ ಮಾಡುತ್ತಾರೆ.

ಇವರಿಗೆ ಹಣದ ಅಗತ್ಯ ಬಿದ್ದಾಗಲೆಲ್ಲಾ ಕನ್ನಡದ ಜ್ಞಾಪಕ ಬರುತ್ತದೆ. ಅಧಿಕಾರಿಗಳ ಬಳಿ ಹೋಗಿ ನಿಮ್ಮ ಅವ್ಯವಹಾರ ಬಯಲಿಗೆ ಎಳೀತಿವಿ ಅಂತಾ ಬ್ಲಾಕ್ ಮೇಲ್ ಮಾಡಿದರೆ, ರಾಜಕಾರಣಿಗಳ ಹತ್ತಿರ ನಮ್ಮದು ಬಹಳ ದೊಡ್ಡ ಸಂಘಟನೆ ಅಂತಾ ಹೇಳಿ ಓಲೈಕೆ ಮಾಡಿ ವಸೂಲಿ ಮಾಡುತ್ತಾರೆ.

ಹೋದಡೆಯಲ್ಲೆಲ್ಲಾ ಇಂಥದ್ದೇ ಹಳವಂಡಗಳಿಂದ ಕಿರಿಕಿರಿ ಮಾಡುವ ಶಶಿಧರ, ಆಟೋ ರವಿ, ಅಶ್ವಾಕ್ ಅಲಿ ಬಗ್ಗೆ ಪೊಲೀಸರಂತೂ ರೋಸಿಹೋಗಿದ್ದಾರೆ. ಈಗಲಾದರೂ ಕರ್ನಾಟಕ ರಕ್ಷಣಾ ವೇದಿಕೆಯ ಹೆಸರಿನಲ್ಲಿ ನಡೆಸುತ್ತಿರುವ ಪುಂಡಾಟಗಳನ್ನು ನಿಲ್ಲಿಸದಿದ್ದರೆ ಈ ಬಾಲಕರು ಧರ್ಮದೇಟು ತಿನ್ನುವ ಕಾಲ ದೂರವಿಲ್ಲ

■ ವರದಿಗಾರ

ದಾವಣಗೆರೆ ಡಿಸಿಗೆ ಮಂಜುನಾಥ ಗುಪ್ತಾ ಎಂಬ ಎಕ್ಸ್‌ಟ್ರಾ ಗಿರಾಕಿ




ಮಂಜುನಾಥ ಗುಪ್ತಾ

ದಾವಣಗೆರೆಗೆ ನೂತನ ಜಿಲ್ಲಾಧಿಕಾರಿಯಾಗಿ ಬಂದಿರುವ ಕೆ. ಅಮರನಾರಾಯಣಗೆ ಚಿತ್ರದುರ್ಗದ ವ್ಯಾಮೋಹ ಇನ್ನೂ ಕಡಿಮೆಯಾಗಿರುವಂತೆ ಕಾಣಿಸುತ್ತಿಲ್ಲ. ಅಮರನಾರಾಯಣ ಜಿಲ್ಲೆಗೆ ಬಂದು ಇನ್ನೂ ಒಂದು ಸುತ್ತು ಹಾಕಿಲ್ಲ, ಆಗಲೇ ಚಿತ್ರದುರ್ಗ ಮೂಲದ ಮಂಜುನಾಥ ಗುಪ್ತಾ ಎಂಬ ಆಸಾಮಿಯೊಬ್ಬ "ನಾನು ಅಮರನಾರಾಯಣ್‌ಗೆ ತುಂಬಾ ಕ್ಲೋಸು, ಅವರು ಚಿತ್ರದುರ್ಗದಲ್ಲಿ ಜಿಲ್ಲಾಧಿಕಾರಿಯಾಗಿದ್ದಾಗ ಅವರಿಗೆ ಸಲಹೆ-ಸೂಚನೆ ಕೊಡುತ್ತಿದ್ದೆ" ಎಂದು ರೈಲು ಬಿಡುತ್ತಾ ಬಿಲ್ಡಪ್ ಕೊಡುತ್ತಿದ್ದಾನೆ.

ಜಿಲ್ಲಾಧಿಕಾರಿಗಳಿಂದ ಏನು ಕೆಲಸ ಆಗಬೇಕು ಹೇಳಿ ನಾನು ಮಾಡಿಕೊಡ್ತೀನಿ ಅಂತಾ ಹೇಳಿ ವಸೂಲಿಬಾಜಿಗಿಳಿದಿದ್ದಾನೆ. ಈತನ ಮಾತುಕತೆಯ ಶೈಲಿ, ನಡವಳಿಕೆ ನೋಡಿ ಸದ್ಯಕ್ಕೆ ಯಾರೂ ಸೊಪ್ಪು ಹಾಕುವಂತೆ ಕಾಣಿಸುತ್ತಿಲ್ಲ. ಅಸಲಿಗೆ ಈ ಗುಪ್ತಾ ಯಾರು? ಈತನ ಹಿನ್ನೆಲೆ ಏನು? ಅಂತಾ ದುರ್ಗದತ್ತ ಮುಖಮಾಡಿ ವಿಚಾರಿಸಿದಾಗ ದೊರೆತದ್ದು ಈತನೊಬ್ಬ ಎಕ್ಸ್‌ಟ್ರಾ ಗಿರಾಕಿ ಎಂಬ ಮಾಹಿತಿ.

ಬರಿಗೈ ದಾಸನಾಗಿರುವ ಮಂಜುನಾಥ ಮಾತಿನಲ್ಲೇ ಮಹಡಿ ಕಟ್ಟುವ ಆಸಾಮಿ. ಚಿತ್ರದುರ್ಗದ ಎಪಿಎಂಸಿಯಲ್ಲಿ ಪಾಲುದಾರಿಕೆಯಲ್ಲಿ ಸಣ್ಣಪ್ರಮಾಣದ ವ್ಯವಹಾರ ಶುರುವಿಟ್ಟುಕೊಂಡಿದ್ದವನು ತನ್ನ ಪಾಲುದಾರರನ್ನೇ ಯಾಮಾರಿಸಿಬಿಟ್ಟದ್ದಾನೆ. ಪೆಪ್ಸಿ ಕಂಪೆನಿಯ ಏಜೆನ್ಸಿ ಪಡೆದುಕೊಂಡಿರುವುದಾಗಿ ನಂಬಿಸಿ ಒಂದಷ್ಟು



ಅಮರನಾರಾಯಣ

ಜನರನ್ನು ಹಳ್ಳ ಹತ್ತಿಸಿದ್ದಾನೆ. ಒಂದೆರಡು ಚೆಕ್‌ಬೌನ್ಸ್ ಪ್ರಕರಣಗಳಲ್ಲಿ ಈಗಲೂ ಕೋರ್ಟ್‌ಗೆ ಅಲೆಯುತ್ತಿದ್ದಾನೆ.

ನಯಾಪೈಸೆ ದುಡಿಮೆಯಿಲ್ಲದ ಮಂಜುನಾಥ ಗುಪ್ತನದು ಸಂಪೂರ್ಣ ಪರಾವಲಂಬಿ ಬದುಕು. ಯಾವುದೇ ಸಂಘ, ಸಂಸ್ಥೆಗಳ ಕಾರ್ಯಕ್ರಮಗಳಿರಲಿ, ತನಗೆ ಸಂಬಂಧವಿರಲಿ ಬಿಡಲಿ ಹಾಜರಾಗುತ್ತಾನೆ. ಸಂಘಟಕರೇನಾದರೂ 'ಹಲೋ' ಎಂದು ಮಾತನಾಡಿಸಿದರೆ ಮುಗಿದೇ ಹೋಯಿತು. ಮತ್ತೆ ಹತ್ತು ನಿಮಿಷ ಬಿಟ್ಟು ನೋಡುವ ಹೊತ್ತಿಗೆ ಇದೀ ಕಾರ್ಯಕ್ರಮವನ್ನು ಸಂಘಟಿಸಿದವನು ತಾನೇ ಎಂಬಂತೆ ಪೋಜು ಕೊಡುತ್ತಾನೆ. ಹಾಗಾಗಿ ದುರ್ಗದಲ್ಲಿ ಮಂಜುನಾಥ ಗುಪ್ತನನ್ನು ಯಾರೂ ಹತ್ತಿರಕ್ಕೆ ಬಿಟ್ಟುಕೊಳ್ಳುತ್ತಿಲ್ಲ.

ತಮಾಷೆಯೆಂದರೆ ಈ ಆಸಾಮಿ ಚಿತ್ರದುರ್ಗದ ಕಬೀರಾನಂದ ಮಠಕ್ಕೆ ಆಡಳಿತಾಧಿಕಾರಿಯಾಗ್ತೀನಿ ಅಂತಾ ಹೇಳಿಕೊಂಡು ತಿರುಗುತ್ತಿದ್ದರೆ ಚಿತ್ರದುರ್ಗದ ಜನ ಇದನ್ನು ಶತಮಾನದ ಜೋಕು ಅಂತ ನಗಬಾರದ ಕಡೆಯಲ್ಲಾ ನಗುತ್ತಿದ್ದರಂತೆ. ಈ ವಿಷಯ ತಿಳಿಯುತ್ತಿದ್ದಂತೆ ಕಬೀರಾನಂದ ಶ್ರೀಗಳು ಈತನನ್ನು ಮಾರುದೂರ ಇಟ್ಟಿದ್ದಾರೆ.


ಕಳೆದ ಒಂದೆರಡು ವರ್ಷಗಳಿಂದ ಲಿಟ್ಲ್‌ಫ್ಲವರೀಸ್ ಕರೆಸ್ಪಾಂಡೆನ್ಸ್ ಕಾಲೇಜಿನ ವಿ. ಸಂಜೀವ ರೆಡ್ಡಿ ಎಂಬುವರ ಎಡ-ಬಲ ತಿರುಗಾಡಿಕೊಂಡಿದ್ದಾನಂತೆ. ಟೋಪಿ ಯಾವಾಗ ಹಾಕುತ್ತಾನೋ ಅಥವಾ ಅಲ್ಲಿಂದ ಕಳಚಿಕೊಂಡಿದ್ದಾನೋ ಗೊತ್ತಿಲ್ಲ. ಸದ್ಯಕ್ಕೆ ದಾವಣಗೆರೆಯಲ್ಲಿ ಆಗಾಗ ಪ್ರತ್ಯಕ್ಷವಾಗುತ್ತಿದ್ದಾನೆ. ಯಾರಿಗೆ ಗ್ರಹಚಾರ ಕಾದಿದೆಯೋ?

ಅಮರನಾರಾಯಣ ಚಿತ್ರದುರ್ಗದಲ್ಲಿದ್ದಾಗ ಇಂತಹ ಕೆಲಸಕ್ಕೆ ಬಾರದ ಎಕ್ಸ್‌ಟ್ರಾ ಗಿರಾಕಿಗಳ ಪಟಾಲಮ್ಮನ್ನು ತಮ್ಮ ಸುತ್ತ ಪೋಷಿಸಿಕೊಂಡಿದ್ದ ಕಾರಣಕ್ಕಾಗಿಯೇ ಸಾಕಷ್ಟು ಸುದ್ದಿಗೆ, ವಿವಾದಗಳಿಗೆ ಆಹಾರವಾಗಿದ್ದರು. ದಾವಣಗೆರೆಯಲ್ಲೂ ಅಂಥದ್ದೊಂದು ಪರಿಪಾಠ ಬೆಳೆಸುವ ದುಸ್ಸಾಹಸವನ್ನು ಅಮರನಾರಾಯಣ್ ಮಾಡದಿರಲಿ, ಮಂಜುನಾಥ ಗುಪ್ತಾನಂತಾ ಎಕ್ಸ್‌ಟ್ರಾ ಗಿರಾಕಿಗಳನ್ನು ಹತ್ತಿರಕ್ಕೆ ಬಿಟ್ಟುಕೊಳ್ಳದಿರಲಿ. ದಾವಣಗೆರೆಯಲ್ಲಿ ಮಂಜುನಾಥ ಗುಪ್ತನನ್ನು ಮೀರಿಸುವಂತಹ ಎಕ್ಸ್‌ಟ್ರಾ ಗಿರಾಕಿಗಳಿರುವುದರಿಂದ ಮುನ್ಸೂಚನೆ ಮತ್ತು ಎಚ್ಚರಿಕೆಗಾಗಿ ಈ ಟಿಪ್ಪಣಿ.

■ ವರದಿಗಾರ

'ವಿಶ್ವನಾಥರೆಡ್ಡಿ ಕಲ್ಯಾಣ'ದ ಬಿ.ಮಹಾದೇವಪ್ಪ

ಕಲ್ಯಾಣ ಕರ್ನಾಟಕದ ಹಿಂದಿನ ತಲೆಮಾರಿನ ಲೇಖಕರಿಗೆ ಉತ್ತೇಜನ ನೀಡಿದ್ದ ಅವರ ಬರವಣಿಗೆಯ ಕೃಷಿಯನ್ನು ಹದಮಾಡಿದ್ದ 'ವಿಶ್ವಕಲ್ಯಾಣ ಪತ್ರಿಕೆ'ಯ ಸಂಪಾದಕ ಬಿ.ಮಹಾದೇವಪ್ಪ ತೀರಾ ಇತ್ತೀಚೆಗೆ (17 ಸೆಪ್ಟೆಂಬರ್ 2008 ರಂದು) ಲಿಂಗೈಕ್ಯರಾದರು.



ಶರಣ ಸಾಹಿತ್ಯದ ಅಭ್ಯಾಸಿಯಾಗಿದ್ದ ಮಹಾದೇವಪ್ಪನವರದು ಸಹಜವಾಗಿಯೆ ಸರಳ ಬದುಕಾಗಿತ್ತು. ಬಹಳಷ್ಟು ವರ್ಷಗಳ ಹಿಂದೆಯೆ 'ಪ್ರಜಾವಾಣಿ' ಪತ್ರಿಕೆಯಲ್ಲಿ ಸಂಪಾದಕರಾಗಿದ್ದ ಅವರು ಅಲ್ಲಿ ಕೆಲಸ ಮಾಡುತ್ತಿರುವಾಗಲೆ ವಿಶ್ವನಾಥರೆಡ್ಡಿ ಮುದ್ನಾಳರ ಮಹತ್ವಾಕಾಂಕ್ಷೆಗೆ ಮಣಿದು ಕಲಬುರ್ಗಿ ಸೇರಿದರು.

ರೆಡ್ಡಿಯವರ ಕರ್ಣದಾರತ್ವದಲ್ಲಿ 'ವಿಶ್ವಕಲ್ಯಾಣ ಪತ್ರಿಕೆ' ಪ್ರತಿವಾರವೂ ಪ್ರಕಟವಾಗುತ್ತಿತ್ತು. ಆದರೆ ಅದು ಅನೇಕ ವೇಳೆ 'ವಿಶ್ವನಾಥರೆಡ್ಡಿಯವರ ಕಲ್ಯಾಣಕ್ಕೆ' ಮಾತ್ರ ಈ ಪತ್ರಿಕೆ ಮೀಸಲಾಗಿದ್ದರಿಂದ ಅದು ತಲುಪಬೇಕಾದ ಗುರಿ ತಲುಪಲಿಲ್ಲ. ಜನಸಾಮಾನ್ಯರು ಪ್ರೀತಿಯಿಂದ ಆ ಪತ್ರಿಕೆಯನ್ನು ಖರೀದಿಸಲಿಲ್ಲ. ಬದಲಾಗಿ ವಿಶ್ವನಾಥರೆಡ್ಡಿ ಮುದ್ನಾಳರ ರಾಜಕೀಯ ಬೆಂಗಾವಲಿನ ಅಭಿಮಾನಿಗಳ ಶ್ರೀರಕ್ಷೆಯಲ್ಲಿ ಪತ್ರಿಕೆ ಕತ್ತುಸಿರು ಬಿಡುತ್ತ ತೆವಳುತ್ತ ನಡೆದು ಹೋಯ್ತು. ಇದೆಲ್ಲ ಬಿ.ಮಹಾದೇವಪ್ಪನವರ ದುರಾದೃಷ್ಟವೆನ್ನದೆ ವಿಧಿಯಿಲ್ಲ.

ಇದಲ್ಲದೆಯೂ ಒಬ್ಬ ಸಾಹಿತಿಯಾಗಿ, ಸಹೃದಯಿ ಚಿಂತಕನಾಗಿ ಮಹಾದೇವಪ್ಪ ಕಲ್ಯಾಣ ಕರ್ನಾಟಕದ ಜನಗಳಿಗೆ ಮೌಲ್ಯಯುತ ಸಾಹಿತ್ಯದ ಕೃತಿಗಳನ್ನು ನೀಡಿದ್ದಾರೆ. 'ಅಪರಿಮಿತ ಕತ್ತಲಿನ ವಿಪರೀತ ಬೆಳಗುಗಳು', 'ನೇತಾಜಿ', 'ಅರಿವು-ಆಚಾರ', 'ಕಡಕೋಳ ಮಡಿವಾಳಪ್ಪನವರಿಂದ ಕೊಳ್ಳೆ ಹೊಡೆದ ಪದಗಳು', 'ಮಾಯಾ ಮುಗಿಲಿನ ಮಡಿವಾಳೇಶ್ವರರು', 'ಶೂನ್ಯ ಸಂಪಾದನೆ', 'ಅನುಪಮ ಶರಣರು' ಮುಂತಾದ 12ಕ್ಕೂ ಹೆಚ್ಚು ಕೃತಿಗಳ ಮೂಲಕ ಮಹಾದೇವಪ್ಪ ತಮ್ಮ ವೈಶಿಷ್ಟ್ಯವನ್ನು ಮೆರೆದಿದ್ದಾರೆ. "ಅರಿವು-ಆಚಾರ"ದ ಮೂಲಕ ಶರಣರ ಸಾಹಿತ್ಯದ ಪ್ರಸಾರಕ್ಕೂ ಅವರು ಸಾಕಷ್ಟು ಶ್ರಮಿಸಿದ್ದರು. ರಾಜ್ಯೋತ್ಸವ ಪ್ರಶಸ್ತಿ ಹಾಗೂ ಕಲಬುರ್ಗಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಮ್ಮೇಳನಾಧ್ಯಕ್ಷರಾಗಿಯೂ ಮಹಾದೇವಪ್ಪನವರು ಆಯ್ಕೆಯಾಗಿದ್ದರು.

ಆದರೆ ಯಾವುದೆ ಒಬ್ಬ ಲೇಖಕ - ಬರಹಗಾರ ತನ್ನ ಸ್ವತಂತ್ರ ಆಲೋಚನೆ-ವಿಚಾರಗಳನ್ನು ಬೇರೆಯವರ ಮರ್ಜಿಗಾಗಿ ಕಾದು ಬರೆಯತೊಡಗಿದರೆ ಎಂಥ ಅನಾಹುತಗಳಾಗುತ್ತವೆ ಎಂಬುದಕ್ಕೂ ಈ ಮಹಾದೇವಪ್ಪನವರು ಸಾಕ್ಷಿಯಾಗಿದ್ದರು. ವಿಶ್ವನಾಥರೆಡ್ಡಿ ಮುದ್ನಾಳರ ಬಗೆಗಿನ ಅಪಾರವಾದ ಪ್ರೀತಿ-ವಿಶ್ವಾಸಗಳು ಒಮ್ಮೊಮ್ಮೆ ಇವರ ವೈಚಾರಿಕ ಪ್ರಜ್ಞೆಯನ್ನು ತಡೆಹಿಡಿಯುತ್ತಿದ್ದವು. ಅವರನ್ನು ಸಂಪ್ರೀತಗೊಳಿಸಲೋಸುಗವೆ ಬಸವಣ್ಣನವರು ಮೂಲತಃ ಬ್ರಾಹ್ಮಣರಾಗಿರಲಿಲ್ಲ; ಅವರು ಮೊದಲೇ ಲಿಂಗಾಯತರಾಗಿದ್ದರು ಎಂಬ ಬಾಲಿಶವಾದ 'ಸಂಶೋಧನೆ' ನಡೆಸಿ ಶರಣಸಾಹಿತ್ಯದ ದಿಗ್ಗಜರಿಂದ, ಪತ್ರಿಕೆಗಳಿಂದ ಹೆಟ್ಟಿಸಿಕೊಂಡಿದ್ದರು. ಕೊನೆಗೆ ಕೋರ್ಟ್‌ನಿಂದಲೂ ಛೀಮಾರಿಗೆ ಒಳಗಾಗಿದ್ದರು. ಇಂಥ ಬರಹಗಾರಿಕೆಯನ್ನು ಮಹಾದೇವಪ್ಪನವರು ಆಗಾಗ ಮಾಡುತ್ತಲೇ ಬಂದರು.

ಇದು ಮಹಾದೇವಪ್ಪನವರು ತಮ್ಮಿಂದ ತಾವೇ ತಮಗಾಗಿ ಮಾಡಿಕೊಂಡ ದ್ರೋಹವಾಗಿತ್ತು.

■ ವರದಿಗಾರ

ಬೊಬ್ಬಿರಿಯುತ್ತಿರುವ ಗುತ್ತೇದಾರ

ಕಲಬುರ್ಗಿ ಜಿಲ್ಲೆಯ ಆಳಂದದ ಶಾಸಕ ಸುಭಾಷ್ ಗುತ್ತೇದಾರರ ರಾಜಕೀಯ ನಡವಳಿಕೆಗಳೇನೆ ಇರಲಿ, ಅವರು ಬಹಳ ಕಾಲಗಳಿಂದ ನಕಲಿ ಮದ್ಯ ತಯಾರಿಸುತ್ತ ಬಂದ ಸಂಗತಿ ಇಲ್ಲಿನ ಎಲ್ಲರಿಗೂ ಗೊತ್ತಿರುವಂಥದ್ದೇ. ಜೊತೆಗೆ ಈ ಹೆಂಡದ ಬೇನಾಮಿ ವ್ಯವಹಾರ ಹಾಗೂ ಅದರ ಸುತ್ತಮುತ್ತ ಹಬ್ಬಿರುವ ಬಾರಾ ಖಾನಗಡಿಗಳಲ್ಲಿ ನಡೆದ ಧಮಕಿ-ಕೊಲೆ ಪ್ರಕರಣಗಳಲ್ಲಿ ಗುತ್ತೇದಾರರು ಭಾಗಿಯಾಗಿರುವುದೂ ಸೂರ್ಯ ಪ್ರಕಾಶದಷ್ಟು ಸ್ಪಷ್ಟ!



ಆದರಲ್ಲೂ ತನ್ನ ರಾಜಕೀಯ ಹಾಗೂ ವ್ಯಾವಹಾರಿಕ ಲೋಕಕ್ಕೆ ಯಾರು ಪ್ರವೇಶಿಸುತ್ತಾರೋ ಅವರನ್ನು "ಒಂದು ಕೈ ನೋಡಿಬಿಡಬಾರದ್ಯಾಕೆ?" ಎಂಬ ಹ್ಯಾವ ತುಂಬಿಕೊಂಡವರು ಸುಭಾಷ್ ಗುತ್ತೇದಾರ. ಇದರಿಂದಾಗಿ ಈ ಭಾಗದಲ್ಲಿ ಸಾಕಷ್ಟು ರೌಡಿಗಳು, ನಟೋರಿಯಸ್ ಕಿಲ್ಲರ್‌ಗಳು ಅಬ್ಬರಿಸಿದ್ದುಂಟು.


ಕಳೆದ ಚುನಾವಣೆಯಲ್ಲಿ ಬಿ.ಆರ್.ಪಾಟೀಲ ಎಂಬ ಶುದ್ಧ ಸಾಮಾಜಿಕ ಕಾಳಜಿ, ಬದ್ಧತೆಗಳಿರುವ ಮನುಷ್ಯ ಆಳಂದದಲ್ಲಿ ಯಶಸ್ಸು ಕಾಣಬೇಕಿತ್ತು, ಆದರೆ ಅವರು ಸಿದ್ದರಾಮಯ್ಯನ ಗುಂಪಿನೊಂದಿಗೆ ಗುರುತಿಸಿಕೊಂಡದ್ದು ಸಿದ್ದರಾಮಯ್ಯನವರ ಹಿಂದೆಯೇ ಕಾಂಗ್ರೆಸ್ ತೆಕ್ಕೆಗೆ ಸೇರಿದ್ದು ಇಲ್ಲಿನ ಬಹಳಷ್ಟು ಜನರಿಗೆ ಸರಿಕಾಣುಬರಲಿಲ್ಲ. ಹೇಗೂ [illegible] ಹಳಸಿತ್ತು, ನಾಯಿ ಹಸಿದಿತ್ತು ಎಂಬಂತೆ ಸುಭಾಷ್ ಗುತ್ತೇದಾರ ಇಲ್ಲಿಯ ಶಾಸಕನಾದ.

ಆದರೇನಂತೆ? ರಾಜಕೀಯದ ಚದುರಂಗದಾಟದಲ್ಲಿ ಸದ್ಯಕ್ಕೆ, ಗುತ್ತೇದಾರ್ ಛೂ ಆಗಿದ್ದರೂ ಈ ಮೊದಲಿನ ಮದ್ಯ ತಯಾರಿಸುವುದನ್ನು ಅವರು ಬಿಡಲಾರರು. ಈ ಹಿಂದೆ ಬೀದರ್, ಗುಲಬರ್ಗಾ ಮತ್ತು ರಾಯಚೂರು ಜಿಲ್ಲೆಗಳ ಅಬಕಾರಿ ಗುತ್ತೇದಾರಿಕೆಯನ್ನು ತಾವೇ ಪಡಕೊಂಡು, ನಕಲಿ ಮದ್ಯ ತಯಾರಿಸುತ್ತ ಸರಕಾರದ ಬೊಕ್ಕಸಕ್ಕೆ ಟೋಪಿ ಹೊಲಿಸುತ್ತಿದ್ದರು. ಈ ಛಾಳಿಯನ್ನು ಸಾರಾಯಿ ನಿಷೇಧದ ಈ ದಿನಗಳಲ್ಲೂ ಮುಂದುವರೆಸಿದ್ದಾರೆ.

ಗುತ್ತೇದಾರರ ಮೇಲೆ ನಿಗಾ ಇರಿಸಿದ್ದ ಅಬಕಾರಿ ಇಲಾಖೆಯ ಬೆಂಗಳೂರಿನ ತಂಡ ಎಸ್.ಕೆ. ವೇಣುಗೋಪಾಲ ನೇತೃತ್ವದಲ್ಲಿ ಇತ್ತೀಚೆಗೆ ಆಳಂದದ ಗುತ್ತೇದಾರರ ಮದ್ಯ ತಯಾರಿಕೆಯ ಗಡಂಗಿನ ಮೇಲೆ ದಾಳಿ ಮಾಡಿತ್ತು. ಸೆಪ್ಟೆಂಬರ್ 16ರ ಸರಿ ರಾತ್ರಿಯಿಂದ 17ರ ಬೆಳಗಿನವರೆಗೂ ಆ ಗಡಂಗನ್ನು ಜಪ್ತಿ ಮಾಡಿದ ಅಧಿಕಾರಿಗಳು ಶಶಿಕಾಂತ ಗುತ್ತೇದಾರ ಎಂಬ ಸುಭಾಷ್ ಗುತ್ತೇದಾರರ ಸಹೋದರ ಸಂಬಂಧಿ ಹಾಗೂ ಹದಿನಾಲ್ಕು ಜನರನ್ನು ತಮ್ಮ ವಶಕ್ಕೆ ತೆಗೆದುಕೊಂಡಿದ್ದಾರೆ. ಅಲ್ಲದೆ ಗುತ್ತೇದಾರನ ಸುಪುತ್ರ ಸಂತೋಷ್ ಗುತ್ತೇದಾರನೆ ಇದನ್ನು ನಡೆಸಿಕೊಂಡು ಹೋಗುತ್ತಿರುವುದು ಪ್ರಾಥಮಿಕ ತನಿಖೆಗಳಿಂದ ದೃಢಪಟ್ಟದೆ.

ಆದರೆ ಇದನ್ನೆಲ್ಲ ಸಾರಾಸಗಟಾಗಿ ಅಲ್ಲಗಳೆದಿರುವ ಸುಭಾಷ್ ಗುತ್ತೇದಾರ ತನಗೂ ಈ ಗಡಂಗಿನಲ್ಲಿ ಸಿಕ್ಕಿರುವ ಮದ್ಯಕ್ಕೂ, ಯಾವುದೇ ಸಂಬಂಧವಿಲ್ಲ, ರಾಜಕೀಯ ಹಿತೂರಿಯಿಂದ ತನ್ನ ಮೇಲೆ ಮಸಿ ಬಳಿಯುವ ಯತ್ನ ನಡೆದಿದೆ ಎಂದು ಬೊಬ್ಬಿರಿಯುತ್ತಿದ್ದಾರೆ. ಇದೆಂಥ ಚೋದ್ಯ!

■ ವರದಿಗಾರ



ಕೊಪ್ಪಳ: ನಗರಸಭೆ ಅಧ್ಯಕ್ಷ ಚಂದ್ರುವಿನ ಅವತಾರ

ಕೊಪ್ಪಳ ನಗರಸಭೆಗೆ ಕಮಿಷನರ್, ಎಇಇ, ಜೇಇಗಳು, ಕ್ಲರ್ಕ್‌ಗಳು ಮತ್ತು ಪೌರಕಾರ್ಮಿಕರು ಬೇಕಾಗಿದ್ದಾರೆ. ಈ ಹುದ್ದೆಗಳಿಗೆ ತಕ್ಕ ಅರ್ಹತೆ ಮಾತ್ರವಲ್ಲದೆ ಹಾಲಿ ಅಧ್ಯಕ್ಷ ಚಂದ್ರು ಕವಲೂರನ ಬಾಯಿಂದ ಹೊರಡುವ ಅವಾಚ್ಯ ಬೈಗುಳಗಳನ್ನೂ ಸಹಿಸಿಕೊಳ್ಳಲು ಸಿದ್ಧರಿರಬೇಕು. ಇದಕ್ಕೆಲ್ಲ ರೆಡಿಯಿದ್ದವರು ಕೊಪ್ಪಳ ನಗರಸಭೆಗೆ ಭೇಟಿ ಕೊಡಬಹುದು. ಅಲ್ಲಿ ಅಷ್ಟೊಂದು ಹುದ್ದೆಗಳು ಖಾಲಿ ಇವೆಯಾ ಎಂದು ಪ್ರಶ್ನಿಸಬೇಡಿ. ಏಕೆಂದರೆ ಇದೇ ಚಂದ್ರುವಿನ ಹಲ್ಕಾ ಶಬ್ದಗಳಿಂದ ಬೈಯಿಸಿಕೊಂಡು ಸಾಕಾದ ನೌಕರರು, ಎದುರು ನಿಂತು ಮಾತಾಡಿದರೆ ಕೂಡಲೇ ಬೇರೆಡೆಗೆ ವರ್ಗಾವಣೆಯಾಗುತ್ತಾರೆ.

ಕೊಪ್ಪಳದ 14 ನೇ ವಾರ್ಡಿನ ಜನ ಕಾಂಗ್ರೆಸ್ಸಿನ ಸೋಮಪ್ಪ ಗೆಜ್ಜೆಯನ್ನು ಸೋಲಿಸಿದ್ದಕ್ಕೆ ಈಗ ಊರೇ ಪಶ್ಚಾತ್ತಾಪಪಡುತ್ತಿದೆ. ಈ ಚಂದ್ರು ಶ್ರೀಮಂತನಿರುವುದರಿಂದ ಹಣದಾಸೆಗೆ ಬಲಿಯಾಗದೆ ಒಳ್ಳೆ ಆಡಳಿತ ಕೊಟ್ಟರೂ ಕೊಡಬಹುದು ಎಂದುಕೊಂಡು ಚಂದ್ರುವೇ ಅಧ್ಯಕ್ಷನಾಗಲಿ ಎಂದು ಜನ ಬಯಸಿದ್ದರು. ಆದರೆ ಗೆದ್ದಮೇಲೆ ಚಂದ್ರುವಿನ ಅವತಾರವೇ ಬೇರೆ.

ಆಡಳಿತದ ಒತ್ತಡದಲ್ಲಿ ಏನೇನೋ ಮಾತಾಡುವಂತವನಾಗಿದ್ದರೆ ಸುಮ್ಮನಿರಬಹುದಿತ್ತು, ಆದರೆ ಈ ಚಂದ್ರು ಬೀದಿ ರೌಡಿಯಂತೆ ನಗರಸಭೆ ಅಧಿಕಾರಿಗಳಿಗೆ "ಬೋ.... ಸೂ.... ಮಕ್ಕಳಾ..." ಎಂದರೆ ಯಾರಾದರೂ ಸುಮ್ಮನಿರುತ್ತಾರಾ?

ಇತ್ತೀಚೆಗೆ ಈ ನಗರಸಭೆಯ ಕೌನ್ಸಿಲರ್ ವಾರ್ಡ್ ನಿರ್ಮಾಣಕ್ಕೆ ೨ ಲಕ್ಷ ಕೊಟ್ಟು, ಕೆಲಕಾಲ ಉದ್ಘಾಟನೆ ಮಾಡಿಸದೆ ವಾರ್ಡಿನವರಿಗೆ ನಿರಾಶೆ ಮೂಡಿಸಿ, ಬೇರೆ ದಿನ ಎಂಎಲ್‌ಎ ಕರಡಿಯೊಂದಿಗೆ ಚಂದ್ರು ಕೆಲಸದ ಚಾಲನೆಗೆ ಬಂದಾಗ, ಎರಡು ಬಾರಿ ತಮ್ಮನ್ನು ಕಾಯಿಸಿದ್ದಕ್ಕೆ "ಇವತ್ತು ಬೇಡ, ನಾಳೆ ಬಂದು ಉದ್ಘಾಟನೆ ಮಾಡಿಕೊಳ್ಳಿ" ಎಂದಿದ್ದಾನೆ ಕೌನ್ಸಿಲರ್ ಪಾಷಾ. ಆದರೆ ಮರುದಿನವೇ ಪಾಷಾ ನಗರಸಭೆಯ ಎಇಇ ಆನಂದ ಕಾಂಬಳೆ, ಕೌನ್ಸಿಲರ್ ಇಂದಿರಾ ಭಾವಿಕಟ್ಟಿಯನ್ನು ಕರೆಸಿ ಉದ್ಘಾಟನೆ ಮಾಡಿಸಿದ.



ಆನಂದ್ ಕಾಂಬ್ಳೆ

ಮರುದಿನ ಪತ್ರಿಕೆಯಲ್ಲಿ ಉದ್ಘಾಟನಾ ಫೋಟೋ ನೋಡಿ ಉರಉರ ಅಂತ ಉರಿದುಬಿದ್ದ ಚಂದ್ರು, ಕಮಿಷನರ್ ಅಣ್ಣಿಗೇರಿಗೆ ಅವಾಚ್ಯ ಶಬ್ದಗಳಿಂದ ಬೈಯ್ದುಬಿಟ್ಟ. "ಹಾಗೆಲ್ಲ ಬೈಯ್ಯಬೇಡಿ, ನಾವೇನು ತಪ್ಪು ಮಾಡಿಲ್ಲ" ಎಂದು ಅಣ್ಣಿಗೇರಿ ಹೇಳಿದ್ದಾರೆ. ಆದರೆ ಚಂದ್ರು ಸುಮ್ಮನಿರಬೇಕಲ್ಲಾ? ಎಇಇ ಆನಂದ ಕಾಂಬಳೆಯೂ ಇಂತಹದ್ದೇ ಮತ್ತಷ್ಟು ಬೈಗುಳ ಕೇಳುವಂತಾಗಿದೆ. ಇದನ್ನು ಸಹಿಸದ ಕಾಂಬಳೆ ಅಸಲಿಗೆ ಬಡ್ಡಿ ಸೇರಿಸಿ ಚಂದ್ರುಗೆ ಸರಿಯಾಗಿ ದಬಾಯಿಸಿದ್ದಾರೆ.

ಯಾವುದೇ ಕಾಮಗಾರಿಗೆ ಆದೇಶ ಕೊಟ್ಟರೆ ಕೆಲಸ ಚಾಲನೆ ಮಾಡಬಹುದು. ಆದರೆ ತನ್ನ ಮುಂದೆ ಎಲ್ಲರೂ ತಗ್ಗಿ ನಿಲ್ಲಬೇಕು ಎಂಬ ಹಪಹಪಿ ಚಂದ್ರುಗೆ. ಕೆಲಸದ ಉದ್ಘಾಟನೆಯ ನೆಪದಲ್ಲಿ ರಾಜಕೀಯ ಮಾಡುತ್ತಾನೆ. ಈತನ ಹರಾಕಿರಿಯಿಂದ ಕೊಪ್ಪಳ ನಗರವೇ ಬರ್ಬಾದೆದ್ದು ಹೋಗಿದೆ. ಅದನ್ನು ಕಂಡು ರೋಸಿದ ಚಂದ್ರುವಿನ ಸೋದರ ಸಂಬಂಧಿ ಕರವೇಯ ವಿಜಯಕುಮಾರ ಬಳಗ 'ಕೊಪ್ಪಳ ಕರ್ಮಕಾಂಡ' ಎಂಬ ಸಿಡಿ ಮಾಡಿ ನಗರಸಭೆ ಮುಂದೆಯೇ ಸಾರ್ವಜನಿಕರಿಗೆ ತೋರಿಸಿದೆ.

ಆದರೆ ಚಂದ್ರು ಮತ್ತು ಆತನ ಆಡಳಿತ ಮಾತ್ರ ಸುಧಾರಿಸಲಿಲ್ಲ. ಬೈಯ್ಯುವುದರಲ್ಲಿ ಭಯಂಕರ ಮುಂದಾಗಿರುವ ಈತ ಮೊನ್ನೆ ವಿಧಾನಸಭಾ ಚುನಾವಣಾ ಪ್ರಚಾರಕ್ಕೆ ದೇವರಾಜ ಅರಸ್ ಕಾಲೊನಿಗೆ ಬಂದಾಗ, ಅಲ್ಲಿನ ಹಿರಿಯ ಅಬ್ಬಾಸ್ ಟೇಲರ್ "ಪುರುಷರಿಗೆ ಶೌಚಾಲಯ ಕಟ್ಟಿಸಿ" ಅಂದರು. ಆಗ "ನೀವು (ಮುಸ್ಲಿಮರು) ಯಾರಿಗೆ ಓಟು ಹಾಕಿದ್ದೀರಿ? ಅವನನ್ನೇ ಕೇಳಿ. ನನ್ನನ್ನೇಕೆ ಕೇಳ್ತೀರಿ, ಬ....ಕಾಯಿ" ಎಂದು ಉತ್ತರಿಸಿದ ಚಂದ್ರು. "ನೋಡಿ ಅಂವ ಇಂವ ಅನ್ನಬೇಡ" ಅಂದದ್ದೇ ತಡ, ಚಪ್ಪಲಿಯಿಂದ ಹೊಡಿತೀನಿ ಅನ್ನಬೇಕೆ ಈ ಚಂದ್ರು?



ಅಣ್ಣಿಗೇರಿ

ಪೌರಕಾರ್ಮಿಕರಲ್ಲಿ ಹೆಚ್ಚು ದಲಿತರು, ಅಲ್ಪಸಂಖ್ಯಾತರಿದ್ದು ಅವರು ಸಂಬಳ ಕೇಳಿದರೆ ಮತ್ತದೇ ಬೈಗುಳ. ಕಮಿಷನರ್ ಅಣ್ಣಿಗೇರಿ ತನ್ನ ಸರ್ವಿಸ್‌ನಲ್ಲಿ ಇಂತಹ ಅಧ್ಯಕ್ಷನನ್ನು ನೋಡಿರಲಿಕ್ಕಿಲ್ಲ. ಪೌರಕಾರ್ಮಿಕರು ಮಾತ್ರ ತಂದೆಯ ಆಡಳಿತ ಮೆಚ್ಚಿ ಮಗನನ್ನು ಗೆಲ್ಲಿಸಿದ್ದಕ್ಕೆ ಹಣೆಹಣೆ ಬಡಿದುಕೊಳ್ಳುತ್ತಿದ್ದಾರೆ.

ತನಗೊಂದು ಪ್ರತ್ಯೇಕ ಚೇಂಬರ್ ಇದ್ದರೂ ಕಮಿಷನರ್ ಚೇಂಬರ್‌ನಲ್ಲಿ ಕುಂತು ಕೆಲ ಕೌನ್ಸಿಲರ್‌ಗಳ ಜೊತೆ ಹಥಟೆ ಹೊಡೆಯುವುದು ಚಂದ್ರುವಿನ ಅಭ್ಯಾಸ. ಈತನ ಪರ್ಸೆಂಟೇಜ್ ದಾಹಕ್ಕೆ ಹೆದರಿ ಸಾವರ್‌ಜಂಗ್ ರಸ್ತೆ ಡಾಂಬರೀಕರಣಕ್ಕೆ ಯಾರೂ ಟೆಂಡರ್ ಹಾಕುತ್ತಿಲ್ಲ. ಹಾಗೆಯೇ ರೆಸ್ಟೋರೆಂಟ್‌ನ ಲೈಸನ್ಸ್ ರಿನೀವಲ್‌ಗೆ ಕಾಂಗ್ರೆಸ್‌ನ ಹನಮಂತಪ್ಪನ ಅಳಿಯ ಮಲ್ಲಣ್ಣನಿಂದ ಹಣ ಪಡೆದಿದ್ದಾನೆ. ಜನನ-ಮರಣ ಪ್ರಮಾಣ ಪತ್ರ ನೀಡಲು ಕ್ಲರ್ಕ್‌ಗಳು, ಕಾರ್ಮಿಕರು ರಸ್ತೆ ಕಸ ಗುಡಿಸಲು ಕೂಡ ಚಂದ್ರುವನ್ನು ಕೇಳಿಯೇ ಹೋಗಬೇಕು. ನಗರಸಭೆಗೆ ಫರ್ನಿಚರ್ ಸಪ್ಲೈ ಮಾಡಿದವರ ಹಣ ಕೂಡ ನೀಡದ್ದರಿಂದ ಅವರೆಲ್ಲ ಕೋರ್ಟಿಗೆ ಹೊರಟಿದ್ದಾರೆ.

ಸೆ. 17 ರಂದು ಜಿಲ್ಲೆಯಲ್ಲಿ ಹೈದರಾಬಾದ್ ಕರ್ನಾಟಕ ವಿಮೋಚನಾ ದಿನಾಚರಣೆ ನಡೆದರೆ, ಇತ್ತ ನೌಕರರಿಂದ ಹಿಡಿದು ಪೌರಕಾರ್ಮಿಕರೆಲ್ಲರೂ ಚಂದ್ರು ವಿರುದ್ಧ ಧರಣಿ ಕೂತಿದ್ದರು. ಇವರನ್ನು ಗಮನಿಸದ ಶಾಸಕ ಕರಡಿ ಮಾತ್ರ ಮಂತ್ರಿ ಕಾರಜೋಳನ ಹಿಂದೆ ಹೋದ. ಕೌನ್ಸಿಲರ್ ವೀರಣ್ಣ ಹಂಚಿನಾಳ, ಮಾಜಿ ಅಧ್ಯಕ್ಷ ಕದ್ರಳ್ಳಿ, ಮಠ ಧರಣಿ ನಿರತರೊಂದಿಗೆ ರಾಜಿ ಸಂಧಾನದ ಭಾಷಣ ಮಾಡಿ 'ಅತು, ಛಾಳ... ದೊಡ್ಡ ಮನುಷ್ಯಾರ ಆದೀರಿ ನಡ್ರೀ' ಅಂತ ಅನ್ನಿಸಿಕೊಂಡು ಹೋಗಿದ್ದಾರೆ.

ಆಗಿನ ದೇವರಾಜ ಅರಸ್ ಕಾಲನಿ ಗಲಾಟೆ, ಮೊನ್ನೆಯ ಸರದಾರಗಲ್ಲಿ ಜಟಾಪಟಿ, ಈಗ ನಗರಸಭೆಯಲ್ಲಿ ಬೈಯ್ದಾಟ ಮೂರು ಘಟನೆ ಸಂಗಣ್ಣ ಕರಡಿ ಸಮ್ಮುಖದಲ್ಲಿಯೇ ನಡೆದರೂ ಯಾಕೋ ಅವರೂ ಚಂದ್ರುವನ್ನು ಪ್ರಶ್ನಿಸುತ್ತಿಲ್ಲ. ಒಳ್ಳೆ ಕೆಲಸ ಮಾಡಿ ಹೆಸರು ಗಳಿಸುವುದಕ್ಕಿಂತ ಹೀಗೆ ಮಾಡುತ್ತ ಹೋಗಲಿ ಅಂತ ಕರಡಿ ಬಯಸಿರಬೇಕು. ಮೊನ್ನೆ ಸರ್ಕಾರದಿಂದ ಮತ್ತೇ ನಗರಸಭೆಗೆ ೪ ಕೋಟಿ ಅನುದಾನ ಬಂದಿದೆ. ಮತ್ತೊಂದು ರೌಂಡ್ ತಾರತಮ್ಯದ ಜಗಳ ಕಾಣುವ ಸಂಭವ ಇದೆ.

ಅದಕ್ಕೆ ಹಿರಿಯರಾದ ಕವಲೂರು ಮುದಿಯಪ್ಪನವರು ಚಂದ್ರುವಿಗೆ [illegible] ಹೇಳಲಿ. ಅದೇ ಕೊಪ್ಪಳ ನಾಗರಿಕರ ಆಸೆ.

■ [illegible]



“ಕ್ರೈಸ್ತರು ಅಪರಾಧಿಗಳು”

ವಿಚಾರಣೆಗೆ ಮೊದಲೇ ಹೊರಬಿದ್ದ ತೀರ್ಪು

ಕಳೆದ ಭಾನುವಾರ ಸೆಪ್ಟೆಂಬರ್ 14ರಂದು ಭಜರಂಗಿಗಳು ದಾಳಿ ಮಾಡಿದ ರಾಜ್ಯದ ಹಲವು ಕ್ರೈಸ್ತ ಧಾರ್ಮಿಕ ಕೇಂದ್ರಗಳಲ್ಲಿ ಉಡುಪಿಯ ನ್ಯೂಲೈಫ್ ಪ್ರಾರ್ಥನಾ ಸಭಾಂಗಣವೂ ಒಂದು. ಉಡುಪಿಯ ಬಸ್‌ಸ್ಟ್ಯಾಂಡ್ ಬಳಿಯ ಕೃಷ್ಣಕೃಪ ಕಾಂಪ್ಲೆಕ್ಸ್‌ನಲ್ಲಿರುವ ಈ ಸಭಾಂಗಣದಲ್ಲಿ ಭಾನುವಾರ ಬೆಳಿಗ್ಗೆ 10ರ ವೇಳೆಗೆ ಹೆಂಗಸರು ಮಕ್ಕಳೂ ಸೇರಿದಂತೆ ಸುಮಾರು 150 ಮಂದಿ ಪ್ರಾರ್ಥನೆ ಮಾಡುತ್ತಿರುವಾಗಲೇ ಹದಿನೈದು ಇಪ್ಪತ್ತು ತರುಣರು ನುಗ್ಗಿ ತಮ್ಮ ಕೈಗೆ ಸಿಕ್ಕವರನ್ನು ಥಳಿಸಿದರು; ಕುರ್ಚಿಗಳನ್ನು ಮುರಿದರು; ಎರಡು ಮೂರು ಟ್ಯೂಬ್‌ಲೈಟ್‌ಗಳನ್ನು ಒಡೆದರು. ಸೌಂಡ್ ಸಿಸ್ಟಮ್, ಕೀಬೋರ್ಡ್ ಮತ್ತು ಡ್ರಮ್ ಸೆಟ್‌ಗಳನ್ನು ನಾಶಪಡಿಸಿದರು. ಆ ಸಭಾಂಗಣದ ಎಂಟು ಕಿಟಕಿಗಳ ಗಾಜನ್ನು ಒಂದೂ ಬಿಡದಂತೆ ಹೊಡೆದು ಚೂರು ಮಾಡಿದರು. ಭಜರಂಗಿಗಳು ಐದಾರು ನಿಮಿಷಗಳ ಒಳಗೆ ತಮ್ಮ ಕೆಲಸ ಮುಗಿಸಿ ಸ್ಥಳದಿಂದ ಪರಾರಿಯಾದರು. ಸಭಾಂಗಣದಲ್ಲಿದ್ದವರ ಜೊತೆ ಅವರು ಯಾರೂ ಒಂದು ಮಾತನ್ನೂ ಆಡಲಿಲ್ಲ; ಬಹುತೇಕ 20ರ ಪ್ರಾಯವನ್ನೂ ದಾಟಿರದ ಈ ತರುಣರಿಂದ ಪೆಟ್ಟುತಿಂದವರಲ್ಲಿ ಮೂವರು ಮಹಿಳೆಯರು ಮತ್ತು ಎರಡು ವರ್ಷ ಪ್ರಾಯದ ಒಂದು ಮಗು ಜೋಶುವಾ ಕೂಡ ಇದ್ದಾರೆ. ಆದರೆ ಸಭಾಂಗಣದಲ್ಲಿದ್ದ ಯಾರೂ ಭಜರಂಗಿಗಳಿಗೆ ತಿರುಗಿ ಹೊಡೆಯಲು ಮುಂದಾಗಲಿಲ್ಲ. ನಾಲ್ಕು ವರ್ಷಗಳ ಕೆಳಗೆ ಇದೇ ಭಾನುವಾರ (12.9.2004) ಇದೇ ಸಭಾಂಗಣದ ಮೇಲೆ, ಸರಿಸುಮಾರು ಇದೇ ಹೊತ್ತಿಗೆ ಇಂತಹದ್ದೇ ಒಂದು ದಾಳಿ ನಡೆದಿತ್ತು. ಈಗಿನಂತೆ ಆಗಲೂ ಈ ನ್ಯೂಲೈಫ್ ಕೇಂದ್ರ ಮತಾಂತರದಲ್ಲಿ ತೊಡಗಿದೆ ಎಂದು ಆಪಾದಿಸಲಾಗಿತ್ತು. ಉಡುಪಿಯ ನ್ಯೂಲೈಫ್ ಕೇಂದ್ರದ ಪ್ಯಾಸ್ಟರ್ ಗೋಪಿನಾಥನ್ ಈ ಆಪಾದನೆಯನ್ನು ನಿರಾಕರಿಸಿದ್ದರು; ಮೊನ್ನೆ ಮತ್ತೆ ಈ ಆಪಾದನೆಯನ್ನು ನೂರಕ್ಕೆ ನೂರು ಸುಳ್ಳು ಎಂದು ಬಲವಾಗಿ ಪ್ರತಿಪಾದಿಸಿದರು. “ನಾವು ಯಾವ ವಿಚಾರಣೆಗೂ ಸಿದ್ಧರಿದ್ದೇವೆ. ಅಷ್ಟು ಮಾತ್ರವಲ್ಲ, ದಯವಿಟ್ಟು ವಿಚಾರಣೆ ನಡೆಸಿ ಎಂದು ನಾವೇ ಒತ್ತಾಯಿಸುತ್ತೇವೆ. ನಾವು ಬಲಾತ್ಕಾರದ ಮತಾಂತರ ಮಾಡಿದ್ದೇವೆ ಎಂಬುದಕ್ಕೆ ಸಾಕ್ಷ್ಯಾಧಾರ ಕೊಡಿ” ಎಂದು ಅವರು ಒತ್ತಾಯಪೂರ್ವಕವಾಗಿ ಹೇಳಿದರು.

ಉಡುಪಿ, ಮಂಗಳೂರು ಮತ್ತು ರಾಜ್ಯದ ಇತರ ಕಡೆಗಳಲ್ಲಿ ಕ್ರೈಸ್ತ ಧಾರ್ಮಿಕ ಕೇಂದ್ರಗಳ ಮೇಲೆ ನಡೆದ ದಾಳಿಯ ಹೊಣೆಗಾರಿಕೆಯನ್ನು ಭಜರಂಗದಳಕ್ಕೂ ರಾಜ್ಯ ಸಂಚಾಲಕರು ಯಾವ ಅಳುಕೂ ಇಲ್ಲದೆ ಹೊತ್ತಿದ್ದಾರೆ. ಕಾನೂನಿನ ಭಯವಂತೂ ಭಜರಂಗಿಗಳಿಗೆ ಯಾವತ್ತೂ ಇರಲಿಲ್ಲ. ಈ ಹಿಂದೆ ಕಾಂಗ್ರೆಸ್, ಕಾಂಗ್ರೆಸ್-ಜೆಡಿಎಸ್ ಮತ್ತು ಜೆಡಿಎಸ್-ಬಿಜೆಪಿ ಸರ್ಕಾರಗಳಿದ್ದಾಗಲೂ ಭಜರಂಗದಳ, ಶ್ರೀರಾಮ ಸೇನೆ ಮುಂತಾದ ಸಂಘಟನೆಗಳು ಕ್ರೈಸ್ತರ ವಿರುದ್ಧ ಇಂತಹ ಹಲವು ಅಕೃತ್ಯಗಳನ್ನು ಎಗ್ಗಿಲ್ಲದೆ ನಡೆಸಿವೆ. ಪೊಲೀಸು ಇಲಾಖೆ ಅವನ್ನು ಕಂಡೂಕಾಣದಂತೆ ವರ್ತಿಸಿವೆ. ಈಗಂತೂ ರಾಜ್ಯದ ಮುಖ್ಯಮಂತ್ರಿ ಮತ್ತು ಗೃಹ ಮಂತ್ರಿಗಳೇ ಭಜರಂಗದಳದ ಗೂಂಡಾಗಿರಿಯನ್ನು ಸಮರ್ಥಿಸುತ್ತಿದ್ದಾರೆ!

ಭಜರಂಗದಳದ ಸಂಚಾಲಕರು ಮಾಡಿದ ಮತಾಂತರದ ಆರೋಪವನ್ನು ಮುಖ್ಯಮಂತ್ರಿಯವರು ಅಧಿಕೃತವಾಗಿ ಒಪ್ಪಿಕೊಂಡಿರುವುದು ಮಾತ್ರವಲ್ಲ “ಬಹುದೊಡ್ಡ ಪ್ರಮಾಣದಲ್ಲಿ ಮತಾಂತರ ನಡೆಯುತ್ತಿದೆ ಎಂಬ ಬಗ್ಗೆ ರಾಜ್ಯ ಸರ್ಕಾರದ ಹತ್ತಿರ ಸಾಕ್ಷ್ಯಾಧಾರಗಳಿವೆ; ನ್ಯೂಲೈಫ್ ಸಂಸ್ಥೆಗೆ ವಿದೇಶದಿಂದ ಅಪಾರ ಪ್ರಮಾಣದ ಹಣಬರುತ್ತಿದೆ” ಎಂದು ಸಹ ಆಪಾದಿಸಿದ್ದಾರೆ.

ಮತಾಂತರ ಅದರಷ್ಟಕ್ಕೆ ಅದು ಒಂದು ಅಪರಾಧವಲ್ಲ. ಮತಪ್ರತಿಪಾದನೆ ಮಾತ್ರವಲ್ಲ ಮತ ಪ್ರಚಾರ ಕೂಡ ಸಂವಿಧಾನದಿಂದಲೇ ಕೊಡಲ್ಪಟ್ಟಿರುವ ಒಂದು ಮೂಲಭೂತ ಸ್ವಾತಂತ್ರ್ಯ. ತಮ್ಮ ಮತವೇ ಶ್ರೇಷ್ಠ ಎಂದು ವಾದಿಸುವುದು ಮತ್ತು ಇತರ ಮತದವರನ್ನು ತಮ್ಮ ಮತದ ಕಡೆಗೆ ಒಲಿಸಿಕೊಳ್ಳುವುದು-ಈ ಸ್ವಾತಂತ್ರ್ಯ ಭಾರತದಲ್ಲಿ ಕ್ರೈಸ್ತರಿಗೆ ಮಾತ್ರವಲ್ಲ ಎಲ್ಲ ಮತಧರ್ಮದವರಿಗೂ ಇದೆ. ಅಭಿಪ್ರಾಯ ಸ್ವಾತಂತ್ರ್ಯ ಸಂಘಟನೆಯ ಸ್ವಾತಂತ್ರ್ಯ ಪ್ರಜೆಗಳು ತಾವು ಬಯಸಿದಲ್ಲಿ ನೆಲೆಸುವ, ಸಂಚರಿಸುವ ಮತ್ತು ಉದ್ಯೋಗ ಕೈಗೊಳ್ಳುವ ಸ್ವಾತಂತ್ರ್ಯಗಳ ಹಾಗೆಯೇ, ನಂಬಿಕೆ, ಪ್ರಚಾರ ಮತ್ತು ಹೃದಯ ಪರಿವರ್ತನೆಗಳ ಸ್ವಾತಂತ್ರ್ಯವೂ ಪ್ರಜಾಪ್ರಭುತ್ವಕ್ಕೆ ಮೂಲಾಧಾರವಾಗಿರುವಂತಹವು. ಬಲಾತ್ಕಾರದ ಮತಾಂತರ ಸಲ್ಲದು ಎಂಬ ಬಗ್ಗೆ ಯಾರದೂ ಭಿನ್ನಾಭಿಪ್ರಾಯವಿರಲಾರದು. ಆದರೆ ಯಾವ ಬಗೆಯ ಬಲಾತ್ಕಾರಗಳನ್ನು ಕಾನೂನಿನ ಪ್ರಕಾರ “ಅಪರಾಧ” ಎಂದು ಪರಿಗಣಿಸಬಹುದು? ಆಮಿಷವೊಡ್ಡುವುದೂ ಬಲಾತ್ಕಾರವೋ? ಶಾಲೆ, ಆಸ್ಪತ್ರೆ, ಅನಾಥಾಶ್ರಮ ಮುಂತಾದ ಸಂಸ್ಥೆಗಳನ್ನೂ ನಡೆಸುವುದೂ “ಬಲಾತ್ಕಾರ”ವೆನ್ನಿಸಿಕೊಳ್ಳುತ್ತದೋ? ರಾಜ್ಯದ ಮುಖ್ಯಮಂತ್ರಿಗಳು ಇದನ್ನು ಮೊದಲು ಸ್ಪಷ್ಟಪಡಿಸಬೇಕು.

ಮತಾಂತರವೆಂಬುದು ಪ್ರಾಯಕ್ಕೆ ಬಂದ ಜನರ ನಡುವೆ ನಡೆಯುವ ಪ್ರಕ್ರಿಯೆ. ಅದು ಬಾಂಬ್ ಸ್ಫೋಟದ ಹಾಗೆ ಕದ್ದುಮುಚ್ಚಿ ಮಾಡುವ ಭಯೋತ್ಪಾದನೆಯ ಕೆಲಸವಲ್ಲ. ನಾವೇ ದಿನನಿತ್ಯ ನೋಡುತ್ತಿರುವ ಹಾಗೆ ಕರ್ನಾಟಕದಲ್ಲಿ ಎಲ್ಲಿಯೂ ಯಾವ ಕ್ರೈಸ್ತ ಸಂಸ್ಥೆಯೂ ಬಲಾತ್ಕಾರದ ಮತಾಂತರದಲ್ಲಾಗಲೀ ಇನ್ನಾವುದೇ ಹಿಂಸಾತ್ಮಕ ಕೃತ್ಯಗಳಲ್ಲಾಗಲೀ ತೊಡಗಿಕೊಂಡಿಲ್ಲ. ನಮ್ಮ ಊರು ಮನೆಗಳಲ್ಲಿ ನಮ್ಮ ಯಾರ ಕಣ್ಣಿಗೂ ಬೀಳದಂತಹ ವಿದ್ಯಮಾನ ಮುಖ್ಯಮಂತ್ರಿಗಳ ದಿವ್ಯ ದೃಷ್ಟಿಗೆ ಗೋಚರವಾಗಿದ್ದರೆ, ಅದನ್ನು ಸೂಕ್ತ ಸಾಕ್ಷ್ಯಾಧಾರ ಸಮೇತ ಅವರು ಜನರ ಮುಂದೆ ಇಡಬೇಕು. ಅದು ಬಿಟ್ಟು ಭಜರಂಗದಳದ ಸಂಚಾಲಕರ ಚೀತ್ಕಾರಗಳಿಗೆ ಮುಖ್ಯಮಂತ್ರಿಗಳೂ ದನಿಗೂಡಿಸುವುದು, ಶಾಂತಿಯ ಮಾತಾಡುತ್ತಲೇ ಕ್ರೈಸ್ತ ಸಮುದಾಯವನ್ನು ಅವಹೇಳನ ಮಾಡುವುದು, ಅವರಿಗೆ ರಾಜ್ಯದಲ್ಲಿ ನಿಜಕ್ಕೂ ಶಾಂತಿ ಸೌಹಾರ್ದಗಳು ಬೇಕಿಲ್ಲ ಎಂಬುದನ್ನು ಸೂಚಿಸುತ್ತದೆ.

ಮುಖ್ಯಮಂತ್ರಿಗಳು ನ್ಯೂಲೈಫ್ ಸಂಘಟನೆ ಮತಾಂತರದಲ್ಲಿ ತೊಡಗಿದೆ ಎಂದು ಆಪಾದಿಸಿ ಅದರ ಬಗ್ಗೆ ವಿಚಾರಣೆ ನಡೆಸಲಾಗುವುದು ಎಂದು ಹೇಳಿದ್ದಾರೆ. ಇದೊಂದು ಸೋಜಿಗವೇ ಸರಿ. ಯಾಕೆಂದರೆ ವಿಚಾರಣೆ ನಡೆಸುವ ಮೊದಲೇ ಅವರು ಹಾಗೂ ಬಿಜೆಪಿಯ ಇತರ ದೊಡ್ಡ ನಾಯಕರು ಈ ಬಗ್ಗೆ ತೀರ್ಪು ಕೊಟ್ಟಾಗಿದೆ; ಅದನ್ನು ಜಾರಿಗೊಳಿಸಿಯೂ ಆಗಿದೆ. “ಮತಾಂತರಗೊಳ್ಳಲ್ಪಟ್ಟವರು” ಎಂದು ಇವರು ಭಾವಿಸಿರುವ ಜನಗಳ ಬಗ್ಗೆ ಈ ಭಜರಂಗಿಗಳಿಗೆ ಎಷ್ಟು ಪ್ರೀತಿ ಗೌರವಗಳಿವೆ ಎಂಬುದು ಅವರ ಮೇಲೆ ನಡೆಸಿದ ದಾಳಿಯಿಂದಲೇ ಗೊತ್ತಾಗುತ್ತದೆ. ಭಜರಂಗಿಗಳಾಗಲೀ, ಅವರ ಮುಖವಾಣಿಯಂತೆ ಕೆಲಸ ಮಾಡುತ್ತಿರುವ ಕರಾವಳಿಯ ಹೆಚ್ಚಿನ ಪತ್ರಿಕೆಗಳಾಗಲೀ, ಈ ನ್ಯೂ ಲೈಫ್ ಸಂಘಟನೆಯ ಪ್ಯಾಸ್ಟರ್‌ಗಳನ್ನು ಒಂದು ಮಾತೂ ಆಡಿಸಿಲ್ಲ; ಅವರ ಪ್ರಾರ್ಥನಾ ಸಭೆಗಳಿಗೆ ಬರುವ ಜನರನ್ನೂ ಮಾತಾಡಿಸಿಲ್ಲ. ಆದರೆ ಅವರೆಲ್ಲರೂ ಬಲಾತ್ಕಾರವಾಗಿ ಮತಾಂತರಗೊಂಡವರು ಎಂಬ ಬಗ್ಗೆ ಭಜರಂಗಿಗಳಿಗೆ ಯಾವ ಸಂದೇಹವೂ ಇಲ್ಲ. ಹೀಗೆ ಅವರು ಈಗಾಗಲೇ ತೀರ್ಮಾನಿಸಿ ಬಿಟ್ಟಿರುವ ವಿಷಯದ ಬಗ್ಗೆ ಈಗ ಅವರ ನಾಯಕ ವಿಚಾರಣೆ ನಡೆಸುತ್ತಾರಂತೆ!

ಮುಖ್ಯಮಂತ್ರಿಗಳು ಧಾರಾಳವಾಗಿ ಸರ್ಕಾರದ ಖರ್ಚಿನಲ್ಲಿ ವಿಚಾರಣೆ ನಡೆಸಲಿ; ಆದರೆ ಅದಕ್ಕೆ ಮೊದಲು ರಾಜ್ಯದ ಯಾವ್ಯಾವ ಪೊಲೀಸು ಠಾಣೆಗಳಲ್ಲಿ ಹಾಲಿ ಇರುವ ಕಾನೂನು ಪ್ರಕಾರ ಎಷ್ಟು ‘ಬಲಾತ್ಕಾರದ ಮತಾಂತರ’ದ ದೂರುಗಳು ದಾಖಲಾಗಿವೆ ಎಂಬುದನ್ನು ಜನರಿಗೆ ತಿಳಿಸಲಿ: ಇದುವರೆಗೂ ಅಂತಹ ದೂರು ದಾಖಲಾಗದೆ ಇದ್ದರೆ ಇನ್ನು ಮುಂದೆ ಯಾದರೂ ಇಂತಹ ಬಲಾತ್ಕಾರ, ಆಮಿಷ ಇತ್ಯಾದಿಗಳ ಬಗ್ಗೆ ಯಾರು ದೂರು ಸಲ್ಲಿಸಬಹುದು? ಮತಾಂತರಕ್ಕೆ ಒಳಗಾದವರೋ? ಅವರ ಕುಟುಂಬದವರೋ, ಊರಿನವರೋ ಅಥವಾ ಭಜರಂಗಿಗಳು ಆ ಬಗ್ಗೆ ಒಂದು ಹೇಳಿಕೆ ಕೊಟ್ಟರೂ ಅದನ್ನೇ “ದೂರು” ಎಂದು ಪರಿಗಣಿಸಬಹುದೋ? ಎಂಬುದನ್ನೂ ಮುಖ್ಯಮಂತ್ರಿಗಳು ಸ್ಪಷ್ಟಪಡಿಸಲಿ.

ಭಜರಂಗದಳದ ಸಂಚಾಲಕರು ಮೊನ್ನೆ ಪತ್ರಿಕಾಗೋಷ್ಠಿಯಲ್ಲಿ “ಸತ್ಯ ದರ್ಶನಿ” ಎಂಬ ಪುಸ್ತಕವೊಂದನ್ನು ನ್ಯೂಲೈಫ್‌ನವರು ಹಂಚುತ್ತಿದ್ದು ಅದರಲ್ಲಿ ಹಿಂದೂ ದೇವತೆಗಳನ್ನು ಅವಹೇಳನ ಮಾಡಲಾಗಿದೆ ಎಂದು ಆಪಾದಿಸಿದ್ದಾರೆ. ಮುಖ್ಯಮಂತ್ರಿಗಳು ಅದರ ಬಗ್ಗೆಯೂ ವಿಚಾರಣೆ ನಡೆಸಬೇಕು. ಯಾಕೆಂದರೆ ಆ ಪುಸ್ತಕವನ್ನು ತಿರುಪತಿಯಲ್ಲಿ ಮುದ್ರಿಸಲಾಗಿದೆಯಂತೆ! ತಿರುಪತಿಯಲ್ಲಿ ಕೆಲವು ತಿಂಗಳ ಹಿಂದೆ ಇದೇ ಭಜರಂಗಿಗಳು ಗೋಡೆಗಳ ಮೇಲೆ ಶಿಲುಬೆ ಇತ್ಯಾದಿಗಳನ್ನು ತಾವೇ ಬರೆದು ಅದನ್ನು ಕ್ರೈಸ್ತರ ತಲೆಗೆ ಕಟ್ಟಲು ಯತ್ನಿಸಿದ್ದು, ಅದನ್ನೇ ಮತಾಂತರದ ಪ್ರಯತ್ನ ಎಂದು ಪೇಜಾವರ ಶ್ರೀಗಳೂ ಸೇರಿದಂತೆ ಹಲವು “ದೊಡ್ಡ ಮನುಷ್ಯರು” ದೊಡ್ಡ ರಂಪ ಮಾಡಿದ್ದು-ಈ ಹಿನ್ನೆಲೆಯಲ್ಲಿ ತಿರುಪತಿ ಎಂದರೆ ಭಜರಂಗಿದಳದ ದಗಲ್‌ಬಾಜಿಗೆ ಇನ್ನೊಂದು ಹೆಸರು ಎಂಬಂತಾಗಿದೆ.

ಹಾಗಾಗಿ ಆ ಪುಸ್ತಕದ ಮೂಲ ಯಾವುದು? ಅದು ಭಜರಂಗಿಗಳ ಕೈ ಸೇರಿದ್ದು ಯಾವಾಗ ಮತ್ತು ಹೇಗೆ? ಎಂಬ ಬಗ್ಗೆಯೂ ವಿಚಾರಣೆ ಆಗಬೇಕು.

ಉಡುಪಿಯ ನ್ಯೂಲೈಫ್‌ನ ಪ್ಯಾಸ್ಟರ್ ಗೋಪಿನಾಥನ್ “ನಾನು ಆ ಪುಸ್ತಕವನ್ನು ನೋಡಿಯೇ ಇಲ್ಲ, ಇನ್ನು ಹಂಚುವುದು ಎಲ್ಲಿಂದ” ಎಂದು ಕೇಳಿದರು. ಆದರೂ ಆ ಬಗ್ಗೆ ತನಿಖೆ ಆಗಲಿ; ತನಿಖೆಯ ಮೊದಲೇ ಭಜರಂಗಿಗಳು ಆ ಬಗ್ಗೆ ದಾಳಿ ನಡೆಸಿದ್ದು ಯಾಕೆ ಎಂಬುದರ ಬಗ್ಗೆಯೂ ಮುಖ್ಯಮಂತ್ರಿಗಳು ನ್ಯಾಯಸಮ್ಮತವಾದ ವಿಚಾರಣೆ ನಡೆಸಬೇಕು. ಹಾಗೆಯೇ ಗೋಪಿನಾಥನ್ ತಮ್ಮ ಪ್ರಾರ್ಥನಾ ಸಭೆಯ ಬಗ್ಗೆ ಹೇಳುತ್ತ “ನಮ್ಮದು ಕ್ಯಾಥೋಲಿಕ್, ಪ್ರಾಟೆಸ್ಟಂಟ್ ಚರ್ಚುಗಳ ಹಾಗೆ ಒಂದು ಪ್ರತ್ಯೇಕ ಚರ್ಚು ಅಲ್ಲ, ನಮ್ಮಲ್ಲಿಗೆ ಬರುವ ಯಾರನ್ನೂ ಪರಿವರ್ತಿಸುವುದೂ ಇಲ್ಲ; ಯಾರನ್ನೂ ತಮ್ಮ ಮೊದಲಿನ ನಂಬಿಕೆಯನ್ನು ಬಿಟ್ಟುಕೊಡಲೂ ಒತ್ತಾಯಿಸುವುದಿಲ್ಲ” ಎಂದು ಹೇಳಿದರು. ಹಾಗಾಗಿ ಮುಖ್ಯಮಂತ್ರಿಗಳು ವಿಚಾರಣೆಗೆ ಮುನ್ನ ‘ಮತಾಂತರ’ ಎಂದರೆ ಏನು? ಅದು ಹಳೆಯ ಅಂಗಿ ಕಳಚಿ ಹೊಸ ಅಂಗಿ ತೊಟ್ಟುಕೊಳ್ಳುವಂತಹ

ಹಿಂದೂರಾಷ್ಟ್ರ, ಕೊಲೆಗಡುಕ ಮನಸ್ಸು ಮತ್ತು ಮುತಾಳಿಕರ ಸೈನ್ಯ


1946-ಕಲ್ಕತ್ತ, 1953- ಕೋಟಾ, 1964- ರೂರ್ಕೆಲಾ, 1967- ರಾಂಚಿ, 1969- ಅಹಮದಾಬಾದ್, 1970 ಭಿವಾಂಡಿ, 1978- ಅಲಿಗಢ, 1979- ಜಮಷೆಡ್‌ಪುರ, 1980- ಮೊರಾದಾಬಾದ್, 1982- ಮೀರತ್, 1983- ಹೈದರಾಬಾದ್, 1983- ಅಸ್ಸಾಂ 1984- ದೆಹಲಿ, 1989- ಭಾಗಲ್‌ಪುರ, 1991- ಭದ್ರಕ್, 1992- ಅಯೋಧ್ಯ 1992- ಮುಂಬೈ, 2002- ಗುಜರಾತ್, 2003- ಮರಾದ್, 2008- ಜಮ್ಮು-ಕಾಶ್ಮೀರ, ಕಂದಮಾಳ್, ಕರ್ನಾಟಕ.

ಇವು ಕೇವಲ ದಾಖಲೆಗಳಲ್ಲ, ಸಂಘಪರಿವಾರದ ಭಯೋತ್ಪಾದಕ ಇತಿಹಾಸದ ಅಷ್ಟೋತ್ತರ! ಇವೆಲ್ಲವೂ ದೊಡ್ಡಮಟ್ಟದ ಭಯೋತ್ಪಾದಕ ಘಟನೆಗಳು. ಇನ್ನೂ ಹತ್ತುಹಲವಾರು ಸಣ್ಣ ಪ್ರಮಾಣದ ಪ್ರಚೋದನಾಕಾರಿ ಘಟನೆಗಳು, ಗಲಭೆಗಳನ್ನು ಇಲ್ಲಿ ದಾಖಲಿಸಿಲ್ಲ, ಸಂಘಪರಿವಾರದವರಿಗೆ ದೊಡ್ಡಮಟ್ಟದ ಗಲಭೆ ಕೈಗೊಳ್ಳಲು, ಸಣ್ಣ ಕಾರಣವಿದ್ದರೂ ಸಾಕು. ಕುಂಟು ನೆಪಗಳಿಗಾಗಿ ಕಾಯುತ್ತಾ ಕೂರುವ ಇವರ ಜಾಯಮಾನ ಇಂದು ನಿನ್ನೆಯದಲ್ಲ, ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್)ದ ಹುಟ್ಟಿನಿಂದ ಇಂತಹ ಸಿದ್ಧಾಂತ ಆಚರಣೆಯಲ್ಲಿದೆ. ಗೋಲ್ವಾಲ್ಕರ್, ಸಾವರ್ಕರ್ ಪ್ರತಿಪಾದಿಸಿದ ಹಿಂಸೆಯ ಮೀಮಾಂಸೆ, ಇಂದು ದೇಶಕಂಟಕವಾಗಿ ಬೆಳೆದು ನಿಂತಿದೆ. ಹಿಂಸೆ, ಗಲಭೆ ಸಂಘಪರಿವಾರ ರಾಜಕಾರಣದ ಅವಿಭಾಜ್ಯ ಅಂಗ. ಹಿಂಸೆ ಮತ್ತು ಅನಾಗರಿಕತೆಯ ಮೂಲಕ ಸಾಂಸ್ಕೃತಿಕ ರಾಷ್ಟ್ರ ನಿರ್ಮಾಣದ ವಿಧ್ವಂಸಕಾರಿ ಪರಿಕಲ್ಪನೆಯಿದು.


ಹಿಂದೂರಾಷ್ಟ್ರ ಸಿದ್ಧಾಂತದ ಮೂಲದ್ರವ್ಯವಾದ, ಆರ್‌ಎಸ್‌ಎಸ್ ಎಂಬ ಮಾತೃ ಅಥವಾ ಪಿತೃ? ಸಂಸ್ಥೆಯ ಪರಿಧಿಯೊಳಗೆ ವಿಎಚ್‌ಪಿ (ವಿಶ್ವ ಹಿಂದೂ ಪರಿಷತ್), ಭಜರಂಗದಳ, ಬಿಜೆಪಿ, ಬಿಜೆಪಿ ಮಹಿಳಾ ಮೋರ್ಚಾ, ಬಿಜೆಪಿ ಯುವಮೋರ್ಚಾ, ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್, ಭಾರತೀಯ ಮಜದೂರ್ ಸಂಘ, ಭಾರತೀಯ ಕಿಸಾನ್ ಸಂಘ-ಹೀಗೆ ಹತ್ತು ಹಲವು ಸಂಘ-ಸಂಸ್ಥೆಗಳನ್ನೊಳಗೊಂಡ ವ್ಯಾಪಕ ಸಂಘಟನೆಯೇ ಇದೆ. ಸಂಘಪರಿವಾರದ ಗುಂಪಿನ ಅವಿಭಾಜ್ಯ ಅಂಗಗಳಾದ ವಿಎಚ್‌ಪಿ, ಭಜರಂಗದಳದಂತಹ ‘ಭಯೋತ್ಪಾದಕ,’ ಸಮಾಜಕಂಟಕ ಗುಂಪುಗಳಿಂದಾಗಿ ದೇಶದಲ್ಲಿ ಹಿಂಸೆ, ಗಲಭೆ, ಕೋಮುವಾದ ಮಿತಿಮೀರುತ್ತಲೇ ಇದೆ. ಒರಿಸ್ಸಾದಲ್ಲಿ ಇತ್ತೀಚೆಗೆ ನಡೆದ ಮತಾಂತರ ಸಂಬಂಧಿ ಗಲಭೆಯ ವಿಚಾರಕ್ಕೆ ಬರುವುದಾದರೆ, ಗಲಭೆಗೆ ಸ್ವಾಮಿ ಲಕ್ಷ್ಮಣಾನಂದ ಸರಸ್ವತಿಯ ಕೊಲೆಯ ಜೊತೆಗೆ ಬೇರೊಂದು ವೃತ್ತಾಂತವಿದೆ. 2008ರ ಆರಂಭದಲ್ಲಿ ಪರಿವಾರದವರು ಕ್ರೈಸ್ತರನ್ನು ‘ಮತಾಂತರ ಭಯೋತ್ಪಾದಕರು’ ಎಂದು ಕರೆದರು. ಪರಿವಾರಿಗಳು ಒರಿಸ್ಸಾದ ಫುಲ್‌ಬನಿ-ಕಂಧಮಾಲ್‌ನಲ್ಲಿ ವ್ಯಾಪಕವಾಗಿ ಮತಾಂತರ ನಡೆಯುತ್ತಿದೆ ಎಂಬ ಕಾರಣವೊಡ್ಡುತ್ತಾರಾದರೂ ವಾಸ್ತವಾಂಶ ಬೇರೆಯೇ ಇದೆ. ಕಂಧಮಾಲ್‌ನಲ್ಲಿ ಕ್ರೈಸ್ತರ ಒಟ್ಟು ಜನಸಂಖ್ಯೆ 1,17,950 ಇದ್ದರೆ ಹಿಂದೂಗಳ ಜನಸಂಖ್ಯೆ 5,27,757ರಷ್ಟಿದೆ. 2001ರ ಜನಗಣತಿಯ ಪ್ರಕಾರ ರಾಜ್ಯದ ಒಟ್ಟಾರೆ ಕ್ರೈಸ್ತರ ಜನಸಂಖ್ಯೆ ಕೇವಲ 2.4% ಮಾತ್ರ. ಆದರೂ ಕ್ರೈಸ್ತರನ್ನು ಬಹುಸಂಖ್ಯಾತ ಹಿಂದೂಗಳಿಗೆ ಕಂಟಕವೆಂದೂ, ಮುಸಲ್ಮಾನರನ್ನು ‘ಜೆಹಾದಿ’ಗಳೆಂದು ಬ್ರ್ಯಾಂಡ್ ಮಾಡಲಾಗುತ್ತದೆ. ಇದಕ್ಕೆ ಮೂಲಭೂತವಾದ ರಾಜಕಾರಣ ಬಿಟ್ಟು ಇನ್ನೇನು ಕಾರಣವಿರಲು ಸಾಧ್ಯ?

ಹಿಂದೂ ಸಂಘಟನೆಗಳು ಒರಿಸ್ಸಾದಲ್ಲಿ ‘ಮರುಮತಾಂತರ’ದ ತಂತ್ರಗಾರಿಕೆಯನ್ನು ಬಳಸುತ್ತಿವೆ. 2007ರಲ್ಲಿ ಸುಮಾರು 10,000 ಜನರನ್ನು ‘ಮರುಮತಾಂತರ’ಗೊಳಿಸುವಂತೆ ಈ ಸಂಘಟನೆಗಳು ಪಣ ತೊಟ್ಟಿದ್ದವು. ಇದಕ್ಕೆ 1967ರ ಒರಿಸ್ಸಾ ಧಾರ್ಮಿಕ ಸ್ವಾತಂತ್ರ್ಯ ಕಾಯ್ದೆಯ ಬೆಂಬಲ ಕೂಡ ಇದೆ. ಒಂದೆಡೆ ಕ್ರೈಸ್ತ ಧರ್ಮಕ್ಕೆ ಮತಾಂತರ ಹೊಂದುವವರನ್ನು ಹಿಂಸಿಸಲು ಕಾಯ್ದೆಯನ್ನು ಬಳಸಲಾಗುತ್ತಿದ್ದರೆ, ಇನ್ನೊಂದೆಡೆ ಹಿಂದುತ್ವ ಪ್ರತಿಪಾದಕರು (ಭಯೋತ್ಪಾದಕರು!?) ಕೈಗೊಳ್ಳುವ ‘ಮರುಮತಾಂತರ’ ಸಮಾರಂಭಗಳು ಇದೇ ಕಾಯ್ದೆಯಡಿ ‘ಘರ್ ವಾಪ್ಸಿ’ (ಮೂಲ ಧರ್ಮಕ್ಕೆ ಪುನರಾಗಮನ) ಎಂದು ಬಳಕೆಯಾಗುತ್ತಿರುವುದು ಕೂಡ ರಾಜಕಾರಣವೇ. 2003ರಲ್ಲಿಯೇ ಭಜರಂಗದಳದ ಅಂದಿನ ರಾಜ್ಯ ಸಂಚಾಲಕ ಸುಭಾಷ್ ಚೌಹಾನ್ “ಒರಿಸ್ಸಾ ಎರಡನೆಯ ಹಿಂದೂ ರಾಜ್ಯ (ಗುಜರಾತ್ ನಂತರ)ವಾಗಲಿದೆ” ಎಂದು ಹೇಳಿಕೆ ನೀಡಿದ್ದನ್ನು ಮರೆಯುವಂತಿಲ್ಲ.

ದೇಶಾದ್ಯಂತ ವಿವಿಧ ಭಾಗಗಳಲ್ಲಿ, ವಿಶೇಷವಾಗಿ ಕರ್ನಾಟಕದಲ್ಲಿ ಇನ್ನೂ ಅವ್ಯಾಹತವಾಗಿ ಚರ್ಚ್‌ಗಳ ಮೇಲೆ ದಾಳಿಗಳು ನಡೆಯುತ್ತಲೇ ಇವೆ. ದೇಶದ ನಾಲ್ಕು ರಾಜ್ಯಗಳ ಚುನಾವಣೆ ಮತ್ತು ಲೋಕಸಭಾ ಚುನಾವಣೆ ಹತ್ತಿರವಾಗುತ್ತಿದ್ದಂತೆ ಕೋಮುವಾದಿ ಗಲಭೆ, ಹಿಂಸೆ ಹೆಚ್ಚಾಗುತ್ತಿರುವುದು ಕಾಕತಾಳೀಯವಂತೂ ಖಂಡಿತ ಅಲ್ಲ. ಕೋಮುವಾದ ಸಂಘಪರಿವಾರದ ಜೀವಜಲ. ಅದನ್ನು ಹಿಂದುತ್ವ, ಹಿಂದೂರಾಷ್ಟ್ರ, ಸಾಂಸ್ಕೃತಿಕ ರಾಷ್ಟ್ರೀಯತೆ- ಹೀಗೆ ಹಲವಾರು ನೆಲೆಗಟ್ಟುಗಳಲ್ಲಿ ಪರಿವಾರದ ವಿವಿಧ ಮಾದರಿಯ ನಾಯಕರು, ವಿವಿಧ ವೇದಿಕೆಗಳಲ್ಲಿ ಪ್ರತಿಪಾದಿಸುತ್ತಲೇ ಬಂದಿದ್ದಾರೆ. ಚುನಾವಣಾ ಸಂದರ್ಭದಲ್ಲಿ ರಾಜಕೀಯ ಕಾರಣಗಳಿಗಾಗಿ ಇದರ ಬಳಕೆಯಾಗುತ್ತದೆ. ಒಂದು ವೇಳೆ ಪರಿವಾರದ ಪಕ್ಷ ಅಧಿಕಾರದಲ್ಲಿದ್ದರಂತೂ ಮುಗಿಯಿತು. ಈ ಭಜರಂಗದಳ, ವಿಎಚ್‌ಪಿ ಕಾರ್ಯಕರ್ತರಿಗೆ ಲಂಗುಲಗಾಮೇ ಇಲ್ಲದಂತಾಗುತ್ತದೆ. ಇದೇ ಧೈರ್ಯದಿಂದಲೇ ಕರ್ನಾಟಕದಲ್ಲಿ ಅಲ್ಪಸಂಖ್ಯಾತರ ಮೇಲೆ ದಾಳಿಗಳು ಹೆಚ್ಚುತ್ತಿರುವುದು. ಬಹುಶಃ ಕರ್ನಾಟಕವನ್ನು ಮೂರನೆಯ ಹಿಂದೂ ರಾಜ್ಯವನ್ನಾಗಿಸುವ ಯೋಜನೆಯ ಅನುಷ್ಠಾನದ ಮುಂದುವರೆದ ಭಾಗವಿದು.







...ಯೇ?
...ವಾಗಿದ್ದುಕೊಂಡೇ ಒಬ್ಬ ...ಲೈಫ್ ಪ್ರಾರ್ಥನೆಯಲ್ಲಿ ...ಗೊಂಡರೆ ಅದು ...ಮತಾಂತರ"ವೋ ಹಿಂದೂಗಳು ...ಕ್ರಿಸ್ತನನ್ನು ಮಹಾತ್ಮನೆಂದು ...ವುದು ಅಥವಾ ಬೈಬಲ್ ...ನ್ನು ಭಾಷಾಂತರಿಸುವುದು ಸಹ ...ತಾಂತರವೋ? ಮಂ. ...ವರ ಬೈಬಲ್ ಆಧರಿತ ...'ಗೊಲ್ಗಥಾ' ಖಂಡಕಾವ್ಯವನ್ನು ...ವುದೂ ಮತಾಂತರ ಎಂದು ...ಸಲಾಗುತ್ತದೋ? ಇವೇ ...ತಾದ ಪ್ರಶ್ನೆಗಳ ಬಗ್ಗೆ ಆದಷ್ಟು ...ಗ ಅಪ್ಪಣೆ ಕೊಡಿಸಬೇಕು. ...ಕೆಂದರೆ ಈ ವಿಷಯದಲ್ಲಿ ಅವರ ...ರಂಗಿ ಕಾಲಾಳುಗಳಿಗೆ ...ಗೊಂದಲವಿದೆ. ಮುಖ್ಯಮಂತ್ರಿ ...ಗೂ ಗೃಹಮಂತ್ರಿಗಳು ಮೇಲಿಂದ ...ಲೆ ಮೊನ್ನೆ ನಡೆದ ದಾಳಿಗಳಿಗೆ ...ಲೈಫ್ ಸಂಸ್ಥೆ ನಡೆಸಿದ ...ತಾಂತರವೇ ಕಾರಣ ಎಂದು ...ಪಾದಿಸಿದರೂ, ಈ ದಾಳಿಗಳಲ್ಲಿ ...ವು ಎರಡು ಮಾತ್ರ ನ್ಯೂಲೈಫ್ ...ರ್ಥನಾ ಮಂದಿರಗಳ ಮೇಲೆ ...ಡೆದಿರುವಂತಹವು. ಉಳಿದ ಎಲ್ಲ ...ಳಿಗಳೂ ಕ್ಯಾಥೋಲಿಕ್ ಮತ್ತು ...ಟೆಸ್ಟಂಟ್ ಪಂಥದ ಚರ್ಚು, ...ಪೆಲ್ಲುಗಳ ಮೇಲೆ ನಡೆದಿವೆ. ...ಂಗಳೂರಿನಲ್ಲಂತೂ ಭಜರಂಗಿಗಳು ...ಗರದ ಕೇಂದ್ರದಲ್ಲಿರುವ ಮಿಲಾಗ್ರೆಸ್ ...ರ್ಚ್ ಆವರಣಕ್ಕೆ ನುಗ್ಗಿ ಶಿಲುಬೆಯ ...ಲಿನ ಏಸುವಿನ ಕೈಕಾಲುಗಳನ್ನೇ ...ಡರಿಸಿದ್ದಾರೆ. ಶಿಲುಬೆ, ಯೇಸುವಿನ ...ಲೋಕಕಲ್ಯಾಣದ ಮಹಾನ್ ಸಂಕೇತ. ...ಗ ತುಂಡಾದ ಕೈಕಾಲುಗಳ ...ಯೇಸುವನ್ನು ಹೊತ್ತ ಮಿಲಾಗ್ರೆಸ್‌ನ ...ಲುಬೆ ಯಾವುದರ ...ಕೇತವಿರಬಹುದು? ಅಥವಾ ಇದೇ ...ಮ್ಮ ಕಾಲದಲ್ಲಿ ಯೇಸು ...ದೋರಬಹುದಾದ ಬಗೆಯೆ? ...ಲಾಗ್ರೆಸ್‌ನ ಭಗ್ನ ಯೇಸುವನ್ನು ...ಡು ಮುಖ್ಯಮಂತ್ರಿಯವರಿಗೆ ಏನು ...ನ್ನಿಸಿರಬಹುದು?

■ ಜಿ. ರಾಜಶೇಖರ

ಸಬಕೋ ಸನ್ಮತಿ ದೇ ಭಗವಾನ್

ಪ್ರಾರ್ಥನೆಯಲ್ಲಿ ತೊಡಗಿರುವವರ ಮೇಲೆ - ಅವರು ಯಾವ ದೇವರಲ್ಲಿ ಪ್ರಾರ್ಥಿಸುತ್ತಿದ್ದರೂ - ದಾಳಿ ಮಾಡುವುದು ಅನಾಗರಿಕ ಮಾತ್ರವಲ್ಲ, ಅಧಾರ್ಮಿಕ ಕೂಡ. ಆದರೆ ಧರ್ಮ ರಕ್ಷಣೆಯ ಹೆಸರಿನಲ್ಲೇ ಸಂಘಪರಿವಾರದ ಸಂಘಟನೆಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಾರ್ಥನೆಯಲ್ಲಿ ತೊಡಗಿರುವವರ ಮೇಲೆ ದಾಳಿ ನಡೆಸಿದ್ದಾರೆ. ಯಾವ ದೇವರನ್ನು ಪ್ರಾರ್ಥಿಸಿದರೂ ಅದು ಕೇಶವನನ್ನು ತಲುಪುತ್ತದೆ ಎಂದು ನಂಬುವ ಹಿಂದೂ ಆದವನು ಹೀಗೆ ವರ್ತಿಸುವುದು ಹೇಯವಾದ್ದು. ಇಂಥ ದಾಳಿಗಳು ಹಿಂದೂ ನಾಗರಿಕತೆಯನ್ನು ನಾಶಗೊಳಿಸುತ್ತಿವೆ.

ಕ್ರೈಸ್ತರು ಹೊಸಗನ್ನಡದ ಅಭಿವೃದ್ಧಿಗೆ ತಮ್ಮದೇ ಆದ ಕಾಣಿಕೆಗಳನ್ನು ನೀಡಿದ್ದಾರೆ. ರೆವರೆಂಡ್ ಫಾದರ್ ಫರ್ಡಿನಾಂಡ್ ಕಿಟೆಲ್ ಮೊದಲ ಕನ್ನಡ ನಿಘಂಟನ್ನು ರಚಿಸಿದವರು. ಕರ್ನಾಟಕದ ಅಭಿವೃದ್ಧಿಯಲ್ಲಿಯೂ ಕ್ರೈಸ್ತರ ಪಾತ್ರ ಅನನ್ಯ. ಸರಕಾರ ತಲುಪಲೂ ಆಗದಿರುವ ಅನೇಕ ಕಡೆಗಳಲ್ಲಿ ಅವರು ಈಗಲೂ ಶಾಲೆಗಳು ಮತ್ತು ಆಸ್ಪತ್ರೆಗಳನ್ನು ನಡೆಸುತ್ತಿದ್ದಾರೆ.

ಈಗ ಕರ್ನಾಟಕದಲ್ಲಿ ನಡೆಯುತ್ತಿರುವುದು ಅಧಿಕಾರದಲ್ಲಿರುವ ಸರಕಾರದ ಚುನಾವಣಾ ಸಿದ್ಧತೆಯ ಸಿನಿಕ ತಂತ್ರವಲ್ಲದೆ ಬೇರೇನೂ ಅಲ್ಲ. ನಮ್ಮ ಮುಖ್ಯಮಂತ್ರಿ ಅಧಿಕಾರಕ್ಕೆ ಬಂದ ತಕ್ಷಣ ಕರ್ನಾಟಕವನ್ನು ಇನ್ನೊಂದು ಗುಜರಾತ್ ಮಾಡುವುದಾಗಿ ಹೇಳಿದ್ದರು. ಅಂದರೆ ಅವರಿಗೆ ಗುಜರಾತ್‌ನ ನರೇಂದ್ರ ಮೋದಿಯೇ ಆದರ್ಶ. ನಾನು ಹುಟ್ಟಿ ಬೆಳೆದ ಜಿಲ್ಲೆಯವರೇ ಆಗಿರುವ ರೈತ ನಾಯಕ ಬಿ.ಎಸ್ ಯಡಿಯೂರಪ್ಪ ಈಗ ಕರ್ನಾಟಕದ ಮೋದಿಯಾಗಲು ಹೊರಟಿದ್ದಾರೆ! ಕುವೆಂಪು, ಶಾಂತವೇರಿಯಂತಹವರನ್ನು ಪಡೆದ ಜಿಲ್ಲೆಯಲ್ಲಿ ಬೆಳೆದ ನಮ್ಮ ಯಡ್ಯೂರಪ್ಪನವರು ಹೀಗಾಗಿರುವುದು ಒಂದು ದುರಂತ.

ಮಂಗಳೂರು ಮತ್ತು ಉಡುಪಿಯಲ್ಲಿ ಅಲ್ಪಸಂಖ್ಯಾತ ಕ್ರೈಸ್ತರ ಮತಗಳು ತಮಗೆ ದೊರೆಯುವುದಿಲ್ಲ ಎಂಬುದು ಬಿಜೆಪಿಗೆ ತಿಳಿದಿದೆ. ಇದೇ ಕಾರಣಕ್ಕೆ ಅದು ಕ್ರೈಸ್ತರ ಮೇಲಿನ ದಾಳಿಗಳ ಕುರಿತು ಕಣ್ಣುಮುಚ್ಚಿಕೊಂಡಿದೆ. ಈ ದಾಳಿಗಳು ತಮ್ಮ ಹಿಂದೂಮತ ಬ್ಯಾಂಕನ್ನು ಇನ್ನಷ್ಟು ಖಚಿತಪಡಿಸುತ್ತದೆಂದು ಸರಕಾರ ನಡೆಸುವವರೂ ಭಾವಿಸುವುದು ಸಿನಿಕತನದ ಪರಮಾವಧಿ.

ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಬೇಕಾದ ಸರಕಾರವು ಚರ್ಚ್‌ಗಳು ಮತ್ತು ಪ್ರಾರ್ಥನಾ ಮಂದಿರಗಳ ಮೇಲೆ ನಡೆದ ದಾಳಿಯನ್ನು 'ಬಲವಂತದ ಮತಾಂತರ' ಎಂಬ ವಾದವನ್ನು ಬಳಸಿಕೊಂಡು ಸಮರ್ಥಿಸುವುದು ಬೇಜವಾಬ್ದಾರಿಯ ದ್ಯೋತಕ.

ಕ್ರೈಸ್ತ ಧರ್ಮಕ್ಕೆ ಮತಾಂತರಗೊಳ್ಳುತ್ತಿರುವವರು ಯಾರು? ಕೆಳಜಾತಿಗಳಿಂದ ಬಂದವರು; ತಮ್ಮ ಜಾತಿ ಯಾವುದೆಂದು ಹೇಳಿಕೊಳ್ಳಲೇ ನಾಚಿಕೊಳ್ಳುವವರು. ಇದಕ್ಕೆ ಕಾರಣರಾದವರು ಹಿಂದೂಗಳಾದ ನಾವೇ ಅಲ್ಲವೇ? ಕ್ರೈಸ್ತ ಧರ್ಮ ಅವರಿಗೊಂದು ಗೌರವಯುತ ಅನನ್ಯತೆಯನ್ನು ನೀಡುತ್ತದೆ. ಉದ್ಯೋಗ ಹಾಗೂ ಶಿಕ್ಷಣದ ಭರವಸೆಯೂ ಅವರನ್ನೂ ಇದರತ್ತ ಆಕರ್ಷಿಸಿರಬಹುದು. ಧರ್ಮದ ಪರಿವರ್ತನೆ ಹೃದಯದ ಪರಿವರ್ತನೆಯೂ ಆಗಿರಬೇಕೆಂಬುದು ಕ್ರೈಸ್ತರಿಗೆ ತಿಳಿದಿದೆ. ಕೇವಲ ಲೌಕಿಕ ಕಾರಣಕ್ಕಾಗಿ ಮತಪರಿವರ್ತನೆಯನ್ನು ಮಾಡುವುದು ತಮ್ಮ ಧರ್ಮಕ್ಕೇ ಅಪಚಾರವೆಸಗಿದಂತೆ ಎಂಬುದು ಮದರ್ ಥೆರೇಸಾರಂತಹ ಮಹಾತಾಯಿಗೂ ಗೊತ್ತಿತ್ತು.

ಕೆಳಜಾತಿಯಲ್ಲಿ ಹುಟ್ಟಿದ್ದ ಕೇರಳದ ನಾರಾಯಣ ಗುರು ಜಾತೀಯತೆಯಿಂದ ನಾಶದತ್ತ ಸಾಗುತ್ತಿದ್ದ ಹಿಂದೂ ಸಮಾಜವನ್ನು ಸುಧಾರಣೆಗೆ ಒಳಪಡಿಸಿದರು. ಅಂಥವರು ಈಗಲೂ ಇದ್ದಿದ್ದರೆ ಕೆಳಜಾತಿಯ ಹಿಂದೂಗಳು ಕ್ರೈಸ್ತ ಧರ್ಮಕ್ಕೆ ಮತಾಂತರವಾಗಬೇಕಾದ ಪರಿಸ್ಥಿತಿಯೇ ಉದ್ಭವಿಸುತ್ತಿರಲಿಲ್ಲ. ನಾರಾಯಣ ಗುರುಗಳು ಒಬ್ಬ ಅದ್ವೈತಿ; ಬಹುಶಃ ತಾತ್ವಿಕವಾಗಿ ಅದ್ವೈತದಲ್ಲಿ ನಂಬಿದ್ದ ಆದಿ ಶಂಕರಾಚಾರ್ಯರ ನಂತರದಲ್ಲಿ ವಾಸ್ತವದಲ್ಲೂ ಮಹಾ ಅದ್ವೈತಿಯಾಗಿದ್ದವರೆಂದರೆ ಇವರೇ ಇರಬೇಕು.

ಆಡಳಿತಾರೂಢ ಬಿಜೆಪಿ ಸರಕಾರದ ಅಧೀನದಲ್ಲಿರುವ ಪೊಲೀಸರು ಈಗ ನಡೆಯುತ್ತಿರುವ ದಾಳಿಗಳ ಬಗ್ಗೆ ಕುರುಡಾಗಿದ್ದಾರೆ. ಪೊಲೀಸರು ಈ ದಾಳಿಗಳನ್ನು ನೇರವಾಗಿ ಬೆಂಬಲಿಸದೇ ಇದ್ದರೂ ದಾಳಿ ನಡೆಸುವವರು ಮತ್ತು ಪೊಲೀಸರ ಮಧ್ಯೆ ಅನೈತಿಕ ಒಪ್ಪಂದವೊಂದಿರುವಂತೆ ಕಾಣಿಸುತ್ತದೆ. ಗುಜರಾತ್‌ನ ಹಿಂಸೆಯ ನಾಟಕ ಇಲ್ಲಿ ಮರುಪ್ರದರ್ಶನಗೊಳ್ಳುತ್ತಿದೆ.

ಹಿಂದೂ ಮತಾಚರಣೆಗಳನ್ನು ಕಟುವಾಗಿ, ನಿಷ್ಠುರವಾಗಿ ಟೀಕಿಸಲು ಹಿಂಜರಿಯದ ವೀರಶೈವ ವಚನಕಾರರನ್ನೂ, ವೈಷ್ಣವ ದಾಸರನ್ನೂ, ಈ ಎಲ್ಲರಿಗೂ ಹಿಂದೆ ಬುದ್ಧಗುರುವನ್ನೂ, ನಮ್ಮ ಕಾಲದಲ್ಲೇ ಕುವೆಂಪು, ರವೀಂದ್ರನಾಥ ಠಾಕೂರರನ್ನೂ, ಶಿವರಾಮ ಕಾರಂತರನ್ನೂ ಪಡೆದ ನಾವು ಸಂಘಪರಿವಾರದವರ ನಂಜಿನ ಹಿಂದೂ ಕಲ್ಪನೆಯಿಂದ ತಲೆತಗ್ಗಿಸಬೇಕಾಗಿದೆ.

ನೂರು ದೇವರನೆಲ್ಲ ನೂಕಾಚೆ ದೂರ
ಭಾರತಾಂಬೆಯೇ ದೇವಿ ನಮಗಿಂದು
ಪೂಜಿಸುವ ಬಾರಾ
ಶತಮಾನಗಳು ಬರಿಯ ಜಡಶಿಲೆಯ ಪೂಜಿಸಾಯ್ತು,
ಹಾವ್ಗಳಿಗೆ ಹಾಲೆರೆದು ಪೋಷಿಸಾಯ್ತು,
ಬಿಸಿಲು ಮಳೆಗಾಳಿ ಬೆಂಕಿಯನೆಲ್ಲ ಬೇಡಿಯಾಯ್ತು,
ದಾಸರನು ಪೂಜಿಸಿಯೇ ದಾಸ್ಯವಾಯ್ತು.

ಈ ಮಾತು ಕುವೆಂಪುರವರದು; ಯಾವ ಹಿಂದೂ ದ್ವೇಷಿ ಪಾದ್ರಿಯದೂ ಅಲ್ಲ.

ವೇದವೆಂಬುದು ಓದಿನ ಮಾತು
ಶಾಸ್ತ್ರವೆಂಬುದು ಸಂತೆಯ ಸುದ್ದಿ
ಪುರಾಣವೆಂಬುದು ಪುಂಡರ ಗೋಷ್ಠಿ,
ತರ್ಕವೆಂಬುದು ತಗರ ಹೋರಟೆ
ಬಕುತಿ ಎಂಬುದು ತೋರುಂಬ ಲಾಭ.
ಗುಹೇಶ್ವರನೆಂಬುದು ಮೀರಿದ ಘನವು

ಇದು ನಮ್ಮ ಅಲ್ಲಮನ ಮಾತು; ಯಾವ ಮುಸ್ಲಿಮ್ ಮೌಲ್ವಿಯದೂ ಅಲ್ಲ.

ನಮ್ಮ ಬಿಜೆಪಿ ಆಡಳಿತದಲ್ಲಿ ಇವೆಲ್ಲವೂ ಕಾನೂನುಬಾಹಿರ. ಕುವೆಂಪು ಮತ್ತು ಅಲ್ಲಮ ಶಿಕ್ಷಾರ್ಹರು. ಯಾಕೆಂದರೆ ಅವರು ನಾವು ನಂಬುವ ದೇವರನ್ನು ಹೀಗಳೆದಿದ್ದಾರೆ.

ನಾರಾಯಣಗುರು ನಮ್ಮ ನಾಲ್ಕು ವೇದಗಳ ಕಲ್ಪನೆಯನ್ನೇ ಬದಲಾಯಿಸಿಕೊಳ್ಳಬೇಕೆಂದು ಅಭಿಪ್ರಾಯ ಪಟ್ಟಿದ್ದರು. ಅವರು ಹೇಳುವಂತೆ ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದಗಳೆಂಬವು ಅವುಗಳ ಕಾಲಕ್ಕೆ ನಾಲ್ಕು ವೇದಗಳಾಗಿದ್ದವು. ಈಗ ಅರಿವು ವಿಸ್ತರಿಸಿದೆ. ಈ ನಾಲ್ಕು ವೇದಗಳನ್ನು ಒಂದು ವೇದವಾಗಿಯೂ ಬೈಬಲ್, ಕುರಾನ್ ಹಾಗೂ ಬೌದ್ಧ ಗ್ರಂಥಗಳನ್ನು ಇನ್ನುಳಿದ ಮೂರು ವೇದಗಳನ್ನಾಗಿಯೂ ಪರಿಗಣಿಸಬೇಕು.

ಯಾವ ಕ್ರೈಸ್ತ ಪಾದ್ರಿಯೂ ನಮ್ಮ ಭಾರತೀಯ ಸಂತ ಪರಂಪರೆ, ಸಾಹಿತ್ಯ ಪರಂಪರೆ ಟೀಕಿಸಿದಷ್ಟು ಕಟುವಾಗಿ, ಆಳವಾಗಿ ಹಿಂದೂ ಆಚರಣೆಗಳನ್ನು ಟೀಕಿಸಲಾರರು. ಸತತ ವಿಮರ್ಶೆಯ ಅಗ್ನಿದಿವ್ಯದಲ್ಲಿ ತನ್ನ ಚೈತನ್ಯವನ್ನು ಜೀವಂತಗೊಳಿಸಿಕೊಳ್ಳುವ ನಮ್ಮ ಹಿಂದೂ ನಾಗರಿಕತೆಯನ್ನು, ಕಾಪಾಡುವ ನೆಪದಲ್ಲಿ ಸಂಘಪರಿವಾರದವರು ನಾಶಮಾಡುತ್ತ ಇದ್ದಾರೆ. (ಒಂದು ಕಥೆಯಿದೆ: ವಿವೇಕಾನಂದರು ಕಾಶ್ಮೀರದಲ್ಲಿ ದೇವಿಯ ಎದುರು ನಿಂತು ಹಲಬುತ್ತಾರೆ: ತಾಯಿ, ನಿನ್ನನ್ನು ನಾನು ಕಾಪಾಡಲಾರದೇ ಹೋದೆನಲ್ಲ! ಆಗ ದೇವಿ ಹೀಗೆ ಉತ್ತರಿಸುತ್ತಾಳೆ: ನೀನು ನನ್ನನ್ನು ಕಾಪಾಡುವುದೊ? ಅಥವಾ ನಾನು ನಿನ್ನನ್ನು ಕಾಪಾಡಬೇಕಾದವಳೊ?)

ದೇವರ ಅಗತ್ಯವನ್ನೇ ದಾಟಬಿಡಲು ಹವಣಿಸುವ ಆಧ್ಯಾತ್ಮಿಕ ಅನುಭಾವದ ಈ ನಾಡಿನ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಬಿಜೆಪಿಯ ರಾಜಕಾರಣದ ಕ್ಷುದ್ರತೆಯನ್ನು ಅಲ್ಪತೆಯನ್ನು ನಾವೆಲ್ಲರೂ ಗಾಂಧೀಜಿ ತೋರಿದ ದಾರಿಯಲ್ಲಿ ನಡೆದು ತೊರೆಯಬೇಕು. ಯಾಕೆಂದರೆ ಸಂಘಪರಿವಾರ ಬಿತ್ತಲು ಯತ್ನಿಸುವ ವಿಷದ ಬೀಜ ನಮ್ಮಲ್ಲಿ ಹಲವರಲ್ಲಿ ಗುಪ್ತವಾದ ಭಾವನೆಯಾಗಿರಬಹುದು ಎಂಬ ಅನುಮಾನ ನನಗೆ ಇದೆ. ಕ್ರೈಸ್ತ ಧರ್ಮ, ಹಾಗೂ ಇಸ್ಲಾಂ ಧರ್ಮ ನಮ್ಮ ಭಾರತವನ್ನು ಶ್ರೀಮಂತಗೊಳಿಸಿ, ನಮ್ಮ ಮಾನವೀಯ ಅನುಕಂಪವನ್ನು ವಿಶಾಲಗೊಳಿಸಿವೆ ಎಂದೇ ಹಿಂದೂಗಳಾದ ನಾವೆಲ್ಲರೂ ಕೃತಜ್ಞತೆಯಲ್ಲಿ ತಿಳಿಯಬೇಕು. ತಾವು ನಂಬುವ ದೇವರಲ್ಲಿ ಗಾಂಧಿಯಂತೆ ಎಲ್ಲರೂ ಪ್ರಾರ್ಥಿಸಬೇಕು: ಸಬಕೋ ಸನ್ಮತಿ ದೇ ಭಗವಾನ್.

ಎಲ್ಲ ಬಗೆಯ ಭಯೋತ್ಪಾದಕತೆಯನ್ನು, ಅದು ಇಸ್ಲಾಮ್ ಹೆಸರಿನಲ್ಲಿ ಇರಬಹುದು, ಹಿಂದೂ ಸಂಘಟನೆಯ ಹೆಸರಿನಲ್ಲಿ ಇರಬಹುದು, ನಾವು ಈ ನೆಲದಿಂದ ಉಚ್ಚಾಟಿಸಬೇಕು. ಯಾಕೆಂದರೆ ಈ ಟೆರರಿಸಂ ಧರ್ಮ ವಿರೋಧಿ; ಜೀವ ವಿರೋಧಿ. ಅಭಯದಲ್ಲಿ ನಾವೆಲ್ಲರೂ ಬದುಕಬೇಕೆಂಬುದು ನಮ್ಮ ಉಪನಿಷತ್ತಿನ ಪ್ರಾರ್ಥನೆ.

■ ಯು. ಆರ್. ಅನಂತಮೂರ್ತಿ

ಇಂತಹ ಹಿಂದೂ ಭಯೋತ್ಪಾದಕ ಸಂಘಟನೆಗಳನ್ನು ಹದ್ದುಬಸ್ತಿನಲ್ಲಿಡಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಯಾಕೆ ಆಸಕ್ತಿ ವಹಿಸುತ್ತಿಲ್ಲ? ಹಿಂದುತ್ವ- ಪಕ್ಷ ಒಮ್ಮೆ, ಸಾಫ್ಟ್- ಹಿಂದುತ್ವ ಪಕ್ಷ ಮತ್ತೊಮ್ಮೆ ಅಧಿಕಾರಕ್ಕೆ ಬಂದರೆ ಇನ್ನೆಲ್ಲಿಯ ಹತೋಟಿ ಸಾಧ್ಯ? ಉದಾಹರಣೆಗೆ ವಿಎಚ್‌ಪಿ ಸಾಂಸ್ಕೃತಿಕ ಸಂಸ್ಥೆಯೆಂದು ನೋಂದಣಿಯಾಗಿದ್ದರೂ ಮಾಡುವ ಕೆಲಸಗಳೆಲ್ಲವೂ ರಾಜಕೀಯ ಪ್ರೇರಿತವೇ. ಸಮಾಜದ ಸಂಕುಚಿತ ಹಿಂದೂಗಳ ಬೆಂಬಲ, ವೋಟ್‌ಬ್ಯಾಂಕ್‌ಗಾಗಿ ದೇಶದ ಸಾಂತಿಯನ್ನೇ ಪಣಕ್ಕಿಡುವ ರಾಜಕಾರಣಿಗಳ ಬೆಂಬಲ, ಸರ್ವರಿಗೂ ಸಮಾನವಾಗಿರಬೇಕಾಗಿದ್ದ ಕಾನೂನು ಕಟ್ಟಳೆಗಳ ಬೆಂಬಲ, ಸಮಾಜದಲ್ಲಿ ಪ್ರತಿಷ್ಠಿತ ಮತ್ತು ಜವಾಬ್ದಾರಿಯುತ ಸ್ಥಾನಗಳಲ್ಲಿರುವ 'ಧರ್ಮಾಧಿಕಾರಿಗಳು,' ಉದ್ಯಮಿಗಳು, ಅಧಿಕಾರಿಗಳು, ಪೊಲೀಸ್ ಅಧಿಕಾರಿಗಳು -ಹೀಗೆ ಒಟ್ಟಾರೆ ಸಮಾಜದ ಪರೋಕ್ಷ ಬೆಂಬಲದಿಂದಾಗಿ ಇಂತಹ ಮೂಲಭೂತವಾದಿ ಹಿಂದೂ ಸಂಘಟನೆಗಳಿಗೆ ಅಡೆತಡೆಗಳೇ ಇಲ್ಲದಂತಾಗಿದೆ. ಮಂಗಳೂರು, ಉಡುಪಿ, ಚಿಕ್ಕಮಗಳೂರು, [illegible]- ಹೀಗೆ ಕರ್ನಾಟಕದ ವಿವಿಧೆಡೆಗಳಲ್ಲಿ ವ್ಯವಸ್ಥಿತವಾಗಿ ಚರ್ಚ್‌ಗಳ ಮೇಲೆ, ಅಲ್ಪಸಂಖ್ಯಾತರ ಮೇಲೆ ಬಹಳ ಸಲೀಸಾಗಿ ದಾಳಿಗಳನ್ನು, ಕೈಗೊಳ್ಳಲಾಗುತ್ತಿದೆ. ಸರ್ಕಾರದ [illegible] ಕೂಡ ಅಲ್ಪಸಂಖ್ಯಾತರ ರಕ್ಷಣೆಯ ಕಾಳಜಿಯಿಲ್ಲದೆ [illegible] ಹೇಳಿಕೆಗಳನ್ನು ನೀಡುತ್ತಾ ಬಂದಿದ್ದಾರೆ. [illegible] [illegible] ಬಿಡಲಿ [illegible] ಸೃಷ್ಟಿ ಮಾಡುತ್ತಿರುವುದು [illegible] [illegible].

ಹಲವಾರು ನೆಲೆಗಟ್ಟುಗಳಲ್ಲಿ ಕೆಲಸ ಮಾಡುವ ಈ ಸಂಘಪರಿವಾರ ಎಲ್ಲ ಸ್ತರಗಳಲ್ಲಿಯೂ ಬೇರುಬಿಟ್ಟಿದೆ. ರಾಜಕಾರಣ, ಉದ್ಯಮ, ಮಾಧ್ಯಮ ಜಗತ್ತು, ಪತ್ರಿಕೋದ್ಯಮ, ಪೊಲೀಸ್ ವ್ಯವಸ್ಥೆ, ಜ್ಞಾನಾರ್ಜನೆಯ ಕೇಂದ್ರಗಳು, ಹೀಗೆ ಎಲ್ಲ ರಂಗಗಳಲ್ಲಿಯೂ ಸ್ವಯಂಪ್ರೇರಿತ ಕಾರ್ಯಕರ್ತರನ್ನು, ವಕ್ತಾರರನ್ನು ಸೃಷ್ಟಿಸಿಕೊಂಡಿರುವ ಸಂಘಪರಿವಾರ ಇಂದು ದೇಶದ ಸಹಬಾಳ್ವೆಗೆ, ಶಾಂತಿಗೆ ತೀವ್ರ ಆಘಾತವನ್ನುಂಟು ಮಾಡುವ ಮಟ್ಟಕ್ಕೆ ಬೆಳೆದು ನಿಂತಿದೆ.

ಉದಾಹರಣೆಗೆ ಕೆಲವು ಜನಪ್ರಿಯ ಪತ್ರಕರ್ತ/ ಬರಹಗಾರರನ್ನು ನೋಡಿ. ಇವರಿಗೆ ಕೋಮುವಾದವೇ ಬಂಡವಾಳ. ಇಂತಹ ಬರಹಗಾರರೊಬ್ಬರ ವಿಚಾರಧಾರೆಯನ್ನು ಇಲ್ಲಿ ಗಮನಿಸಿ: "ನಮಗೆ ಬೇಕಿರುವುದು ಪಿಳ್ಳಂಗೋವಿ ಕೃಷ್ಣನಲ್ಲ, ಅಗತ್ಯ ಬಂದಾಗ ಸ್ವಂತ ಮಾವ ಕಂಸನನ್ನೂ ಕೊಂದ ಕೃಷ್ಣ" "... ಹರೇ ಕೃಷ್ಣ ಹರೇ ರಾಮ ಅಂತ ಕುಳಿತು ಕೊಂಡಿದ್ದರೆ ಭರತಖಂಡ ಉಳಿಯುವುದಿಲ್ಲ, ಇವತ್ತು ನಮಗೆ ಬೇಕಾಗಿರುವುದು 'ಸ್ತ್ರೀಸ್ವರೂಪಿ ಹಿಂದೂಯಿಸಂ' ಅಲ್ಲ, ರಾಣಾ ಪ್ರತಾಪ್, ಶಿವಾಜಿ ಮಹಾರಾಜ, ಗುರು ಗೋವಿಂದ ಸಿಂಗ್, ರಂಜಿತ್ ಸಿಂಗ್ ಅನುಸರಿಸಿದ, ಸ್ವಾಮಿ ವಿವೇಕಾನಂದರು ಹೇಳಿದ "ಮ್ಯಾಸ್ಕುಲಿನ್ ಹಿಂದೂಯಿಸಂ." ಸಂಕುಚಿತವಾದ ಚಿಂತನೆಗೆ ಇದಕ್ಕಿಂತ ಬೇರೆ ನಿದರ್ಶನ ಬೇಕಿಲ್ಲ. ದುರದೃಷ್ಟವಶಾತ್ ಇಂತಹವರು ಮತ್ತು ಇಂತಹ ತಿಳಿಗೇಡಿಗಳನ್ನು ಮುಗ್ಧವಾಗಿ ನಂಬುವ ಯುವಪೀಳಿಗೆಯ ಪ್ರಮಾಣ ಹೆಚ್ಚಾಗುತ್ತಿರುವುದು ನಿಜಕ್ಕೂ ಅತ್ಯಂತ ಅಪಾಯಕಾರಿ ಬೆಳವಣಿಗೆ. ಪತ್ರಿಕೆಯ ಪುಟಗಳಲ್ಲಿ ಈ ರೀತಿಯ ಪ್ರಚೋದನಾಕಾರಿ ಬರಹಗಳನ್ನು ಬರೆದು ಸಮಾಜದ ಶಾಂತಿ ಕದಡುವ ಇಂತಹವರು ಪತ್ರಕರ್ತರೆಂದು ಕರೆಸಿಕೊಳ್ಳುವುದಕ್ಕೆ ಲಾಯಕ್ಕೇ? ಜೈಲುಕಂಬಿಗಳ ಹಿಂದೆ ಇರಬೇಕಾದ ಇಂತಹ ಬರಹಗಾರರೆಲ್ಲಾ ಈಗಲೂ ಮುಕ್ತವಾಗಿ ಬರೆದುಕೊಂಡಿರುವುದು ಕೂಡ ಪರಿವಾರದ ಶಕ್ತಿಯಿಂದಲೇ.

ಒಂದೆಡೆ 'ಗುಜರಾತ್ ಅಸ್ಮಿತೆ' ಎಂದು ಬೊಗಳೆ ಬಿಡುವ ನಾಯಕರು, ಇನ್ನೊಂದೆಡೆ ರೈತಪರ ಕಾಳಜಿಗಳನ್ನು ಗಾಳಿಗೆ ತೂರಿಬಿಟ್ಟು 'ಗುಜರಾತ್ ಮಾದರಿ'ಯನ್ನು ಆದರ್ಶವಾಗಿರಿಸಿಕೊಂಡ ಡೊಂಕುಬಾಲದ ನಾಯಕರು. ಮತ್ತಿವರಿಗೆ ಜೈಕಾರ ಹಾಕಲು, ಆ ಮೂಲಕ ತಂತಮ್ಮ ವೈಯಕ್ತಿಕ ಹಿತಾಸಕ್ತಿ ಕಾಯ್ದುಕೊಳ್ಳಲು, 'ವಾಕ್ಪಥ'ದಲ್ಲಿ ಇಂತಹ ನಾಯಕರಿಗೆ ಪ್ರಚಾರ ನೀಡಲು, ತುದಿಗಾಲಲ್ಲಿ ನಿಂತಿರುವ ಪರಿವಾರದ ಪತ್ರಕರ್ತರು. ಇವರ ಸಂಖ್ಯೆಯೇನು ಕಡಿಮೆಯಿದೆಯೇ? ಇಂತಹ ಸಂಕುಚಿತ ಮನೋಧರ್ಮದ ಜನರನ್ನು ಒಬ್ಬ ಮನುಷ್ಯನ ಸಾವು ಕೂಡ ಅಲುಗಾಡಿಸುವುದಿಲ್ಲ, ಯಾಕೆ? ಸತ್ತವ ಹಿಂದೂ ಅಲ್ಲ ಮುಸ್ಲಿಂ ಅಥವಾ ಕ್ರೈಸ್ತನಲ್ಲವೇ? ಇಂತಹವರು ವಿಚಿತ್ರ ತರ್ಕ, ವಿತಂಡವಾದವನ್ನು ಹೇಗೆಲ್ಲಾ ಸಾಧ್ಯವೋ ಹಾಗೆಲ್ಲಾ ಬಳಸುತ್ತಾರೆ. "ಮಹಾತ್ಮ ಗಾಂಧೀಜಿ ಕೂಡ ಹೇಡಿತನದ ಬದಲು ಹಿಂಸೆಯನ್ನು ಒಪ್ಪುತ್ತಾರೆ" ಎಂದು ತಮ್ಮ ಕೆಟ್ಟ ವಾದಕ್ಕೆ ಗಾಂಧೀಜಿಯವರ ಯಾವುದೋ ಹೇಳಿಕೆಯನ್ನು ಅವರ ಮೂಲ ಆಶಯಕ್ಕೆ ವಿರುದ್ಧವಾಗಿ ಬಳಸುತ್ತಾರೆ. ಒಬ್ಬ ವ್ಯಕ್ತಿಯ ಯಾವುದೋ ಒಂದು ಸಾಂಧರ್ಭಿಕ ಹೇಳಿಕೆ, ಒಟ್ಟಾರೆ ಆತನ ಜೀವನಧರ್ಮವನ್ನು, ಆಶಯವನ್ನು ತಲೆಕೆಳಗು ಮಾಡಲು ಸಾಧ್ಯವೇ? ಸಂಘಪರಿವಾರದ ಚತುರರಿಗೆ ಎಲ್ಲವೂ ಸಾಧ್ಯ

ಚಡ್ಡಿ ತೊಟ್ಟು, ಹಣೆಗೆ ಕೇಸರಿ ಪಟ್ಟಿ ಧರಿಸಿ, ಕೆಂಪು ತಿಲಕವಿಟ್ಟು, ತ್ರಿಶೂಲ-ಲಾಠಿಧಾರಿಗಳಾಗಿ, ಪೆಟ್ರೋಲ್ ಬಾಂಬ್‌ಗಳಿಂದ ಅಲ್ಪಸಂಖ್ಯಾತರ ಮೇಲೆ ದೌರ್ಜನ್ಯವೆಸಗುವವರಿಗಿಂತ, ಕಾಣದ ಚಡ್ಡಿ ತೊಟ್ಟ, ಕೊಲೆಗಡುಕ ಮನಸ್ಸಿನ ಇಂತಹ 'ಮುದ್ದುಮುಖದ ಬರಹಗಾರರು' ಸಾವಿರಪಾಲು ಅಪಾಯಕಾರಿ. ಶತಮಾನಗಳಿಂದ ಇವರು ಮಾಡುತ್ತಾ ಬಂದಿರುವುದು ಇದನ್ನೇ. ಈಗ ಮಾಡುತ್ತಿರುವುದೂ ಅದನ್ನೇ. ಹಿಂದಿನ ಮನು, ಕೌಟಿಲ್ಯ ಇತ್ಯಾದಿಗಳು ಮತ್ತು ಇಂದಿನ ಅಭಿನವ ಮನು, ಕೌಟಿಲ್ಯರು ಸಮಾಜದ ಯಾವುದೋ ಒಂದು ಸಮುದಾಯ ಅಥವಾ ಗುಂಪಿನ ವಿರುದ್ಧ ಹಿಂಸೆಗೆ ಪ್ರೇರಣೆ ನೀಡುವುದು, ಗಲಭೆಯೆಬ್ಬಿಸುವುದು, ತನ್ಮೂಲಕ ತಮ್ಮ ಕ್ಷುದ್ರ ವಿಚಾರಗಳನ್ನು ಕಾರ್ಯರೂಪಕ್ಕೆ ತರುವುದು ಅವಿರತವಾಗಿ ನಡೆಯುತ್ತಲೇ ಬಂದಿದೆ. ಆದರೆ ನಿಜವಾಗಿ ಹಿಂಸೆಯಲ್ಲಿ ತೊಡಗುವವರು, ಸಾಯುವವರು ಬಹುತೇಕ ಅಲ್ಪಸಂಖ್ಯಾತರು, ಹಿಂದುಳಿದವರು, ಆದಿವಾಸಿಗಳು ಅಥವಾ ದಲಿತರೇ ಆಗಿರುತ್ತಾರೆ. ಈ ಸರಳ ಸತ್ಯವನ್ನು ಅರಿತುಕೊಳ್ಳಲು [illegible] ಸಾಧ್ಯವಾಗುತ್ತಿಲ್ಲ?

■ ಸತ್ಯಪ್ರಕಾಶ್ ಎಂ. ಆರ್

ಕುವೆಂಪು ವಿಶ್ವವಿದ್ಯಾನಿಲಯ, ಶಿವಮೊಗ್ಗ

ಮತಾಂತ್ರ ವಾಸ್ಕೊಡಿಗಾಮ ಬಂದಾಗ್ಲಿಂದ ನ್ಯಡಿತಾ ಅದೆ ಕಣೊ

ಮುಂದಿನ ಮಾರ್ನವಮಿ ಬಗ್ಗೆ ಆಲೋಚಿಸುತ್ತ ಕುಳಿತಿದ್ದ ಕಾಳಮಾವನಿಗೆ ಕಿರಿಕಿರಿಯಾಗುವ್ವಂತೆ ಸೀರ ತರಟುತ್ತಲೇಯಿದ್ದ.

"ಮಂಗಳೂರು ಕಡೆ ಭಾರಿ ಗಲಾಟ ನ್ಯಡದದಂತೆ. ಕಿರುಸ್ತಾನು ಪಾರಿನ್ನಿಂದ ದುಡ್ನು ತಂದು ಹಂಚಿ ನಮ್ಮೂರ ನ್ನಲ್ಲ ಹಿಡುದು ಕಿರುಸ್ತಾನು ಮಾಡ್ತಯಿದ್ದರಂತೆ ಕಣಣ್ಣ" ಎಂದು ಕಾಳಮಾವನ ಮುಖ ನೋಡಿದ. ಆತ ಉತ್ತರಿಸಲಿಲ್ಲ. ಆಗ ಉಗ್ರಿ,

ಬಂಡಾಯ ಸೀಮೆಯ ಕಟ್ಟೆಪುರಾಣ

ಬಿ. ಚಂದ್ರೇಗೌಡ

"ಮಂಗಳೂರಲ್ಲಿ ನಿಮ್ಮೋರೆಲ್ಲಿದ್ದರೊ?" ಎಂದ.

"ನಮ್ಮೋರು ಅಂದ್ರೆ ಹಿಂದೂಗಳು ಕಂಡ್ಯ."

"ಅಂಗರೆ ನೀನು ಹಿಂದೂನೆ?" ಎಂದು ಉಗ್ರಿ ಕೆಣಕಿದ್ದಕ್ಕೆ ಗೊಂದಲಕ್ಕೆ ಬಿದ್ದ ಸೀರ, ತಾನು ಹಿಂದೂ ಎಂದಾದರೆ ಒಕ್ಕಲಿಗನಲ್ಲ ಎಂದಂತಾಗಬಹುದೆಂದು,

"ಹಿಂದೂಗಳು ನಮ್ಮೊರೆ ಅಲವೇನ್ಲ?" ಎಂದ. ಆದನ್ನು ಕೇಳಿ ನಗಾಡಿದ ಉಗ್ರಿ,

"ಅಲ್ಲಾ ಕಣೊ ಮಾವ, ಕಿರುಸ್ತಾನು ಮತಾಂತ್ರ ಮಾಡ್ತ ಅವುರೆ ಅಂದ್ರೆ, ಅವುರೇನು ಇವತ್ತಿಂದ ಮಾಡ್ತಯಿದ್ದರೆ? ಯಾವತ್ತು ವಾಸ್ಕೋಡಿಗಾಮ ಬಂದು ಕಲ್ಲಿ ಕ್ವಾಟೆಲಿ ಇಳುದ್ನೋ, ಅವತ್ತಿಂದ ನ್ಯಡಿತಾ ಅದೆ ಮತಾಂತ್ರ" ಎಂದ.

"ಅಂಗರಿದಲೇಕತೆ ಅನ್ನು?" ಎಂದ ಕಾಳಮಾವ.

"ಊ ಕಣ ಮಾವ. ಕಿಸ್ತಾನು ಯಾವತ್ತು ಇಂಡಿಯಾ ದೇಸಕ್ಕೆ ಯಾಪಾರ ಮಾಡಕ್ಕೆ ಅಂತ ಬಂದ್ನೊ, ಅವತ್ತಿಂದ ನಮ್ಮ ದೇಸದ ವಲಿಮಾದಿಗರು, ಬಡಬಗ್ಗರು, ಯಲ್ಲಾರ್ನು ಮತಾಂತ್ರ ಮಾಡ್ತಲೇ ಬಂದವುರೆ. ಅಂತದ್ರಲ್ಲಿ ಈ ಭಜರಂಗಿ ನನ ಮಕ್ಕಳು ಇವತ್ತೋಗಿ ಚರ್ಚು ಮ್ಯಾಲೆ ಕಲ್ಲುಬೀರಿ ಗಲಾಟ ಮಾಡ್ಯವೆ."

"ಭಜರಂಗಿ ಅಂದ್ರೆ ಅವ್ಯಾವುಲ?" ಎಂದಳು ಜುಮ್ಮಿ.

"ಭಜರಂಗಿಗಳು ಯಾರು ಅಂತ ನಿನಿಗೆಷ್ಟುಸತಿ ಹೇಳಿದ್ದಿನೆ ನಾನು? ಈ ಬಜೆಪಿ, ಆರೆಸ್ಸೆಸ್‌ನೋರಿಗೆ ಮದ್ಲಿಂದ ತೋಳುಬಲ ಇರ್ಲಿಲ್ಲ. ಅದ್ಕೆ ಆ ನನಮಕ್ಕಳು ಪ್ಲಾನ್ ಮಾಡಿ ರಟ್ಟೆ ಶಡವಾಗಿರೊ ಶೂದ್ರುಡುಗರ ಹಿಡಕಂಡು, ತಿನ್ನಕ್ಕೆ ಕುಡಿಯಕ್ಕೆ ಕೊಟ್ಟು ಸಾಯ್ಕಂಡು, ಈಗ ಸಾಬರು ಕಿರುಸ್ತಾನು ಮ್ಯಾಲೆ ಚೂಲುಬುಡ್ತ ಅವುರೆ. ಅವು ಹೋಗಿ ಕಡುದು ಬತ್ತವೆ."

"ಅಂತ ಕ್ಯಲಸ ಮಾಡ್ಯವೆ?"

"ಊ ಕಣೆ. ಅಂತ ರಾಮನೆ ಹನುಮಂತನ ಕೈಲಿ ಅಂತ ಕ್ಯಲಸ ಮಾಡಿಸಿರಲಿಲ್ಲವೆ? ಹೋಗಿ ಸೀತೆ ನೋಡಿ ಉಂಗುರ ಕೊಟ್ಟು ಬಾ ಅಂದ್ರೆ, ಅವುನು ಇಡೀ ಲಂಕಾ ಪಟ್ಣಕೆ ಬೆಂಕಿ ಹಚ್ಚಿ ಬಂದಿದ್ದ" ಎಂದು ಉಗ್ರಿ ಹೇಳಿದ ಕೂಡಲೇ ಸಿಟ್ಟಾದ ಸೀರ,

"ಆಂಜುನ್ಯೆಯನ ಬಾಲಕೆ ಬೆಂಕಿ ಹಚ್ಚದ್ರೆ, ಅವುನಿನ್ನೇನು ಮಾಡ್ತನ್ಲ?" ಎಂದ.

"ಆರಿಸಿಗಬೇಕಾಗಿತ್ತು ಕಣೊ. ಆಂಜುನ್ಯೆಯ ಹುಚ್ಚೆ ಊದು ಬಾಲದ ಬೆಂಕಿ ಆರಿಸಿಗಬೇಕಾಗಿತ್ತು. ಅದು ಬುಟ್ಟು ಇಡೀ ಲಂಕಾ ಪಟ್ಣಕೆ ಬೆಂಕಿ ಹಚ್ಚದ್ರೆ ಅದ್ಯಾವ ನ್ಯಾರ ಮೆಚ್ಚಾದತೆ? ಪಾಪ ಆ ಊರಲ್ಲಿ ಹೆಂಗುಸರಿದ್ರು, ಮಕ್ಕಳಿದ್ರೊ, ಮುದುಕರಿದ್ರು. ರಾವಣ ಮಾಡಿದ ತಪ್ಪಿಗೆ ಅವುರ್ಯಲ್ಲ ಮಕಕೈಕಾಲು ಸುಟಗಂಡ್ರೆ. ಅದು ಸರಿಯೇನೊ?" ಎಂದು ಉಗ್ರಿ ಹೇಳುವಾಗ ಏನೋ ನೆನೆಸಿಕೊಂಡ ಜುಮ್ಮಿ,

"ನೀನೇಳದು ನಿಜಕಂಡ್ಯ ಉಗ್ರಿ. ಪಂಚಾತಿ ಆಫೀಸಲ್ಲಿ ಜಯರಾಮ ಒಂದು ಪೇಪ್ರು ತಂದಿದ್ದ. ಅದ್ರಲಿ



ನೀನೇಳೊ ಭಜರಂಗಿಗೊಳು ಬಿಯಾರದಲ್ಲಿ ಒಂದುಡುಗಿ ಮಕಸುಟ್ಟದ್ರು. ನಾನದ ನೋಡಿ ಕಣ್ಣಲ್ಲಿ ನೀರು ಬಂದೊ ಕಂಡ್ಯ. ಮಕ ಸುಟ್ಟ ಹುಗವ ಯಾರು ಮದಿವಾಯ್ತರೆ? ಅಂತೂ ಆ ಹುಡುಗಿ ಜೀವನನೆ ಹಾಳು ಮಾಡಿದ್ರು ಈ ಸೂಳೆಮಕ್ಕಳು" ಎಂದಳು.

"ನಿಜ ಕಣೆ. ಇದುವರಿಗೂ ಸಾಬರಮ್ಯಾಲೆ ಬೀಳ್ತಿದ್ದ ಭಜರಂಗಿಗಳು ಈಗ ಇದ್ದಕ್ಕಿದ್ದಂಗೆ ಕಿರುಸ್ತಾನ್ರ ಮ್ಯಾಲೆ ಬಿದ್ದು ಚರ್ಚಿಗ್ಯಲ್ಲ ಬೆಂಕಿ ಹಚ್ಚುವುರೆ. ಎಡೂರಪ್ಪನು, ಹೊಂಮಿನಿಸ್ಟ್ರು ಆಚಾರಿನು ತಮಾಸಿ ನೋಡ್ತ ಕುಂತವುರೆ."

"ಅದ್ಕೆ ಕಣೊ ಉಗ್ರಿ ಹೊಂ ಕಾತೆ ಪಡಕಂಡಿರದು ಆರೆಸೆಸ್‌ನೋರು. ಇವತ್ತಿನವರಿಗೂ ಭಜರಂಗಿಗಳ ಮ್ಯಾಲೆ ಒಂದೇ ಒಂದು ಕೇಸನೂ ಹಾಕಿಲ್ಲ, ಗೊತ್ತಾ?" ಎಂದು ಕೊಂಡು ವಾಟಿಸ್ಸೆ ಹಾಜರಾದ.

"ಅಂಗಂತ ಮತಾಂತ್ರ ಮಾಡದು ಸರಿಯೇನ್ಲ?" ಎಂದ ಸೀರ.

"ಚಿಗಪ್ಪ, ನೀನು ಎಡರೂಪ್ಪನಂಗೆ ಮಾತಾಡಬ್ಯಾಡ. ಹಿಂದೂ ಧರ್ಮದಲ್ಲಿ ಊರ ಹ್ವರಗಿರೋರು, ದೇವಸ್ತಾನದ ವಳಿಕೆ ಬರಕ್ಯಾಗದೆಯಿರೋರು ಹೋಯ್ತರೆ. ಅವ್ರುರ ತಡದು ಏನು ಮಾಡ್ತೀ?"

"ಇದ್ದಂಗೆ ಇರಿ ಅಂತಿನಿ."

"ಹೂ.ವೆ. ಶೇಷಾದ್ರಿ ಅಂತ ಇದ್ದ. ಅವುನು ಥೇಟ್ ನಿನ್ನಂಗೆ ಮಾತಾಡೋನು ಚಿಗಪ್ಪ."

"ಅವುನೇನು ಮಾತಾಡ್ತಯಿದ್ದಾ?" ಎಂದಳು ಜುಮ್ಮಿ.

"ಅವುನು ಥೇಟ್ ಸೀರ ಚಿಗಪ್ಪನಂಗೆ ಮಾತಾಡ್ತಿದ್ದ ಕಣಕ್ಕ. ಮೀನಾಕ್ಷಿಪುರದಲ್ಲಿ ಹರಿಜನರ್ಯಲ್ಲ ಸಾಬರಾದ್ರು...."

"ಸಾಬರಾದ್ರ?"

"ಎಸ್. ಹಿಂದೂ ಧರ್ಮದ ಮ್ಯಾಲೆ ಸೇಡು ಬಂದ್ರೆ ಸಾಬರಾಯ್ತರೆ. ಬೇಜಾರಾದೋರು ಕ್ರಿಶ್ಚಿಯನ್ನಾಯ್ತರೆ ಕಣಕ್ಕ".


"ಸೇಡ್ಯಾಕೆ ಬತ್ತದ್ಲ?" ಎಂದ ಕಾಳಮಾವ.

"ನಿನ್ನಂಥ ಊರ್ಯಜಮಾನ ಹರಿಜನ್ರು ಚಪ್ಪಲಿ ಹಾಕಂಗಿಲ್ಲ, ಪಂಚೆ ಉಡಂಗಿಲ್ಲ, ಮೀಸೆ ಬುಡಂಗಿಲ್ಲ, ಕಾಲುಮ್ಯಾಲೆ ಕಾಲಾಕಿ ಕೂತಗಳಂಗಿಲ್ಲ ಅಂತ ಅಧಿಕಾರ ಚಲಾಯಿಸಿದ್ರೆ ಬುದ್ದಿ ಕಲಸಕ್ಕೆ ಸಾಬರಾಯ್ತರೆ. ಅದೇ

ಕೇಶವಕೃಪ ನಿರ್ದೇಶಿತ ನಾಟಕ ಮಂಡಳಿ ಪುಕ್ಕಟೆ ಮನರಂಜನೆ

ಜಗ್ಗೇಸಣ್ಣಾರ ಸಿನಿಮಾಗಳು ಸಕತ್ತಾಗಿರ್ತವೆ. ವಕ್ರವಕ್ರವಾಗಿ ಆಡೋ ಅವರ ಮಂಗಾಟ ನೋಡೋಕೆ ಎರಡು ಕಣ್ಣು ಸಾಲದು. ಇತ್ತೀಚೆಗೆ ಅವರ ಕೀರ್ತಿ ಬಲೇ ಹೆಚ್ಚಿದೆ. ವಿವಿಧ ಸಂಘಟನೆಗಳಲ್ಲೂ ಇಂತಹವರ ಸಂಖ್ಯೆ ಹೆಚ್ಚುತ್ತಿದೆಯಂತೆ; ಹಿಂಗಾಡೋ ನಾಯಕ ರೈತ ಸಂಘದಲ್ಲಿದ್ದರೆ 'ರೈತ ಸಂಘದ ಜಗ್ಗೇಸು' ಅಂತ ಅವರ ಮಾತ ಕೇಳಾಕೆ ಜನ ಮುಗಿಬೀಳ್ತಾರಂತೆ. ದಲಿತ ಸಂಘರ್ಷ ಸಮಿತಿಯಲ್ಲಿದ್ದರೆ 'ಬಂದ ಬಂದ ದಸಂಸ-ಜಗ್ಗೇಸ ಬಂದ' ಅಂತ ಮುತ್ತಿಕೊಳ್ತಾರಂತೆ, ಕರವೇಯಲ್ಲಿದ್ದರೆ 'ಕರವೇ ಜಗ್ಗೇಸ ಬಂದ ಬನ್ರುಲಾ' ಅಂತ ಅವನ ಸುತ್ತ ಸುತ್ತಗಿತಾರಂತೆ.

ಹೀಗೆ ಯಾವ ಸಂಘಟನೆಯಲ್ಲಿದ್ದರೂ ಇಂತಹವರಿಗೆ ಬಲೇ ಡಿಮಾಂಡಂತೆ. ಇನ್ನು ರಾಜಕೀಯ ಪಕ್ಷಗಳನ್ನು ಕೇಳುವಂತೆಯೇ ಇಲ್ಲ. ಇಂತಹವರೇ ಅಲ್ಲಿ ಪ್ರಮುಖ ಆಕರ್ಷಣೆ. ಕೇಶವಕೃಪ ನಿರ್ದೇಶಿತ ಯಡ್ಯೂರಪ್ಪ ನಾಟಕ ಮಂಡಲಿಯಲ್ಲಿ ಅಭಿನವ ಜಗ್ಗೇಸರು ಬಹುಮಂದಿ ಇದ್ದು ತಮ್ಮ ಅಭೂತಪೂರ್ವ ಕಲಾಕೌಶಲ್ಯ ಪ್ರದರ್ಶನದ ಮೂಲಕ ನಾಡಿನ ಜನತೆಗೆ ಪುಕ್ಕಟೆ ಮನರಂಜನೆ ನೀಡುತ್ತಿದ್ದಾರಂತೆ.



ಮಂಗಳೂರನ್ನು ಇದುವರೆವಿಗೂ 'ಬುದ್ಧಿವಂತರ ಜಿಲ್ಲೆ', 'ಮೀನು ತಿಂದು ತಿಂದು ಅಲ್ಲಿನವರ ಬುದ್ಧಿ ಚುರುಕು' ಅಂತೆಲ್ಲ ಅನ್ನುತ್ತಿದ್ದರು: ಈಗೀಗ ಅಲ್ಲಿನ ಕೆಲವರು ಹೊಟ್ಟೆಗೆ ಏನು ತಿನ್ನುತ್ತಾರೋ ಗೊತ್ತಿಲ್ಲ, ಅಲ್ಲಿ ನಡೆಯುತ್ತಿರುವ ಚಟುವಟಿಕೆಗಳನ್ನು ಗಮನಿಸಿದರೆ ಅದು ಮಂಗಗಳ ಊರೂ ಹೌದು ಅನ್ನಿಸುತ್ತದೆ. ಇತ್ತೀಚೆಗೆ ಅಲ್ಲಿ ಪ್ರಾರ್ಥನಾ ಮಂದಿರಗಳ ಮೇಲೆ ಭಜರಂಗ ದಾಳಿ ನಡೆಸಿತಲ್ಲಾ, ಯಡ್ಯೂರಪ್ಪ ಸುದ್ದಿಗೋಷ್ಠಿ ಇತ್ತಂತೆ. ಅವರ ಗೋಷ್ಠಿ ಅಂದರೆ ಮಾಧ್ಯಮದವರ ನೂಕುನುಗ್ಗಲು ಹೇಳತೀರದಂತೆ. ಸರ್ಕಾರದ ವಿಶೇಷ ಸಮಾಚಾರ ಸಿಗುತ್ತೆ ಅಂತ ಅಲ್ಲವಂತೆ. ಅವರು ಹೇಳುವ ಸುಳ್ಳುಗಳ ಸರಮಾಲೆ ಬಲೇ ರೋಚಕವಾಗಿರುತ್ತಂತೆ. ಮಾಧ್ಯಮಗಳವರು ಅವರ ಸುದ್ದಿಗೋಷ್ಠಿಯನ್ನ 'ಸುಳ್ಳೂರಪ್ಪ ಸುದ್ದಿ ಗೋಷ್ಠಿ' ಅಂತಾನೆ ಕರೀತಾರಂತೆ.

ಈ ಸಲದ ಸುಳ್ಳೂರಪ್ಪನವರ ಸುದ್ದಿಗೋಷ್ಠಿ ಬಲೇ ಮಜವಾಗಿತ್ತಂತೆ. ಕ್ರೈಸ್ತರ ಪ್ರಾರ್ಥನಾ ಮಂದಿರಗಳ ಮೇಲೆ ನಡೆದ ದೌರ್ಜನ್ಯ ಕುರಿತು ಸರ್ಕಾರದ ನಿಲುವು ಪ್ರಕಟಿಸಬೇಕಿತ್ತಲ್ಲಾ, ಸರ್ಕಾರಕ್ಕೆ ಕೆಟ್ಟ ಹೆಸರು ತರಲು ವಿರೋಧ ಪಕ್ಷದವರ ಸಂಚು ಇದು ಎಂದು ಸಾರಿದರಂತೆ. ಮರುಕ್ಷಣವೇ ಭಜರಂಗದಳದ ಈ ಕೃತ್ಯಕ್ಕೆ ಮತಾಂತರ ಕಾರಣ ಅಂದರಂತೆ. ಭಾಜಪ ಅಧಿಕಾರಕ್ಕೆ ಬಂದ ನಂತರದ ನೂರು ದಿನಗಳಲ್ಲಿಯೇ ಕ್ರೈಸ್ತರೇನಾದರೂ 'ನೂರು ದಿನಗಳಲ್ಲಿ ಮತಾಂತರ' ಅನ್ನೊ ಕಾರ್ಯಕ್ರಮ ಹಮ್ಮಿಕೊಂಡಿದ್ದಾರಾರಂತ ಕೇಳಬೇಕು ಅನ್ನುವಷ್ಟರಲ್ಲಿ 'ಮತಾಂತರಿಗಳನ್ನು ಬಲಿ ಹಾಕ್ತಿನಿ' ಅಂತ ಗುಡುಗಿದರಂತೆ. 'ಮತಾಂತರಕ್ಕೆ ವಿದೇಶಿ ಹಣ ಹರಿದು ಬರುತ್ತಿದೆ. ಮೂಲದ ತನಿಖೆ ನಡುಸ್ತೀನಿ' ಅಂತ ಅಬ್ಬರಿಸಿದರಂತೆ. ಸಂಘ ಪರಿವಾರಕ್ಕೆ ವಿದೇಶದಿಂದ ಹರಿದುಬರುತ್ತಿರುವ ಹಣಕ್ಕೆ ಹೋಲಿಸಿದರೆ ಇದು ಏನೇನೂ ಅಲ್ಲ, ಅದರ ತನಿಖೆಗಳನೂ, ನಡೆಸುತ್ತೀರಾ ಅಂತ ಕೇಳುವಷ್ಟರಲ್ಲಿ ಬೇರೆ ವಿಷಯಕ್ಕೆ ಹಾರಿದರಂತೆ. 'ಈ ದುಷ್ಟತನವನ್ನು ಯಾರೇ ಎಸಗಿರಲಿ ಅಂತಹವರ ಮೇಲೆ ಕಠಿಣ ಕ್ರಮ ಕೈಗೊಳ್ಳಲಾಗುತ್ತದೆ' ಅಂತ ಸಾರಿ ಕೈ ಮುಗಿದರಂತೆ! ಅಲ್ಲ ಭಜರಂಗದಳದ ರಾಜ್ಯಾಧ್ಯಕ್ಷ ಮಹೇಂದ್ರಕುಮಾರ್ ಈ ದುಷ್ಕೃತ್ಯಗಳ ಹೊಣೆ ಹೊತ್ತಿದ್ದಾರಲ್ಲ, ಇದು ಇನ್ನೂ ಮುಂದುವರೆಯುತ್ತದೆ ಎಂಬುದಾಗಿ ಹೇಳಿದ್ದಾರಲ್ಲ ಅವರ ಮೇಲೆ ಸರ್ಕಾರದ ಕ್ರಮ ಏನು ಅಂತ ಕೇಳೋ ಅಷ್ಟರಲ್ಲಿ ಸುಳ್ಳೂರಪ್ಪನವರು ಕೈಮುಗಿದು ಹೋಗಿ ಆಗಿತ್ತಂತೆ.

ಅಳುಮುಂಜಿ ಗೃಹಮಂತ್ರಿ ಎಂಬ ಪ್ರಾಣಿ ಅಲ್ಲೇ ಉಳಿದುಕೊಂಡಿತ್ತಲ್ಲ ಅದಕ್ಕೆ ಕೇಳಬಹುದಿತ್ತಲ್ಲಾ ಎಂದು ಪ್ರಶ್ನಿಸಬಹುದು. ಪಾಪ ಅವರು ಸಂಘಪರಿವಾರದ ಕುಟುಂಬದವರು. ವರ್ಗಾವಣೆಯಲ್ಲಿ ಕಾಸು ಅಂತ ಮಾಡಿ ಪರಿವಾರದ ಋಣ ತೀರಿಸೋಣ ಅಂದರೆ ಸುಳ್ಳೂರಪ್ಪನವರ ಕುಟುಂಬವೇ ಇದನ್ನೆಲ್ಲ ದಕ್ಷವಾಗಿ ನೆರವೇರಿಸಿತ್ತು. ಆ ಋಣ ಅನ್ನೋದು ಕಾಡ್ತಾನೆ ಇತ್ತಲ್ಲ, ಅದಕ್ಕೇ ಭಜರಂಗದಳದ ಕಾರ್ಯಕರ್ತರಿಗೆ ಯಾವುದೇ ತೊಂದರೆಯಾಗದಂತೆ ಪೊಲೀಸರಿಗೆ ನಿರ್ದೇಶನ ನೀಡಲು ಅಲ್ಲಿಯೇ ತಂಗಿದ್ದರಂತೆ. ಯಶಸ್ವಿಯಾಗಿ ತಮ್ಮ ಕರ್ತವ್ಯ ನಿರ್ವಹಿಸಿದ್ದಕ್ಕೆ ಕೇಶವಕೃಪದ ತಾರೀಫು ಬಂದಿರುವುದು ಖಾತರಿಯಾಗಿಲ್ಲ!

ಅಣಕ

ಎಚ್.ಎಲ್. ಕೇಶವಮೂರ್ತಿ

ಹಿಂದೂ ಧರ್ಮದ ಮೇಲಿನ ಅಜ್ಞಾನ 'ಸತ್ಯ ದರ್ಶನಿ' ಕೃತಿ ನಿರ್ಮಾಣ ಆಗಿದೆ ಎಂದು ಅದನ್ನು ಉದಾಸೀನ ಮಾಡಿದ್ದರಾಗುತ್ತಿತ್ತು. ಅಥವಾ ಅದರ ಮುಟ್ಟುಗೋಲಿಗೆ ಒತ್ತಾಯಿಸಿದರಾಗುತ್ತಿತ್ತು.

ಉಹುಂ. ಅದು ಬೇಕಿಲ್ಲ, ಇಡೀ ಕ್ರೈಸ್ತ ಸಮುದಾಯವೇ ಅದರ ಹೊಣೆ ಹೊರಬೇಕು. ಯಾಕೆ? ಹಿಂದೂಗಳ ಭಾವನೆಗಳನ್ನು ಕೆರಳಿಸಬೇಕು. ಚುನಾವಣೆ ಸಮೀಪಿಸುತ್ತಿದೆ!

ನಾಯಿಯನ್ನು ಸಾಯಿಸುವುದು ಬಹಳ ಸುಲಭ. ಅದಕ್ಕೆ ಹುಚ್ಚು ಎಂದರಾಯಿತು. ಬಡಿದು ಹಾಕಿದರೇ ಸಮಾಜಕ್ಕೆ ನೆಮ್ಮದಿ.

ಈ ಗಲಭೆಗಳಿಗೆ ಕಾರಣವೇನು?

ಮತಾಂತರ ಅಂದು ಆಯಿತು. ಪುರಾವೆಗಳು ಇದರ ವಿರುದ್ಧ ಇವೆ. 1991ರ ಜನಗಣತಿಯಲ್ಲಿ ಕ್ರೈಸ್ತರ ಜನಸಂಖ್ಯೆ ಶೇ. 2.7 ಇತ್ತು, 2001ರ ಜನಗಣತಿಯಲ್ಲಿ ಅದು ಶೇ. 2.5 ಕ್ಕೆ ಇಳಿದಿದೆ.

ಈಗ ಹೇಳುತ್ತಿದ್ದಾರೆ-'ಸತ್ಯ ದರ್ಶನಿ' ಎಂಬ ಪುಸ್ತಕ.

ಏನಿದೆ ಅದರಲ್ಲಿ?

ಹಿಂದೂ ದೇವತೆಗಳ ಅಶ್ಲೀಲ ವರ್ಣನೆ. ಸೀತೆಯನ್ನೇ ಕಾಯಲಾರದ ನಿಮ್ಮ ರಾಮ ನಿಮ್ಮನ್ನು ಕಾಯುವನೆ ಎಂಬ ಪ್ರಶ್ನೆಗಳು ಇವೆಯಂತೆ.

ಎಲ್ಲೋ ಓದಿದ್ದು ನೆನಪಾಗುತ್ತಿದೆ.

ಒಬ್ಬ ಕ್ರೈಸ್ತ ಪಾದರಿ. ಧರ್ಮಪ್ರಚಾರ ಮಾಡುತ್ತಿದ್ದ ಒಂದು ಸಂತೆಯಲ್ಲಿ, ಒಂದು ಗಿಣಿಯನ್ನು ಬೆಕ್ಕು ಅಟ್ಟಿಸಿಕೊಂಡು ಬಂದಿತು. ಗಿಣಿ ಪ್ರಾಣಭಯದಿಂದ 'ರಾಮಾರಾಮಾ' ಎಂದು ರಾಮನನ್ನು ಪ್ರಾರ್ಥಿಸಿತು. ನಿಮ್ಮ ರಾಮ ಬಂದನೆ? ಇಲ್ಲ. ಕೃಷ್ಣಕೃಷ್ಣ ಎಂದು ಪ್ರಾರ್ಥಿಸಿತು. ನಿಮ್ಮ ಕೃಷ್ಣ ಬಂದನೆ? ಇಲ್ಲ, ಬೆಕ್ಕು ಹತ್ತಿರಕ್ಕೇ ಬಂದಿತು. ಗಿಣಿಯು ಏಸುವನ್ನು ಪ್ರಾರ್ಥಿಸಿತು. ಏಸು ಬಂದ. ಬೆಕ್ಕನ್ನು ಕೊಂದ. ಗಿಣಿಯನ್ನು ತಿಂದ!

ಇದು ಪ್ರಚಾರದಲ್ಲಿದ್ದಾಗ ಯಾವ ಕ್ರೈಸ್ತನೂ ಪುಂಡಾಟ ಮಾಡಿದ್ದಿಲ್ಲ.

ಮುಸಲ್ಮಾನರು-ಭಯೋತ್ಪಾದಕರು

ಕ್ರೈಸ್ತರು-ಮತಾಂತರಿಗಳು

ಪಟ್ಟ ಕಟ್ಟಿದರೆ ಸಾಕು. ಸದೆಬಡಿಯಬಹುದು!

ತೋಳ-ಕುರಿಮರಿ ನ್ಯಾಯ. ಅಂದ್ರೆ ಇದೇನಾ ಅಂತ.

ನಿಮಗೆ ನೀವೇ ರಕ್ಷಣೆ

Self help is the best help

ಎಂತಹ ಅದ್ಭುತ ಮಾತು ಅಲ್ವಾ.

ಚಿಕ್ಕಮಗಳೂರಿನ ಪೊಲೀಸರಿಗೆ ಇದರ ಮೇಲೆ ಅಪಾರ ನಂಬಿಕೆ ಇರಬೇಕು. ಯಾಕೆ ಅಂದರೆ ಅಲ್ಲಿನ ಪೊಲೀಸರ ಹತ್ತಿರ ಹೋಗಿ ನೋಡಿ. ಚರ್ಚುಗಳಿಗೆ ರಕ್ಷಣೆ ಒದಗಿಸಿ ಎಂದು ಕೇಳಿ ನೋಡಿ. ಅವರ ಉತ್ತರ- 'ನೀವೇ ತಂಡ ರಚಿಸಿ ಕಾವಲಿರಿ!'

...ರ ಮೀನಾಕ್ಷಿಪುರದಲ್ಲಿತ್ತು, ದಲಿತರ ನಾಬರಾದ್ದು. ...ಗ ಈ ತೊಡೇ ಕೇಷ "ಹರಿಜನ್ರೇ, ನೀವು ದೃಢವಾಗಿ ...ಲ್ಲಿ ನಿಮ್ಮ ಹಿರಿಯರು ನೋಡಿ. ಹ್ಯಂಗಿದ್ರು? ಶತಶತ ...ಮಾನದಿಂದ ಹಿಂದೂ ಧರ್ಮದ ಕಲ್ಲುಗ್ಳಾದೆಯುಂಗಿದ್ರು' ...ಂದ. ಸದ್ಯ ಯಾರು ಆ ಪೂಲಿಷ್ ಫೆಲೋಗೆ ಕಲ್ಲು ...ಗಂಡು ವದಿಲಿಲ್ಲ!"

"ಅದ್ಯಾಕ್ಕಡಿಬೇಕು?" ಎಂದಳು ಜುಮ್ಮಿ

"ಮತಾಂತ್ರ ಆದೋರ ತಂದು ತನ್ನ ಜಾತಿಗೆ ...ರಿಸಿಗಳದ ಬುಟ್ಟು ನೀವು ಹರಿಜನ್ರಾಗಿರಿ ಅನ್ನಕ್ಕೆ ... ಪ್ಯಾಟನಾಯ್ಕನೇ ಬೇಕೇನಕ್ಕ? ಕ್ರಿಶ್ಚಿಯನು ಮತಾಂತ್ರ ...ಮಾಡ್ತರೆ ಅಂದ್ರೆ ನೀನೂ ಮಾಡು. ಆದಿ ಚುಂಚನಗಿರಿ ...ಸ್ವಾಮಿ ಇವತ್ತೆ ಹರಿಜನ್ರ ಕೇರಿಗೋಗಿ 'ನೀವ್ಯಲ್ಲ ಇವತ್ತಿಂದ ...ಕ್ಕಲಿಗರು ಕಣ್ರಪ್ಪ. ನಿನ್ನೆಸ್ರು ಮಾದೇಗೌಡ, ನಿನ್ನೆಸ್ರು ...ಬಟ್ಟೇಗೌಡ, ಇವ್ರುನೆಸ್ರು ಸುರೇಶ್‌ಗೌಡ, ಆವ್ರುನೆಸ್ರು ...ನವರಾಮೇಗೌಡ' ಅಂತ ಹೇಳಂಗಿದ್ದರೆ? ಇದೀ ಹಿಂದೂ ...ರ್ಮದಲ್ಲಿ ಯಾರ್ನು ಯಾವ ಜಾತಿಗೂ ಸೇರಿಸಿಗಳೊ ...ಸಿಲಿಟ ಇಲ್ಲ ಕಣಕ್ಕ. ಅದ್ಕೆ ಕ್ರಿಶ್ಚಿಯನು ಮತಾಂತ್ರಕ್ಕೆ ...ಯಾಕ್ಯವ್ರುರೆ. ಅದು ಸುಮ್ಮಸುಮ್ನೆ ಹಾಕಿಲ್ಲ, ಓದಕ್ಕೆ ...ಸುಗೂಲು ಮಾಡ್ಯವ್ರುರೆ, ತಿಂಡಿ ಕೊಡ್ತರೆ, ಬಟ್ಟೆ ...ಕೊಡ್ತರೆ, ಪೀಜು ಕೊಡ್ತರೆ, ಆಸುಪತ್ರಿಗೆ ತೋರುಸ್ತರೆ."

"ಅಂಗ್ಯಲ್ಲ ಮಾಡ್ತರೇನ್ನ?"

"ಹಕ್ಕಿಪಿಕ್ಕರ ತಾಂಡ್ಯಕ್ಕೋಗಿ ನೋಡಕ್ಕ. ಅಂಗೆಯಾ ...ನ್ನ ಹತ್ತೂರಸಕ್ಕೆ ಅಲ್ಲಿ ಯಾವ ಹಕ್ಕಿಪಿಕ್ಕಿನೂ ಇರದಿಲ್ಲ. ...ದೀ ರಾಬರ್ಟು, ಡಿಸೋಜ, ಪೀಟರ್, ಜಾನ್‌ಸನ್‌ಗಳೇ ...ರತರೆ. ಅವ್ರುರು ಅಂಗಾಗದು ವಳ್ಳೆದೊ, ಹಕ್ಕಿಪಿಕ್ಕ ...ಆಗಿರದೆ ವಳ್ಳೆದೊ ಹೇಳಿ?" ಎಂದು ವಾಟಿಸೆ ಸವಾಲು ...ಸೆದಾಗ, ಯಾರಿಂದಲೂ ಮಾತು ಹೊರಬರಲಿಲ್ಲ. ...ಗ ಮುಂದುವರಿದ ವಾಟಿಸ್ಸೆ,

"ಈ ಚೆಡ್ಡಿ ಬಡ್ಡೆತ್ತವು, ಭಜರಂಗಿ ಬೋಳಿಮಕ್ಕಳು ...ಹೋಗಿಹೋಗಿ ಚರ್ಚಿಗೆ ಕಲ್ಲುಬೀರದಕಿಂತ ಮತಾಂತ್ರ ...ಆಗೋರ ಮನಿಗೋಗಬೇಕು, ಅವ್ರುರ ಸೇವೆ ಮಾಡ ...ಬೇಕು, ಅವ್ರುರ ಕಕ್ಕಸ್ ತ್ವಳಿಬೇಕು. ಆಗ ನೋಡ್ರುಪ್ಪ ...ದೂರು ಹಿಂದೂ ಧರ್ಮ ಬುಡದಿಲ್ಲ, ಅಂಗೆ ಮಾಡ್ತರ ...ಅವ್ರುರು?"

" !?" ■

ಆಯಿತು. ತಂಡ ರಚಿಸಿ ಕಾವಲು ಇದ್ದೊ ...ರಿತಿಟ್ಟುಕೊಳ್ಳಿ. ಮಾರಕಾಸ್ತ್ರಗಳನ್ನು ಹೊಂದಿದ್ದ ಗುಂಪು ...ಳಿ ನಡೆಸುತ್ತೆ. ಆವಾಗ ಏನು ಮಾಡಬೇಕು?

ಸುಮ್ಮನೆ ಇರಿ! ಅವರನ್ನು ಗಮನಿಸುತ್ತಾ ಇರಿ!

ಇದ್ದೆವು. ಲೂಟಿ ಆಯಿತು. ಆಮೇಲೆ?

ಪೊಲೀಸರಿಗೆ ಫೋನ್ ಮಾಡಿ ಗಾಡಿ ನಂಬರ್ ...ಳಿಸಿ!

ದಾಳಿಕೋರರು ವಾಹನಗಳಲ್ಲಿ ಬರದೆ ನಡೆದೇ ...ಬಂದಿದ್ದರೆ?

!!?

ಕಂತೆಗೆ ತಕ್ಕ ಬೊಂತೆ.

ಎಲ್ಲವೂ ಮಾಯ!

ನೀನೂ ಮಾಯ, ನಾನೂ ಮಾಯ, ಎಲ್ಲವೂ ಮಾಯ ಅನ್ನುವ ಹಾಡು ಕೇಳಿರಬೇಕಲ್ಲ. ಭಾಜಪ ಸರ್ಕಾರದಲ್ಲಿ ...ನಾತಿ ಫೈಲ್‌ಗಳೇ ಮಾಯ ಆಗ್ತಿವೆ. ಮಹಿಳಾ ಆಯೋಗದ ಕಚೇರಿಯಿಂದ ನೂರಾರು ಫೈಲುಗಳು ತಿಂಗಳ ...ಳಕು ಮಂಗಳಮಾಯ ಆಗಿದ್ದು ವರದಿಯಾಗಿತ್ತು. ಈಗ ...ನ್ನೊಂದು ಜಾದೂ ಪ್ರಕರಣ ಬಯಲಾಗಿದೆ.

ರಾಜ್ಯದ ವಿವಿಧೆಡೆ ಪ್ರಾರ್ಥನಾ ಮಂದಿರಗಳ ಮೇಲೆ ದೌರ್ಜನ್ಯ ನಡೆಯಿತಲ್ಲಾ, ಕರ್ನಾಟಕ ಕ್ರೈಸ್ತ ಸಾಮಾಜಿಕ ...ಕ್ಷೇತ್ರಾಭಿವೃದ್ಧಿ ಸಂಘ ಒಂದು ವಿಚಾರ ಸಂಕಿರಣ ...ಟ್ಟುಕೊಂಡಿತ್ತು, ವಿಷಯ- 'ಮಾನವಹಕ್ಕುಗಳ ಉಲ್ಲಂಘನೆ, ಮಾನವಹಕ್ಕುಗಳ ಮತ್ತು ಅಲ್ಪಸಂಖ್ಯಾತ ಆಯೋಗದ ...ಪಾತ್ರ' ಇದೇ ಹದಿನೈದರಂದು ಶಾಸಕರ ಭವನದ ಸಭಾಂಗಣದಲ್ಲಿ ವಿಚಾರಸಂಕಿರಣ ನಡೆಯಬೇಕಿತ್ತು.

ಸಭೆಯ ದಿವಸ. ಎಲ್ಲರೂ ಬಂದರು. ಆದರೆ ಸಭಾಂಗಣದ ಬಾಗಿಲೇ ತೆರೆದಿರಲಿಲ್ಲ!

ಸಭಾಭವನವನ್ನು ಮುಂಗಡ ಕಾಯ್ದಿರಿಸಿದ್ದು ಶಾಸಕ ...ಜಾರ್ಜ್. ಅವರು ಸಂಬಂಧಿಸಿದವರನ್ನು ವಿಚಾರಿಸಿದರು. ...ಅವರು 'ವಿಷಯವೇ ಗೊತ್ತಿಲ್ಲ' ಅಂದರು.

ಸರಿ, ಮಾಡುವುದೇನು. ಕಾಯ್ದಿರಿಸುವ ಪುಸ್ತಕ ...ತೆಗೆಸಿದರು. ಏನು ಆಶ್ಚರ್ಯ ಅಂತೀರಿ. ಹದಿನೈದನೇ ...ತಾರೀಖಿನ ಹಾಳೆಯೇ ಪತ್ತೆ ಇರಲಿಲ್ಲ!

ಅದಿಲ್ಲದಿದ್ದರೇನು. ಸಭಾಂಗಣದ ಬೀಗದ ಕೈ ಆದರೂ ...ಇರತ್ತಲ್ಲ ಅನ್ನುವುದೆ?

ಆದರೆ ಬೀಗದ ಕೈಯೂ ನಾಪತ್ತೆ!


'ಏನಾಯಿತು ಕೀ' ಕೇಳಿದರು ಜಾರ್ಜ್.

'ಕಳೆದುಹೋಗಿದೆ ಸಾರ್!'

ಬಾಗಿಲು ಒಡೆದು ಒಳನುಗ್ಗಲು ಅವರು ...ಸಂಘಟನೆಗಳ ಕಾರ್ಯಕರ್ತರಲ್ಲ,

ಏನು ಸೂರು ದಿನಗಳ ಸಾಧನೆ! ■

ಶರ್ಮ: 65



■ ಪಿ. ಲಂಕೇಶ್ ಡಿಸೆಂಬರ್ 9, 1990

ಮೊನ್ನೆ ನವೆಂಬರ್ ಇಪ್ಪತ್ತೈದರಂದು ನನ್ನ ಮಿತ್ರ ಬಿ.ಸಿ. ರಾಮಚಂದ್ರ ಶರ್ಮರ 65 ನೇ ಹುಟ್ಟುಹಬ್ಬ. ಕವಿ, ಗಟ್ಟಿ ಗಂಟಲ ನಟ, ತಮಾಷೆಯ ಮನುಷ್ಯ ಈ ಶರ್ಮರಿಗೆ ಶತ್ರುಗಳೇ ಇಲ್ಲ. ಯಾರೊಬ್ಬರ ಬಗ್ಗೆಯೂ ದ್ವೇಷ, ಸಿಟ್ಟು, ಮತ್ಸರ ಇಲ್ಲದ ಶರ್ಮ, ಎಲ್ಲರಿಗೂ ಬೇಕಾದ, ಈಗಲೂ ಹುಡುಗಾಟವಾಡುವ, ಎಳೆಮಕ್ಕಳಂತೆ ಸ್ಪಂದಿಸುವ ಮನುಷ್ಯ. ಇದೆಲ್ಲರಿಂದಾಗಿಯೇ ರಾಜಗಾಂಭೀರ್ಯ ಮತ್ತು ಭೀಕರ ಬಿಂಕವನ್ನು ಮಾತ್ರ ಗೌರವಿಸುವ ನಮ್ಮ ಸಾಹಿತಿಗಳಿಗೆ ಶರ್ಮರನ್ನು ಕಂಡರೆ ಸ್ವಲ್ಪ ತಾತ್ಸಾರ. ಶರ್ಮ ತಮ್ಮ ಹೊಸ ಚಿಂತನೆ ಮತ್ತು ಅನಿರೀಕ್ಷಿತ ವರ್ತನೆಯಿಂದ ಬೆಚ್ಚಿಬೀಳಿಸುವುದಿಲ್ಲ; ಸಾಮಾನ್ಯ ವಿಚಾರವನ್ನು ಕೂಡ ಕ್ರಾಂತಿಕಾರಿ ಅನ್ನಿಸಿಕೆಯೆಂಬಂತೆ ದೊಡ್ಡ ಗಂಟಲಲ್ಲಿ ಹೇಳುತ್ತಾರೆ. ಜನ ಅವರ ಬಗ್ಗೆ ಸದರವಾಗಿ ವರ್ತಿಸಲು ಇದೂ ಕಾರಣವಿರಬಹುದು.

ಆದರೆ ನಮ್ಮಲ್ಲಿ ಕೆಲವರಿಗೆ ಶರ್ಮರೆಂದರೆ ಇಷ್ಟ: ಇವರನ್ನು ಲೇವಡಿ ಮಾಡಿ ಗೋಳು ಹೊಯ್ಯುಕೊಂಡು ಬೇಸರಗೊಂಡರೆ ನಗಿಸಿ ಇವರ ಪದ್ಯ ಕೇಳಿ ಬೆನ್ನುತಟ್ಟುವುದು ನಮಗೆ ಇಷ್ಟ. ಇವರ 65 ನೇ ಹುಟ್ಟುಹಬ್ಬವನ್ನು ಆಚರಿಸಲು ತೀರ್ಮಾನಿಸಿದೆವು. ಎಲ್ಲರೂ ಸ್ವಲ್ಪ ಹಣ ಹಾಕಿ 'ಕೂಟ'ಕ್ಕೆ ಅಣಿ ಮಾಡಿಕೊಂಡೆವು. ಇಬ್ಬರು ಹಾರ ತಂದರು, ಹಲವರು ತಮ್ಮ ಪುಸ್ತಕ ತಂದರು. ತಮಾಷೆ ಮಾಡುತ್ತ ಜಗದ್ವಿಖ್ಯಾತ ಕವಿಗಳ ಕವನ ಓದುತ್ತ ಸಂಜೆ ರಾತ್ರಿಯಾಯಿತು. ಅರಸು, ಶರ್ಮ, ಸಿ.ಆರ್. ಸಿಂಹ, ಕಿ.ರಂ. ನಾಗರಾಜ, ಎಲಿಯಟ್, ನೆರೂಡ, ಬೇಂದ್ರೆ, ನರಸಿಂಹಸ್ವಾಮಿಗಳ ಕವನ ಓದತೊಡಗಿದರು. ಚಪ್ಪಾಳೆ, ನಗೆ, ಖುಷಿಯಲ್ಲಿ ಕಣ್ಣೆದುರು ಸಾಗುತ್ತಿದ್ದ ನೆರೂಡನ ನಿಗ್ರಾ ಮತ್ತು ಎಲಿಯಟ್ ಪ್ರುಫ್ರಾಕ್ ಚಿತ್ರಗಳಲ್ಲಿ ಶರ್ಮರ 65 ವರ್ಷ ಕರಗತೊಡಗಿದವು. ಇಷ್ಟರಿಂದ ನಾವು ತೃಪ್ತರಾಗಲಿಲ್ಲ. 65 ರ ಶರ್ಮರ ಮೇಲೆ ಅಲ್ಲಿದ್ದ ಪ್ರತಿಯೊಬ್ಬ ಕವಿಯೂ ಅಲ್ಲೇ ಪುಟ್ಟ ಕವನ ಕಟ್ಟಿ ಓದಬೇಕೆಂದು ತೀರ್ಮಾನಿಸಿದೆವು. ಇದಕ್ಕಾಗಿ ಐದು ನಿಮಿಷ ವಿರಾಮ. ಶೂದ್ರ ಮತ್ತು ಜರಗನಹಳ್ಳಿ ಶಿವಶಂಕರ್ ತಮ್ಮ ಕವನ ಓದಿದರು; ಕವಿ (ಶಾಸಕ) ಸಿದ್ಧಲಿಂಗಯ್ಯ ಆರು ಸಾಲಿನ ಕವನ ಓದಿ ಶರ್ಮರನ್ನು ತಮ್ಮ ಪ್ರೀತಿ, ಗೌರವದಿಂದ ತುಂಬಿದರು. ಇಷ್ಟೆಲ್ಲದರ ನಡುವೆ ನಾನೊಂದು ಕವನ ರಚಿಸಿದ್ದೆ. ಕಾವ್ಯಸ್ಪರ್ಧೆಯಲ್ಲಿ ಭಾಗವಹಿಸಿ ತುಂಬ ದಿನವಾಗಿತ್ತು. ಸಿದ್ಧಲಿಂಗಯ್ಯ, ಶೂದ್ರರ ಕೈಯಲ್ಲಿ ಸೋಲು ಅನುಭವಿಸಿದರೂ ಒಳ್ಳೆಯದೇ ಅನ್ನಿಸಿ ಅಲ್ಲೇ ಗೀಚಿದ್ದ ಪದ್ಯ ಓದಿದೆ. ನನ್ನಲ್ಲಿರುವ ಕವನ ಇದೊಂದೇ ಆದ್ದರಿಂದ (ಮಿತ್ರ ಕವಿಗಳು ಆ ಗದ್ದಲದಲ್ಲಿ ತಮ್ಮ ಕವನ ತೂರಿಬಿಟ್ಟದ್ದರಿಂದ) ಇದನ್ನು ಮಾತ್ರ ಕೊಡುತ್ತಿದ್ದೇನೆ.

65:

ಇಷ್ಟು ವರ್ಷಗಳಾದ ಮೇಲೆ
ಪ್ರತಿಯೊಂದು ಹುಟ್ಟುಹಬ್ಬವೂ
ಸಂತಾಪಸೂಚಕ ಸಭೆಯಾಗುತ್ತದೆ.


ಆದರೂ ವಯಸ್ಸಾದ ವಿಸ್ಕಿಗೆ
ವಿಚಿತ್ರ ಶಕ್ತಿ ಬರುತ್ತದೆ.

ಈ ನಮ್ಮ ಶರ್ಮ ಎಂಬ ಮಗುವಿಗೆ
ಶರ್ಮ ಎಂಬ ವಿದೂಷಕ ಮುದುಕನಿಗೆ
ಶರ್ಮ ಎಂಬ
ತಮ್ಮ ಹೊಕ್ಕುಳನ್ನೇ ಧ್ಯಾನಿಸುವ
ವಿಚಿತ್ರನಿಗೆ
ಸಂತಾಪ ಸೂಚಿಸುವುದು ಅಸಾಧ್ಯ.

ನಾವು ಈತನ್ನ 65 ರಿಂದ 85 ಕ್ಕೆ
ಕರೆದೊಯ್ಯಲು ಯತ್ನಿಸಿ
ಈತನ ಘನತೆ ಕರಗುವುದ,
ಉತ್ಸಾಹ ಇಂಗುವುದ,
ಕಂಠ ಮಿಂಚಿ ಮಾಯವಾಗುವುದ,
ಸಹಿಸುವುದು ಕೂಡ ಕಷ್ಟ.

ಇದು ಶರ್ಮರ ಕಷ್ಟದಂತೆಯೇ
ನಮ್ಮ ನಿಮ್ಮೆಲ್ಲರ ಕಷ್ಟವಾಗಿರುವುದು
ಒಟ್ಟಾರೆ ನೋವು, ನೆಮ್ಮದಿ
ಶಾಂತಿ,
ನೀಡುವುದು.....

ಇದೆಲ್ಲ ನಿಜಕ್ಕೂ ದುರಂತ ಮತ್ತು
ಹಾಗೆಯೇ ಸುಖಾಂತ... ಅಲ್ಲವೆ?



ಅಣುಸ್ಥಾವರ ಮತ್ತು ಆಮ್ಟೆಗಳು

ಬಾಬಾ ಆಮ್ಟೆ ಹೇಳಿಕೆ ನೀಡಿದ್ದಾರೆ: ನರ್ಮದಾ ಅಣೆಕಟ್ಟಿನ ಕೆಲಸ ಕೂಡಲೆ ನಿಲ್ಲದಿದ್ದರೆ ತಾವು ನರ್ಮದಾ ನದಿಯಲ್ಲಿ ಬಿದ್ದು ಪ್ರಾಣತ್ಯಾಗ ಮಾಡುವುದಾಗಿ ಹೇಳಿದ್ದಾರೆ. ಇದು ಗಂಭೀರ ತೀರ್ಮಾನ. ಆಮ್ಟೆ ಗಣ್ಯ ವ್ಯಕ್ತಿ. ಇಲ್ಲಿ ಪ್ರಾಣತ್ಯಾಗ ಮಾಡಲು ಮನಸ್ಸು ಮಾಡಿರುವವನಿಗೆ ದಿನಕ್ಕೆ ನೂರು ಕಾರಣಗಳು ದೊರೆಯುತ್ತವೆ. ಜಾತಿಯ ವಿಷಬೀಜ ಬಿತ್ತುವವರು, ಕೋಟ್ಯಂತರ ಸಂಪತ್ತಿದ್ದರೂ ನಮ್ಮ ಅರಣ್ಯಗಳನ್ನು ನಾಶ ಮಾಡಿ ತಮ್ಮ ಸಂಪತ್ತು ಹೆಚ್ಚಿಸಿಕೊಳ್ಳುವವರು, ಸಾರ್ವಜನಿಕ ಹಣವನ್ನು ತಮ್ಮ ಹಣವೆಂದು ಪರಿಗಣಿಸಿ ಮುಕ್ಕುವವರು, ಯಾವುದೇ ಸದುದ್ದೇಶವಿಲ್ಲದೆ ಸರ್ಕಾರಿ ನೌಕರಿ, ಮಂತ್ರಿಗಳ ಸ್ಥಾನ ಆಕ್ರಮಿಸಿಕೊಂಡು ಕೂತವರು, ರಾಷ್ಟ್ರಪ್ರೇಮದ ಮಾತಾಡುತ್ತಲೇ ಜಾತಿಯ ಹೆಸರಲ್ಲಿ ವಿಷ ಬಿತ್ತುವವರು, ಬ್ಲಾಕ್‌ಮಾರ್ಕೆಟ್ ಮೂಲಕ ಜನಕ್ಕೆ ವಿಷ ಉಣ್ಣಿಸುವವರು...

ಘೋಷಣೆ, ಶಪಥ, ಕೂಗಾಟಗಳು ಇಲ್ಲಿಯ ಪ್ರಕೃತಿಯನ್ನಾಗಲಿ, ಮುಗ್ಧ ಜನತೆಯನ್ನಾಗಲಿ ಕಾಪಾಡುವುದಿಲ್ಲ. ಭಾರತಕ್ಕೆ ನೀರು ಮತ್ತು ವಿದ್ಯುತ್ ಬೇಕೆನ್ನುವುದು ಕಠೋರ ಸತ್ಯ. ಇಲ್ಲಿಯ ಡೀಸೆಲ್, ಪೆಟ್ರೋಲ್, ಕಲ್ಲಿದ್ದಲು ವಿದ್ಯುತ್ ಉತ್ಪಾದಿಸಲು ಆಗುವುದಿಲ್ಲ; ಇಲ್ಲಿ ಹೈಡ್ರೋ ಎಲೆಕ್ಟ್ರಿಕ್ ಸ್ಥಾವರಗಳಾಗದಂತೆ ಆಮ್ಟೆ ತರಹದ ಘೋಷಣೆಯ ಜನ ಹಠ ಹಿಡಿಯುತ್ತಾರೆ. ಈಗಿರುವ ಅರಣ್ಯ ಮತ್ತು ಕೃಷಿ ಜಮೀನು ಉಳಿಯಬೇಕಾದರೆ ಇಲ್ಲಿಯ ಭ್ರಷ್ಟತೆ, ಸ್ವಾರ್ಥದ ಸವಾಲನ್ನು ನಾವು ಮೊದಲು ಎದುರಿಸಬೇಕಾಗಿದೆ. ಹಾಗೆಯೇ ತಣ್ಣಗೆ ಕೂತು ವಿಷಯಗಳನ್ನು ಅಭ್ಯಸಿಸಬೇಕಾಗಿದೆ.

ಇವತ್ತು ಜಪಾನ್, ಸ್ವೀಡನ್, ಇಟಲಿ ಮತ್ತು ಫ್ರಾನ್ಸ್ ತಮ್ಮ ವಿದ್ಯುತ್ ಶಕ್ತಿಯ ಬಹುಪಾಲು ಅಣುಸ್ಥಾವರಗಳಿಂದ ಪಡೆಯುತ್ತಿವೆ. ಅವರಿಗೆ ಬೇರೆ ಮಾರ್ಗವೇ ಇಲ್ಲ. ಹಾಗೆಯೇ ಈ ದೇಶಗಳಲ್ಲಿ ಕೂಡ ಆಮ್ಟೆ ತರಹದವರು ಚೆರ್ನೋಬೈಲ್, 'ತ್ರಿಮೈಲ್ ಐಲೆಂಡ್'ನಲ್ಲಿ ಆದ ಅಣುಸ್ಥಾವರಗಳ ಸೋರುವಿಕೆಯ ದುರಂತ ಕುರಿತು ಮಾತಾಡಿ ಹೊಸ ಅಣುಸ್ಥಾವರ ಹುಟ್ಟಿಕೊಳ್ಳದಂತೆ ನೋಡಿಕೊಳ್ಳುತ್ತಿದ್ದಾರೆ. ಆಮ್ಟೆಗಳ ಹಠ ಈ ದೇಶಗಳಿಗೆ ಅಂಥ ತಲೆನೋವು ತರುವುದಿಲ್ಲ; ಕೈಗಾರಿಕೆ, ಕೃಷಿಯಲ್ಲಿ ಮೊದಲ ಹಂತವನ್ನೇ ಮುಗಿಸದಿರುವ ಭಾರತದಂಥ ಕಡೆ ಗೊಂದಲಗಳು ಶುರುವಾಗುತ್ತವೆ. ಇವರೆಲ್ಲರ ಬೊಬ್ಬೆ ಕೇಳಿದ ಅಂಕಣಕಾರನೊಬ್ಬ ಅಣುಸ್ಥಾವರಗಳ ಬಗ್ಗೆ ಕೆಲವು ಅಂಕಿಅಂಶ ಕೊಟ್ಟಿದ್ದಾನೆ.



ಅನೇಕ ದೇಶಗಳಲ್ಲಿ ಈ ಅಣುಸ್ಥಾವರಗಳು ಕಳೆದ ನಲವತ್ತು ವರ್ಷದಿಂದ ವಿದ್ಯುತ್ ಉತ್ಪಾದಿಸುತ್ತಿವೆ; ಜಗತ್ತಿನಲ್ಲಿರುವ ಒಟ್ಟು ಸುಮಾರು 400 ಅಣುಸ್ಥಾವರಗಳ ಒಟ್ಟು ಉತ್ಪಾದನಾ ವಯಸ್ಸು 5000 ವರ್ಷ. ಅಂದರೆ ಒಂದೊಂದು ಅಣುಸ್ಥಾವರ ನಲವತ್ತು ವರ್ಷಗಳನ್ನು ಅಪಘಾತವಿಲ್ಲದೆ ಕಳೆದ ವರ್ಷಗಳು ಅವು. ಮೇಲಿನ ಎರಡು ದೊಡ್ಡ ಅಪಘಾತಗಳಾಗಿ ಸಾವಿರಾರು ಜನ ಸತ್ತಿದ್ದಾರೆ. ನಾನೂರು ಅಣುಸ್ಥಾವರಗಳಲ್ಲಿ ಬಹುಪಾಲು ಅಪಘಾತರಹಿತವಾಗಿ ಐದು ಸಾವಿರ ವರ್ಷ ಕಳೆದಿವೆ. ಕಳೆದ ಕೇವಲ ಸಾವಿರ ವರ್ಷದಲ್ಲಿ ಮಾನವಕುಲಕ್ಕೆ ಸಾವಿರಾರು ಯುದ್ಧಗಳು, ಭೂಕಂಪ, ಪ್ಲೇಗು, ಕಾಲರಾ, ಮಲೇರಿಯಾ ಮತ್ತು ರಸ್ತೆ ಅಪಘಾತಗಳಲ್ಲೇ ಕೋಟ್ಯಂತರ ಜನ ಸತ್ತಿದ್ದಾರೆ. ಐದು ಸಾವಿರ ವರ್ಷಗಳಲ್ಲಿ ಆದ ಎರಡು ಅಣುಸ್ಥಾವರ ಅಪಘಾತಗಳಿಗೆ ಹೆದರಿ ಈಗ ಅಣುಸ್ಥಾವರಗಳನ್ನು ಸುರಕ್ಷಿತ ಮಾಡಲು ಯತ್ನಿಸಲಾಗುತ್ತಿದೆ. ಆದರೂ ಆಮ್ಟೆಗಳ ಘೋಷಣೆಯ ಎದುರು ವಾದ ಮಾಡುವುದು ಕಷ್ಟವಾಗುತ್ತಿದೆ.

ನೋವು


ತೊಟ್ಟಿಕ್ಕಿದ ನೋವು
ಮಣ್ಣಿನಲ್ಲಿ ಬೆರತು
ಕೆಂಪಾಗಿದೆ.

ನೋವಿನ ನದಿ ಹರಿಸಿ
ಹಿಂಸೆಯ ತೆಪ್ಪದಲ್ಲಿ
ಸ್ವರ್ಗವೇರಲು ಬಯಸಿದ್ದಾರೆ.


ಮನುಷ್ಯನ ಕ್ರೌರ್ಯಕ್ಕೆ
ಭೂಮಿ ಕಂಪಿಸಿದೆ
ಸುನಾಮಿ ಸ್ತಬ್ಧವಾಗಿದೆ.

ನೋವಿನ ನದಿ
ನಕ್ಷತ್ರಗಳು ತೆಪ್ಪವಾಗಿವೆ
ಮಿಂಚುಹುಳು ದಾರಿ ತೋರಿದೆ.

ಮರಣ ಕಣ
ಕಣ್ಣೀರ ಹನಿ
ಈ ಶ್ರದ್ಧಾಂಜಲಿ.



■ ಡಾ. ಸಿ. ರವೀಂದ್ರನಾಥ್



ಶಾಮಣ್ಣನ ಮೂರನೆ ಮಗಳು

ಅದೊಂದು ದಿನ ನಮ್ಮ ಕಲ್ಕುಳಿ ವಿಠಲ ಹೆಗ್ಡೆ ಶಿವಮೊಗ್ಗಕ್ಕೆ ಹೋಗಿದ್ದಾಗ ಕಡಿದಾಳು ಶಾಮಣ್ಣ ಸಿಕ್ಕಿದ್ದಾರೆ. ಅದೂ‍ಇದೂ ಮಾತಾಡಿ ಕೊಂಡು ನಂಜಪ್ಪ ಹಾಸ್ಪಿಟಲ್ ಬಳಿ ಹೋಗುತ್ತಿದ್ದಾಗ ಈ ಶಾಮಣ್ಣ "ಹೆಗ್ಡೇರೆ... ಬನ್ನಿ ಇಲ್ಲೇ ನನ್ ಮಗಳ ಹೋಟ್ಲಲ್ಲಿ ಟೀ ಕುಡಿಯೋಣ" ಅಂತಾ ಒಂದು ಚಿಕ್ಕ ಪೆಟ್ಟಿ ಅಂಗಡಿಯತ್ತ ಕರೆದುಕೊಂಡು ಹೋದರಂತೆ.

ವಿಠಲ ಹೆಗ್ಡೆಗೂ ಟೀ ಬೇಕಿತ್ತಾದರೂ ಶಾಮಣ್ಣ ತಮ್ಮ ಮಗಳ ಟೀ ಅಂಗಡಿ ಅಂದಿದ್ದು ಕೇಳಿ ಕಕ್ಕಾಬಿಕ್ಕಿಯಾಗಿದ್ದಾರೆ. ಯಾಕಂದ್ರೆ ವಿಠಲ್‌ಗೆ ಖಚಿತವಾಗಿ ಗೊತ್ತಿರುವಂತೆ ಶಾಮಣ್ಣನವರಿಗೆ ಇಬ್ಬರೇ ಹೆಣ್ಣುಮಕ್ಕಳು. ಒಬ್ಬಾಕೆ ಉಲೂಪಿ. ಡೆಂಟಿಸ್ಟ್ ಆಗಿ ಈಗ ಹೈದರಾಬಾದ್‌ನಲ್ಲಿ ಪ್ರೊಫೆಸರ್ ಆಗಿದ್ದಾರೆ. ಈಕೆಯ ಪತಿ ಸಹ ಅದೇ ವೃತ್ತಿಯಲ್ಲಿದ್ದಾರೆ. ಇನ್ನೊಬ್ಬಾಕೆ ಬೆಂಗಳೂರಿನಲ್ಲಿ ನೆಮ್ಮದಿಯ ಸಾಂಸಾರಿಕ ಜೀವನ ನಡೆಸಿಕೊಂಡಿದ್ದಾರೆ. ಹೀಗಿರುವಾಗ ಈ ಟೀ ಅಂಗಡಿ ನಡೆಸುವ ಮಗಳು ಯಾರಿರಬಹುದು? ಅಂದುಕೊಂಡೇ ವಿಠಲ್ ಶಾಮಣ್ಣನವರ ಜೊತೆ ಅಲ್ಲಿಗೆ ಹೋದರೆ ಹದಿನೈದು ವರ್ಷ ವಯಸ್ಸಿನ ಬಾಲೆಯೊಬ್ಬಳು ಪೆಟ್ಟಿ ಅಂಗಡಿಯಲ್ಲಿ ಕುಳಿತ್ತಿದ್ದಾಳೆ. ಅವಳೋ ಶಾಮಣ್ಣನನ್ನು ಕಂಡೇಟಿಗೆ ಖುಷ್ ಖುಷಿಯಾಗಿ ಸಡಗರದಿಂದ ಟೀ ಸರ್ವ್ ಮಾಡಿದ್ದಾಳೆ. ಆಮೇಲೆ ಶುರುವಾಗಿದ್ದೇ ಕುಡಿದ ಎರಡು ಟೀ ಬಾಬ್ತು ದುಡ್ಡು ಕೊಡುವ ಜಗಳ. ಶಾಮಣ್ಣ 'ದುಡ್ಡು ತಗೋ' ಅನ್ನೋದು, ಆ ಹುಡುಗಿ 'ಬೇಡ' ಅನ್ನೋದು ಸ್ವಲ್ಪ ಹೊತ್ತು ನಡೆದು ಕೊನೆಗೆ ಶಾಮಣ್ಣನೇ ಸೋತರೂಂತ ಕಾಣುತ್ತದೆ.

ತಂದೆಗೆ ಟೀ ಕುಡಿಸಿ ಯಾವ ಮಗಳು ತಾನೇ ದುಡ್ಡು ತಗೊಂತಾಳೆ ಹೇಳಿ ಈ ಪ್ರಪಂಚದಲ್ಲಿ?

ಆಮೇಲೆ ವಾಪಸ್ ಬರ್‍ತಾ 'ಇದೇನ್ ಶಾಮಣ್ಣ ಮಗಳ ವಿಚಾರ' ಅಂದಾಗ ಶಾಮಣ್ಣನವರು ವಿಠಲ್ ಹೆಗ್ಡೆಗೆ ನಿರೂಪಿಸಿದ ವಿಚಾರ ಇಂತಿದೆ.

ಬಿಡಿ ಚಿತ್ರಗಳು

• ಈಶ

ಒಂದು ದಿನ ಶಾಮಣ್ಣ ನಂಜಪ್ಪ ಆಸ್ಪತ್ರೆಲ್ಲಿದ್ದ ಪರಿಚಿತರನ್ನು ನೋಡಿಕೊಂಡು ಹೊರಟು ಬರುತ್ತಿರುವಾಗ ದಾರಿಯಲ್ಲಿ ಒಬ್ಬ ಹುಡುಗಿ ಏಕಾಏಕಿ ಬಂದವಳೆ ಶಾಮಣ್ಣನವರಿಗೆ ಜೋತು ಬಿದ್ದು ಭೋರೆಂದು ಅಳಲು ಶುರು ಮಾಡಿದ್ದಾಳೆ.

ಅಕ್ಕಪಕ್ಕದ ಜನ ಇದೇನೆಂದು ನೋಡುತ್ತಿದ್ದಾರೆ. ಶಾಮಣ್ಣನವರಿಗೂ ಏನೆಂದು ಅರ್ಥವಾಗದೆ "ಯಾಕಮ್ಮ ಅಳ್ತಾ ಇದ್ದೀಯಾ ಏನಾಯ್ತು?" ಅಂದರೂ ಸೈತ ಅವಳ ದುಃಖ ನಿಲ್ಲಲಿಲ್ಲ, ಶಾಮಣ್ಣನವರನ್ನೂ ಬಿಡಲಿಲ್ಲ, ಅಳುತ್ತಲೇ 'ಅಬ್ಬಾ-ಅಬ್ಬಾ' (ಅಪ್ಪಾ, ಅಪ್ಪಾ) ಅಂತಾ ಅವಳು ಕನವರಿಸುತ್ತಿರುವಂತೆ ಶಾಮಣ್ಣನವರಿಗೆ ಕೇಳಿಸಿದೆ. ಕೊನೆಗೆ ಏನಂತ ವಿಚಾರಿಸಿದರೆ...

ಹದಿನೈದು ದಿನದ ಹಿಂದಷ್ಟೇ ಆ ಬಾಲೆಯ ತಂದೆ ತೀರಿಕೊಂಡಿದ್ದಾನೆ. ನಂಜಪ್ಪ ಆಸ್ಪತ್ರೆಯ ಪಕ್ಕದಲ್ಲೇ ಆತನದೊಂದು ಟೀ ಶಾಪ್ ಇತ್ತಂತೆ. ತನ್ನ ಪಾಲಿಗೆ ಇನ್ನು ಮುಂದೆ ತನ್ನ 'ಅಬ್ಬಾ ಜಾನ್' ಇಲ್ಲ ಎಂಬುದನ್ನು ಆ ಪುಟ್ಟ ಎಳೆ ಮನಸ್ಸಿಗೆ ಅರಗಿಸಿಕೊಳ್ಳಲಾಗಿಲ್ಲ, ಆದರೂ ಟೀ ಶಾಪ್‌ಅನ್ನು ತಾನೇ ನಡೆಸಲು ಶುರುಮಾಡಿದ ಆ ಹುಡುಗಿಗೆ ಆವತ್ತು ಆಸ್ಪತ್ರೆಯಿಂದ ಹೊರಬಂದ ಶಾಮಣ್ಣ ಕಂಡಿದ್ದಾರೆ.

ಹೋಲಿಕೆಯಲ್ಲಿ ನಮ್ಮ ಶಾಮಣ್ಣನವರು ಆ ಬಾಲೆಯ ಅಪ್ಪನೂ ಹೆಚ್ಚುಕಡಿಮೆ ಒಂದೇ ತರ ಇದ್ದಾರೆಂತ ಅವಳಿಗನ್ನಿಸಿತೇನೋ, ಕೈಲಿದ್ದ ಪಾತ್ರೆ ಲೋಟ ಬಿಸುಟು ಓಡಿ ಬಂದು ಶಾಮಣ್ಣನವರಿಗೆ ಜೋತು ಬಿದ್ದು 'ಅಬ್ಬಾ' ಅಂತಾ ಅಳಲು ಶುರು ಮಾಡಿದಳಂತೆ.

ಪ್ರೀತಿಪಾತ್ರರ ಸಾವಿನ ನೋವಿಗೆಷ್ಟು ಮುಖ! ಅದೆಂತಾ ಭರಿಸಲಾಗದ ದುಃಖ!!

ಲೋಕಸಂಸಾರಿ ಶಾಮಣ್ಣನವರಿಗೆ ಆ ಪುಟ್ಟ ಟೀ ಶಾಪಿನ ಬಾಲೆ ಈಗ ಮೂರನೇ ಮಗಳಾಗಿ ಹೋಗಿದ್ದಾಳೆ. ಶಾಮಣ್ಣ ಶಿವಮೊಗ್ಗಕ್ಕೆ ಹೋದಾಗಲೆಲ್ಲಾ ಅವಳಲ್ಲಿಗೆ ಹೋಗಿ ಒಂದು ಟೀ ಕುಡಿದು ಮಾತಾಡಿ ಬರಲೇ ಬೇಕು. ಟೀ ಕುಡಿದಾದ ಮೇಲೆ ಇವರು 'ದುಡ್ಡು ತಗೋ' ಅನ್ನೋದು ಆ ಬಾಲೆ 'ಬೇಡ' ಅನ್ನೋದು ಈಗಲೂ ನಡೆಯುತ್ತಿರುತ್ತದೆ.

ಆಕೆ ಮುಸ್ಲಿಂ ಬಾಲೆ ಅನ್ನೋದು ಇಷ್ಟರಲ್ಲಿ ನಿಮಗೂ ಗೊತ್ತಾಗಿರಬಹುದು ಅಲ್ಲವಾ?

'ನೀವೊಂಥರಾ ಅಮೃತಮಹಲ್'

ಮೊನ್ನೆ ಗುರುವಾರ ರಾತ್ರಿ ಹತ್ತಕ್ಕೆ ಲಂಕೇಶ್ ಬಳಗದ ಗೆಳೆಯ ಅಜ್ಜಂಪುರ ವೆಂಕಟೇಶ್ ಕಚೇರಿಗೆ ಬಂದಿಳಿದ. ಇದೊಂಥರಾ ಅನಿಯಮಿತ ಭೇಟಿ. ವಾರ, ದಿನಾಂಕ ಬದಲಾಗುತ್ತದೆಯೇ ವಿನಃ ಟೈಂ ಮಾತ್ರ ಯಾವಾಗಲೂ ಇದೇನೇ. ವೆಂಕಟೇಶ್ ಆಫೀಸ್‌ಗೆ ಬಂದಾಗಲೆಲ್ಲಾ ಒಂದರ್ಧ ಗಂಟೆ ಅದೂ‍ಇದೂ ಮಾತನಾಡಿದ ಮೇಲೆ ಆತ ತನ್ನ ಕಾರಲ್ಲಿ ಅಜ್ಜಂಪುರಕ್ಕೆ ಹೊರಟರೆ ನಾವೆಲ್ಲಾ ಮನೆ ಕಡೆಗೆ.



ಅಜ್ಜಂಪುರ ವೆಂಕಟೇಶ್

ಅವತ್ತು ಪುಸ್ತಕವೊಂದರ ಕೆಲಸದಲ್ಲಿ ಮುಳುಗಿಹೋಗಿದ್ದ ನಮ್ಮ ನಾಲ್ಕಾರು ಜನರ ಟೀಮ್‌ಗೆ ಉಸಿರಾಡಲೂ ಬಿಡುಬಿರದಷ್ಟು ಕೆಲಸ. ಆದರೇನು, ವೆಂಕಟೇಶ್ ಬಂದನಲ್ಲ ಅಂತಾ ಚಣಕಾಲ ಕೆಲಸ ಬಿಟ್ಟು ಮಾತಿಗೆ ಕುಳಿತಾಗ 'ಸುಸ್ತಿನ ವಿಚಾರ' ಬಂತು. ಕಳೆದ ವಾರ ತಾನೇ ನಾನು 'ದಿನಕ್ಕೆ ಹದಿನಾಲ್ಕು ಗಂಟೆ ದುಡಿಯದಿದ್ದರೆ ..' ಅಂತಾ ಒಂದೆರಡು ವಿಚಾರ ಬರೆದಿದ್ದೆನಲ್ಲ, ಅದನ್ನೇ ಮಾತನಾಡುತ್ತಾ 'ನಿಮಗೆ ಸುಸ್ತಾಗಲ್ವಾ?' ಅಂದ ವೆಂಕಟೇಶ್.

'ಆಗಲ್ಲ, ಮತ್ತೆ ಆಗಕೂಡದು' ಅಂದರು ನಮ್ಮ ಕ್ಯಾಪ್ಟನ್ ಗೌರಿ. ಅದೂ ಸರೀನೇ ಬಿಡಿ. ಸುಸ್ತಾಯಿತು ಅಂತಾ ಕೂತರೆ ಅನ್ನ ಹುಟ್ಟಬೇಕಲ್ಲ!

ಒಂದು ಕೆಲಸ ಹಿಡಿದಾಗ ನಮ್ಮ ಟೀಮಿನ ವೇಗ, ಟೈಂ ಸೆನ್ಸು ದೃಢತೆಗಳನ್ನು ಕಂಡಿರುವ ವೆಂಕಟೇಶನೇನೂ ಕಡಿಮೆಯಲ್ಲ. ಈಗ್ಗೆ ಇಪ್ಪತ್ತೈದು ವರ್ಷದ ಹಿಂದೆ ಬೆಂಗಳೂರಿನ ಲಡಾಸು ಪ್ರೆಸ್‌ನಲ್ಲಿ ಮೊಳೆ ಜೋಡಿಸಿಕೊಂಡಿದ್ದವನು ಆಮೇಲೆ ಅದೇ ಪ್ರಿಂಟಿಂಗ್ ಮಿಶಿನ್ ಖರೀದಿಸಿ ಸ್ವಂತ ಸ್ಥಳ ಅಜ್ಜಂಪುರಕ್ಕೆ ಹೋಗಿ ಈಗ ತನ್ನದೇ ಪ್ರಿಂಟಿಂಗ್ ಸಾಮ್ರಾಜ್ಯ ಬೆಳೆಸಿದ್ದಾನೆ. ಹದಿಮೂರು ಜನಕ್ಕೆ ಸಂಬಳ ಕೊಡುತ್ತಾನೆ. ಓಡಾಡಲು ಕಾರಿಟ್ಟುಕೊಂಡಿದ್ದಾನೆ. ಆದರೆ ಕೆಲಸ ಅಂತಾ ಬಂದಾಗ ಕೆಲಸಗಾರರ ಜೊತೆ ತಾನೂ ಕೆಲಸಗಾರನಂತೆ ಅಖಾಡಕ್ಕಿಳಿದು ಬಿಡುತ್ತಾನೆ.

'ಸುಸ್ತು' ಅಂತಾ ಮಧ್ಯದಲ್ಲೆಲ್ಲೋ ಕೂತುಬಿಟ್ಟಿದ್ದರೆ ವೆಂಕಟೇಶ್ ಈ ಮಟ್ಟಕ್ಕೆ ತಲುಪುವುದು ಸಾಧ್ಯವಿತ್ತಾ ಹೇಳಿ? ನಾವಾದರೂ Survive ಆಗುವ ಚಾನ್ಸಿದೆಯಾ?

ಇದನ್ನೆಲ್ಲಾ ಮಾತನಾಡುತ್ತಿದಾಗಲೇ 'ನೀವೆಲ್ಲಾ ಒಂಥರಾ ಅಮೃತಮಹಲ್ ಇದ್ದಂಗೆ ಬಿಡಿ' ಅಂದ ವೆಂಕಟೇಶ್.

ಕಷ್ಟ ಸಹಿಷ್ಣುತೆಗೆ ಹೆಸರಾದ ಈ ರಾಸುಗಳ ಅಮೃತಮಹಲ್ ಕಾವಲ್ ರಾಮಚಂದ್ರಾಪುರದ ನುಂಗಣ್ಣ ರಾಘವೇಶ್ವರನ ಬಾಯಿಗೆ ಬೀಳುವುದು ಇತ್ತೀಚೆಗೆ ತಪ್ಪಿಹೋಯಿತಲ್ಲ, ಅದಕ್ಕೆ ಜನದನಿ ಎಂಬ ಸ್ಥಳೀಯ ಜನರ ಸಂಘಟನೆಯ ಪ್ರತಿರೋಧವೂ ಕಾರಣವಾಗಿತ್ತು,

ವೆಂಕಟೇಶ್, ರವೀಶ್ ಮತ್ತಿತರ ಗೆಳೆಯರ ಗುಂಪಿನ ಪ್ರಯತ್ನ ಅದಾಗಿತ್ತು, ಬಹುಶಃ ವೆಂಕಟೇಶ್ ಅದೇ 'ಅಮೃತಮಹಲ್' ಗುಂಗಿನಲ್ಲಿದ್ದಾಂತ ಕಾಣುತ್ತೆ,

ಏನೇ ಆಗಲಿ, ಯಾರಾದರೂ ಆಗಾಗ್ಗೆ ಬಂದು ಈ ತರಹ ಹೊಗಳುತ್ತಿದ್ದರೆ ಒಂಥರಾ ಚೆನ್ನಾಗಿರುತ್ತೆ. ■

ಎಡೆಯೂರು ಮಠಕ್ಕೆ ಸಲ್ಲಬೇಕು

ಈ ವಾರ ಪತ್ರಿಕೆಯಲ್ಲಿ ಎಡೆಯೂರು ಮಠದ ವಿವಾದ ಕುರಿತು ಓದಿದೆ. ವರದಿ ವಸ್ತುನಿಷ್ಠವಾಗಿದೆ. ಯಡಿಯೂರಪ್ಪ ಕೇವಲ ಹುಟ್ಟಿನಿಂದ ಲಿಂಗಾಯತನಷ್ಟೆ (ಹಾಗಂತ ಜಾತಿಗಳ ಅಸ್ತಿತ್ವವನ್ನು ನಾನು ಒಪ್ಪಲಾರೆ) ಆದರೆ ಆತ ಪುಟ್ಟ ಪೂರಾ ಆರ್.ಎಸ್.ಎಸ್.ನ. ಗುಲಾಮನಂತೆ ವರ್ತಿಸುತ್ತಾನೆ. ಇದು ಏನೇ ಇರಲಿ ತೋಂಟದಾರ್ಯ ಸ್ವಾಮೀಜಿಯವರ ಹಕ್ಕು ಪ್ರತಿಪಾದನೆ ನ್ಯಾಯಸಮ್ಮತವಾಗಿದೆ. ಬಸವಣ್ಣನವರ ಮೌಲ್ಯಗಳಿಗೆ ನಿಜ ವಾರಸುದಾರರಾದ ಶ್ರೀಗಳ ವಶಕ್ಕೆ ಎಡೆಯೂರು ಮಠ ಸಲ್ಲಬೇಕು. ತೋಂಟದಾರ್ಯ ಶ್ರೀಗಳು ಪ್ರಗತಿಪರ ವಿಚಾರ ಧಾರೆಯ, ವೈಚಾರಿಕ ಮನೋಭಾವದ ಬಲು ಅಪರೂಪದ ಸ್ವಾಮಿಗಳು. ಹೀಗಾಗಿ ಯಡಿಯೂರಪ್ಪಗೆ ಬಸವಣ್ಣನ ಬಗ್ಗೆ ಗೌರವವಿದ್ದುದೇ ಆದರೆ ಎಡೆಯೂರು ಮಠವನ್ನು ಗದುಗಿನ ಶ್ರೀಗಳಿಗೆ ಹಸ್ತಾಂತರಿಸಲಿ.

-ಹುರುಕಡ್ಲಿ ಶಿವಕುಮಾರ, ಬಳ್ಳಾರಿ

ಹೊಗಳಿಕೆ ತೆಗಳಿಕೆ

ಈ ವಾರದ ಸಂಚಿಕೆಯಲ್ಲಿ ಡಕಾಯಿತ ಸ್ವಾಮಿ ಮೆಂಟಲ್ ಯಡ್ಡಿ ಎಂಬ ಪತ್ರಿಕೆ ಮುಖಪುಟದ ವರದಿ ಓದಿದೆ. ಗೋಕರ್ಣ ಮಹಾಬಲೇಶ್ವರ ದೇವಸ್ಥಾನವನ್ನು ನುಂಗಿ ಹಾಕಿದ ರಾಘವೇಶ್ವರ ಭಾರತಿಸ್ವಾಮಿ ಎಂಬ ಕಳ್ಳ ಸನ್ಯಾಸಿ ಮತ್ತು ಹಾಲಿ ಚೆಡ್ಡಿ ಸರ್ಕಾರದ ಯಡ್ಡಿಯ ಕುತಂತ್ರಗಳು ಪತ್ರಿಕೆ ತನ್ನ ನಿಷ್ಠ ವರದಿ ಮೂಲಕ ಬಯಲಿಗೆಳೆದಿದೆ. ಗೋಕರ್ಣ ದೇವಸ್ಥಾನ ಸ್ವಾಹ ಮಾಡಿರುವ ರಾಮಚಂದ್ರಾಪುರ ಮಠದ ರಾಘವೇಶ್ವರ ಭಾರತಿಸ್ವಾಮಿಯ ಅಸಲಿ ಮುಖವಾಡ ಕಳಚಿ ಹಾಕಿದ ಲಂಕೇಶ್‌ಗೆ ವಂದನೆಗಳು...

-ರಮಜಾನ ಕೆ. ಕೊರ್ತಿ, ಬಾದಾಮಿ

ಒರಿಸ್ಸಾದಲ್ಲಿ ಕೋಮುವಾದಿಗಳು ತಮ್ಮ ಅಟ್ಟಹಾಸ ಮೆರೆದಿದ್ದಾರೆ. ಇಲ್ಲಿ ಕೋಮುವಾದಿಗಳು ಮತಾಂತರವನ್ನೇ ಒಂದು ದೊಡ್ಡ ಅಪರಾಧವೆಂಬಂತೆ ಬಿಂಬಿಸತೊಡಗಿದ್ದಾರೆ. ಒಂದು ಧರ್ಮದಿಂದ ಇನ್ನೊಂದು ಧರ್ಮಕ್ಕೆ ಮತಾಂತರಗೊಳ್ಳಲು ಸಂವಿಧಾನ ಅನುವು ಮಾಡಿಕೊಟ್ಟಿದೆ. ಆದರೆ ಮನುವಾದ ಇದನ್ನು ಒಪ್ಪುವುದಿಲ್ಲ, ಈ ಹಿಂದೂವಾದಿಗಳು ಮನುವಾದವನ್ನೇ ತಮ್ಮ ಅಜೆಂಡಾ ಮಾಡಿಕೊಂಡಿರುವಾಗ ಇವರಿಗೆ ಮತಾಂತರವೆಂಬುದು ಅಪರಾಧವೆಂಬಂತೆ ಕಾಣಿಸುತ್ತಿದೆ.

ಒಂದು ಕಡೆ ರೈತರಿಗೆ ಸೇರಿದ್ದ ಭೂಮಿಯನ್ನು ಖಾಸಗಿ ಕಂಪೆನಿಗಳಾದ ಟಿಸ್ಕೋ, ಜಿಂದಾಲ್, ಎಸ್.ಆರ್. ಮುಂತಾದ ಪ್ರತಿಷ್ಠಿತ ಕಂಪೆನಿಗಳಿಗೆ ರತ್ನಗಂಬಳಿ ಹಾಸಿ ಮಾರಾಟ ಮಾಡಲಾಗುತ್ತಿದೆ.

ಇನ್ನೊಂದೆಡೆ ಕೋಮುವಾದಿಗಳು ಅಲ್ಪಸಂಖ್ಯಾತರ ಮೇಲೆ ದಾಳಿ ನಡೆಸುತ್ತ ನಿರಂತರ ಕೋಮುದ್ವೇಷ ಹರಡುವಲ್ಲಿ ನಿರತರಾಗಿದ್ದಾರೆ. ಈ ಫ್ಯಾಸಿಸ್ಟರಿಗೆ ಧಿಕ್ಕಾರವಿರಲಿ.

-ದಿ.ಎಲ್. ನಾಗರಾಜ್, ಹರಪನಹಳ್ಳಿ

ಜಿಹಾದ್ ಎಂದರೆ ಪರಿಶ್ರಮ

ಏಪ್ರಿಲ್ 30 ರ ಸಂಚಿಕೆಯಲ್ಲಿ 'ಬೆತ್ತಲೆಗೊಂಡ ಜಮಾಅತೆ ಇಸ್ಲಾಮಿಯ ಮುಖವಾಡಗಳು' ಎಂಬ ತಲೆಬರಹದಲ್ಲಿ ಸಾಹಿತಿ ಸಾರಾ ಅಬೂಬಕರ್‌ರವರು ಬರೆದ ಲೇಖನವನ್ನು ಓದಿದೆ. ಅವರ ಸಾಹಿತ್ಯಿಕ ಸಾಧನೆಗಳು ಮತ್ತು ಈ ಕ್ಷೇತ್ರದಲ್ಲಿ ಅವರಿಗಿರುವ ಅಪಾರ ಅನುಭವಗಳನ್ನು ಗೌರವಿಸಿಕೊಂಡೇ, ಪ್ರಸ್ತುತ ಲೇಖನದಲ್ಲಿ ಅವರು ವ್ಯಕ್ತಪಡಿಸಿದ ಅಭಿಪ್ರಾಯಗಳೊಂದಿಗೆ ನನ್ನ ಭಿನ್ನಾಭಿಪ್ರಾಯಗಳಿವೆ.

ಮುಖ್ಯವಾಗಿ ಜಮಾಅತೆ ಇಸ್ಲಾಮಿಯ ಮೇಲೆ ಪ್ರಸ್ತುತ ಲೇಖನದಲ್ಲಿ ಅವರು ಸಾಕಷ್ಟು ಆರೋಪಗಳನ್ನು ಹೊರಿಸಿದ್ದಾರೆ. ಮುಸ್ಲಿಮರು ಭಯೋತ್ಪಾದಕರಾಗುವುದರ ಹಿಂದಿನ ಮೆದುಳು, ಜಮಾಅತೆ ಇಸ್ಲಾಮಿಯದ್ದು ಎಂದು ನಂಬಿಸಲು (ಎರಡನೇ ಪ್ಯಾರಾ) ಲೇಖಕಿ ಪ್ರಯತ್ನಿಸಿದ್ದಾರೆ. ಆದರೆ ಜಮಾಅತೆ ಇಸ್ಲಾಮಿಯ ಎಷ್ಟು ಮಂದಿ ಕಾರ್ಯಕರ್ತರು ಭಯೋತ್ಪಾದಕರಾಗಿ ಜೈಲಲ್ಲಿದ್ದಾರೆ, ಶಿಕ್ಷೆ ಅನುಭವಿಸಿದ್ದಾರೆ ಅಥವಾ ಕನಿಷ್ಠ ಆರೋಪ ಹೊತ್ತುಕೊಂಡಿದ್ದಾರೆ ಎಂದವರು ಹೇಳಿಲ್ಲ, ಅದು ಸಾಧ್ಯವೂ ಇಲ್ಲ, ಯಾಕೆಂದರೆ ಅಂಥ ಒಂದೇ ಒಂದು ಉದಾಹರಣೆ ಈ ದೇಶದಲ್ಲಿಲ್ಲ.

ಜಮಾಅತೆ ಇಸ್ಲಾಮಿಯು ಹುಕೂಮತೆ ಇಲಾಹಿ ಅರ್ಥಾತ್ ದೇವನ ಆಡಳಿತವನ್ನು ಭೂಮಿಯಲ್ಲಿ ಸ್ಥಾಪಿಸುವ ಉದ್ದೇಶ ಹೊಂದಿದೆ... ಅದು ಜಾತ್ಯತೀತತೆಯನ್ನು ಸಹಿಸುವುದಿಲ್ಲ... ಭಾರತದಲ್ಲಿ ಮತ ರಾಜಕಾರಣಕ್ಕೆ ಮೌದೂದಿ ಕಲ್ಪನೆ ತಾತ್ವಿಕ -ಅಡಿಪಾಯ ಹಾಕಿತು... ಮೌದೂದಿಯವರಿಗೆ ರಾಜಕೀಯ ಆಸಕ್ತಿಯೂ ಇತ್ತು.... ಇಸ್ಲಾಮಿನ ಆಡಳಿತ ಎಂಬುದು ದೇವರ ನಿಯಮಗಳನ್ನು ಕಂಠಪಾಠ ಮಾಡಿದ ಪುರೋಹಿತಶಾಹಿಗಳ ಸ್ವೇಚ್ಛಾಧಿಪತ್ಯದ ಆಡಳಿತ ಆಗುತ್ತದೆ.... ಎಂದೆಲ್ಲಾ ಅವರು ಹೇಳಿಕೊಂಡಿದ್ದಾರೆ.

ಇದರಲ್ಲಿ ಎಲ್ಲವೂ ಸುಳ್ಳಲ್ಲ,

ಜಮಾಅತೆ ಇಸ್ಲಾಮಿ ಎಂದಲ್ಲ, ಮುಸ್ಲಿಮರೆಲ್ಲರೂ ಏಕದೇವನನ್ನು ನಂಬುತ್ತಾರೆ. ಈ ಜಗತ್ತನ್ನೂ ಅದರಲ್ಲಿರುವ ಮನುಷ್ಯರ ಸಹಿತ ಸರ್ವವನ್ನೂ ಆತನೇ ಸೃಷ್ಟಿಸಿದ್ದಾನೆ ಎಂಬುದು ಮುಸ್ಲಿಮರ ಕಡ್ಡಾಯ ನಂಬುಗೆ. ಇಷ್ಟೇ ಅಲ್ಲ, ಈ ಮನುಷ್ಯರು ಹೇಗೆ ಬದುಕಬೇಕು ಎಂಬುದನ್ನು ಪ್ರವಾದಿಗಳ ಮೂಲಕ ಆತ ಆಗಾಗ ತಿಳಿಸಿಕೊಟ್ಟಿದ್ದಾನೆ. ಅದರ ಕೊನೆಯ ಆವೃತ್ತಿಯೇ ಪವಿತ್ರ ಕುರ್‌ಆನ್. ಇದು ಮುಹಮ್ಮದ್ ಪೈಗಂಬರರಿಗೆ ಅವತೀರ್ಣವಾದದ್ದು. ಪೈಗಂಬರರು ಈ ಕುರ್‌ಆನ್‌ನ ಆಧಾರದಲ್ಲಿ ಒಂದು ಯಶಸ್ವಿ ಮತ್ತು ಸುಖೀ ಆಡಳಿತವನ್ನು ಸ್ಥಾಪಿಸಿ ತೋರಿಸಿದರು. ಜಮಾಅತೆ ಇಸ್ಲಾಮಿ ಆ ಆಡಳಿತವನ್ನು ಪ್ರತಿಪಾದಿಸುತ್ತಾ ಇದೆ. ಅದಲ್ಲದೇ, ದೇವರ ರಾಜ್ಯ ಎಂಬುದು ಜಮಾಅತೆ ಇಸ್ಲಾಮಿ ಸ್ಪೆಷಲ್ಲಾಗಿ ಸಂಶೋಧಿಸಿದ ಸಿದ್ಧಾಂತ ಏನಲ್ಲ,

ಇನ್ನು, ಜಮಾಅತೆ ಇಸ್ಲಾಮಿ ಬಹುಸಂಸ್ಕೃತಿಯನ್ನು ಒಪ್ಪುವುದಿಲ್ಲ ಎಂಬುದು ಅಪ್ಪಟ ಸುಳ್ಳು. ಒಂದು ವೇಳೆ ಈ ಆರೋಪ ನಿಜವೆಂದಾದರೆ, ಜಮಾಅತೆ ಪ್ರವಾದಿತೆ ಚರ್ಯೆಯಿಂದ ಹೊರಹೋಗಿದೆ ಎನ್ನಬೇಕಾಗುತ್ತದೆ. ಮುಖ್ಯವಾಗಿ, ಮದೀನದಲ್ಲಿ ಪೈಗಂಬರರು ಮೊಟ್ಟ ಮೊದಲು ದೇವರ ರಾಜ್ಯ ಸ್ಥಾಪಿಸಿದಾಗ, ಅಲ್ಲಿ ಯಹೂದಿಯರು ಬಹುಸಂಖ್ಯಾತರಾಗಿದ್ದರು. ಅವರ ಧರ್ಮದ ಕಾರಣಕ್ಕಾಗಿ, ಪೈಗಂಬರರು ಅವರನ್ನು ಓಡಿಸಿದ್ದಾಗಲಿ, ತಲೆ ಹಾರಿಸಿದ್ದಾಗಲಿ ನಡೆದಿರಲಿಲ್ಲ,

ಇಸ್ಲಾಮ್ ಎಂಬುದು ಜೀವನ ಸಿದ್ಧಾಂತವಾಗಿದೆ. ಅದರಲ್ಲಿ ರಾಜಕೀಯವೂ ಇದೆ. ಆರ್ಥಿಕತೆ, ಸಾಮಾಜಿಕತೆಯೂ ಇದೆ. ಒಂದು ವೇಳೆ ಅದರಲ್ಲಿ ರಾಜಕೀಯ ಇಲ್ಲದೇ ಇರುತ್ತಿದ್ದರೆ ಪೈಗಂಬರರು ಮತ್ತು ಆ ಬಳಿಕದ ಖಲೀಫರುಗಳು ಆಡಳಿತ ನಡೆಸಲು ಸಾಧ್ಯವಿತ್ತೇ? ಅವರೆಲ್ಲಾ ಮುಂಡಾಸು ಸುತ್ತಿ, ಜಪಮಾಲೆ ಹಿಡಿದು ಮಸೀದಿಯಲ್ಲಿ ಕೂರಬೇಕಾಗಿತ್ತಲ್ಲವೇ? ಆದ್ದರಿಂದ ಇಸ್ಲಾಮಿನಲ್ಲಿ ರಾಜಕೀಯವನ್ನು ಪರಿಚಯಿಸಿದ್ದು ಮೌದೂದಿ ಅಲ್ಲ, ಪೈಗಂಬರರು. ಈ ನೆಲೆಯಲ್ಲಿ ಮೌದೂದಿಯವರಿಗೆ ರಾಜಕೀಯದಲ್ಲಿ ಆಸಕ್ತಿ ಇದ್ದದ್ದು ಸಹಜವಾಗಿತ್ತು, ಅದನ್ನು ಅಪರಾಧವಾಗಿ ಕಾಣಬೇಕಿಲ್ಲ,


ಇನ್ನು ಶಿಯಾ-ಸುನ್ನಿ ಮತ್ತು ಮುಸ್ಲಿಮರ ನಡುವಿನ ಇತರ ಹಲವಾರು ಸಂಘಟನೆಗಳ ಹೆಸರನ್ನು ಎತ್ತಿ ಹೇಳಿ, ಜಮಾಅತೆ ಇಸ್ಲಾಮಿ ಯಾವ ಶರೀಅತಿನ ಆಧಾರದಲ್ಲಿ ಅಧಿಕಾರ ಚಲಾಯಿಸಲು ಬಯಸಿದೆ ಎಂದು ಲೇಖಕಿ ಪ್ರಶ್ನಿಸಿದ್ದಾರೆ. ನಿಜವಾಗಿ ಶರೀಅತ್ ಎಂಬುದು ಸುನ್ನಿಗಳಿಗೊಂದು, ಶಿಯಾಗಳಿಗೊಂದು, ಜಮಾಅತ್‌ಗೊಂದು ಹೀಗೆ ಬೇರೆ ಬೇರೆ ಅಲ್ಲ, ಶರೀಅತಿನ ಮೂಲ ಭೂತ ವಿಚಾರಗಳಿಗೆ ಸಂಬಂಧಿಸಿ ಯಾರ ಮಧ್ಯೆ ಜಗಳವೂ ನಡೆದಿಲ್ಲ, ಇವತ್ತು ಭಿನ್ನಾಭಿಪ್ರಾಯಗಳಿದ್ದರೆ ಅದು ಶರೀಅತ್‌ನ ಕೆಲವು ವಿಷಯಗಳಿಗೆ ಸಂಬಂಧಿಸಿ, ವಿದ್ವಾಂಸರು ನೀಡಿದ ವಿವರಣೆಗಳ ಬಗ್ಗೆ ಮಾತ್ರ. ಇವತ್ತು ಶಿಯಾ-ಸುನ್ನಿಗಳ ನಡುವೆ ಜಗಳ ನಡೆಯುತ್ತಿದ್ದರೆ ಅದಕ್ಕೆ ಶರೀಅತ್ ಕಾರಣ ಅಲ್ಲ, ಆಯಾ ಪ್ರದೇಶದ ವೈಯಕ್ತಿಕ ಮತ್ತು ಗೋತ್ರ ವರ್ಗದ ಪ್ರತಿಷ್ಠೆಗಳು, ಅಜ್ಞಾನಗಳು ಅದಕ್ಕೆ ಕಾರಣ. ಇಷ್ಟಕ್ಕೂ ಭಾರತೀಯ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಭಿನ್ನಾಭಿಪ್ರಾಯಗಳಿಲ್ಲವೇ? ಅಷ್ಟಕ್ಕೇ ಅದನ್ನು ಸಂಪೂರ್ಣ ಮನುಷ್ಯ ವಿರೋಧಿ ಎಂದು ಲೇಖಕಿ ಹೇಳುತ್ತಾರಾ?

ಜಿಹಾದ್ ಎಂಬುದು ಮನುಷ್ಯ ವಿರೋಧಿ ಪದ ಅಲ್ಲವೇ ಅಲ್ಲ, ಅದು ಮನುಷ್ಯ ಸ್ನೇಹಿ. ಅದರ ಅರ್ಥ ಪರಿಶ್ರಮ ಎಂದು. ಜಮಾಅತೆ ಇಸ್ಲಾಮಿ ಸರ್ವರಲ್ಲೂ ಕೂಡ ಈ ಜಿಹಾದಿ ಮೆಂಟಾಲಿಟಿಯನ್ನು ಬೆಳೆಸಲು ಬಯಸುತ್ತಾ ಇದೆಯಲ್ಲದೇ, ಸ್ವಯಂ ಜಿಹಾದ್ ನಡೆಸುತ್ತಾ ಇದೆ. ಈ ದೇಶದ ಸಕಲ ಕೆಡಕುಗಳ ನಿರ್ಮೂಲನೆಗಾಗಿ ಅದು ಬಹಿರಂಗವಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ, ಜಿಹಾದ್ ನಡೆಸುತ್ತಾ ಇದೆ.

-ಎ.ಕೆ. ಕುಕ್ಕಿಲ, ಮಂಗಳೂರು



ಬರ್ತ್ ಡೇ ಸ್ಪೆಷಲ್ಸ್!





ಮೊನ್ನೆ ಸೆಪ್ಟೆಂಬರ್ 18ರಂದು ರಿಯಲ್‌ಸ್ಟಾರ್ ಉಪೇಂದ್ರ ಮತ್ತು ಸಾಹಸಸಿಂಹ ವಿಷ್ಣುವರ್ಧನ್ ತಮ್ಮ ಹುಟ್ಟುಹಬ್ಬವನ್ನು ಸರಳವಾಗಿ ಆಚರಿಸಿಕೊಂಡರೂ ತಮ್ಮ ಅಭಿಮಾನಿಗಳಿಗೆ ಎರಡು ಸಿಹಿ ಸುದ್ದಿ ನೀಡಿದ್ದಾರೆ.


ಎಲ್ಲವೂ ನಿರೀಕ್ಷಿಸಿದಂತೆ ಆಗಿದ್ದಲ್ಲಿ ಉಪ್ಪಿಯ ಹುಟ್ಟುಹಬ್ಬದ ದಿನದಂದು ಅವರು ನಟಿಸಿರುವ 'ಬುದ್ಧಿವಂತ' ಚಿತ್ರ ಬಿಡುಗಡೆಯಾಗಬೇಕಿತ್ತು. ಆದರೆ ಚಿತ್ರದ ನಿರ್ಮಾಪಕ ಅತಿ ಬುದ್ಧಿವಂತಿಕೆ ತೋರಿಸಿ ಅದನ್ನು ತಡವಾಗಿ ಸೆನ್ಸಾರ್ ಅವರಿಗೆ ನೀಡಿದ್ದರಿಂದ ಆ ಚಿತ್ರ ಒಂದು ವಾರ ತಡವಾಗಿ ತೆರೆ ಕಾಣುತ್ತಿದೆ.

ಆದರೂ ತಮ್ಮ ಹುಟ್ಟುಹಬ್ಬದ ನೆಪದಲ್ಲಿ ಉಪ್ಪಿ ಹೊಸ ಚಿತ್ರವೊಂದನ್ನು ಪ್ರಾರಂಭಿಸಲು ಸಿದ್ಧತೆ ನಡೆಸುತ್ತಿದ್ದಾರೆ. ಅವರೇ ಈ ಚಿತ್ರವನ್ನು ನಿರ್ಮಿಸಿ, ನಟಿಸುತ್ತಿದ್ದರೂ ತಾವೇ ಅದನ್ನು ನಿರ್ದೇಶಿಸುತ್ತಿದ್ದಾರೋ ಇಲ್ಲವೋ ಎಂದು ಗೊತ್ತಾಗಿಲ್ಲ. ಬಹುಶಃ ಅವರೇ ನಿರ್ದೇಶಿಸಲಿದ್ದಾರೆ ಎಂಬ ಮಾತು ಕೇಳಿಬಂದಿದೆ.


ಇದೇ ರೀತಿ ಸಾಹಸಸಿಂಹ ವಿಷ್ಣುವರ್ಧನ್ ಕೂಡ ತಮ್ಮ ಹುಟ್ಟುಹಬ್ಬದಂದು ತನ್ನ ನಟನೆಯ 199ರ ಚಿತ್ರಕ್ಕೆ ಸಹಿ ಹಾಕಿದ್ದಾರೆ. ಈ ಚಿತ್ರವನ್ನು ಅವರ ಪಟ್ಟದ ಶಿಷ್ಯ ಕೆ.ಮಂಜು ನಿರ್ಮಿಸುತ್ತಿದ್ದಾರೆ. ಚಿತ್ರದ ಹೆಸರು 'ನಾನೇ ಬೇರೆ, ನನ್ನ ಸ್ಟೈಲೇ ಬೇರೆ'. ಅಂದಹಾಗೆ ಕಿರುತೆರೆಯಲ್ಲಿ ದೊಡ್ಡ ಹೆಸರು ಮಾಡಿರುವ ಸಿಹಿಕಹಿ ಚಂದ್ರು ಈ ಚಿತ್ರವನ್ನು ನಿರ್ದೇಶಿಸಲಿದ್ದಾರೆ.

ಚಂದ್ರು ಈ ಹಿಂದೆ ರಮೇಶ್ ಅವರನ್ನು ಹಾಕಿ ಒಂದು ಚಿತ್ರ ನಿರ್ದೇಶಿಸಲು ಹೊರಟಿದ್ದರು. ಆದರೆ ಕಾರಣಾಂತರದಿಂದ ಆ ಚಿತ್ರ ಅರ್ಧಕ್ಕೆ ನಿಂತುಹೋಯಿತು. ಹೀಗಾಗಿ ಈ ಚಿತ್ರ ಚಂದ್ರು ಅವರ ಚೊಚ್ಚಲ ನಿರ್ದೇಶನದ ಚಿತ್ರವಾಗಿ ಹೊರಹೊಮ್ಮಲಿದೆ. ವಿಷ್ಣು ಅಭಿನಯದ 199ನೆಯ ಚಿತ್ರದ ವಿಶೇಷವೆಂದರೆ ಈ ಚಿತ್ರಮುದ್ದಕ್ಕೂ ಅವರು ನಕ್ಕುನಗಿಸುವ ಹಾಸ್ಯ ಪಾತ್ರವೊಂದರಲ್ಲಿ ಕಾಣಿಸಿಕೊಳ್ಳಲಿದ್ದಾರೆ.

ಅದೇದಿನ ತನ್ನ ಹುಟ್ಟುಹಬ್ಬವನ್ನು ಆಚರಿಸಿಕೊಂಡ ಮತ್ತೊಬ್ಬ ತಾರೆ ಶೃತಿ. ಆದರೆ ಅವರ ಕಡೆಯಿಂದ ಇಂತಹ ಸಿಹಿ ಸುದ್ದಿಯಾಗಲಿ, ಹೊಸ ಚಿತ್ರದ ಘೋಷಣೆಯಾಗಲಿ ಕೇಳಿಬಂದಿಲ್ಲ. ■




'ಸಿಕ್ಸರ್ ಸಿದ್ದು' ಕನ್ನಡಕ್ಕೆ....



ಸಿಕ್ಸರ್ ಸಿದ್ದು ಎಂದೇ ವಿಶ್ವ ವಿಖ್ಯಾತಿ ಪಡೆದಿರುವ ಭಾರತೀಯ ಕ್ರಿಕೆಟ್ ಆಟಗಾರರ ನವಜೋತ್ ಸಿಂಗ್ ಸಿದ್ದು ಕನ್ನಡ ಚಿತ್ರರಂಗದಲ್ಲಿ ಅತಿಥಿ ನಟರಾಗಿ ನಟಿಸುತ್ತಿರುವ ಸುದ್ದಿ ತೇಲಿ ಬಂದಿದೆ. ಸಿಕ್ಸರ್ ಸಿದ್ದು ಸದ್ಯಕ್ಕೆ ಬಿಜೆಪಿಯ ಲೋಕಸಭಾ ಸದಸ್ಯರಾಗಿ ಪಾರ್ಲಿಮೆಂಟಿನಲ್ಲಿ ಗದ್ದಲ ಮಾಡುವುದರಲ್ಲೇ ಬ್ಯೂಸಿಯಾಗಿದ್ದಾರೆ. ಪಾರ್ಲಿಮೆಂಟ್ ಇಲ್ಲದಾಗ ಕ್ರಿಕೆಟ್ ಕಾಮೆಂಟೇಟರ್ ಆಗಿ ಟಿವಿಗಳಲ್ಲಿ ವಟಗುಡುತ್ತಿರುತ್ತಾರೆ. ಕೆಲವೊಮ್ಮೆ ಟಿವಿ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಜೋಕ್ಸ್ ಹೊಡೆಯುತ್ತಿರುತ್ತಾರೆ. ಅಂದರೆ ಎಲ್ಲೆಲ್ಲೂ ಇವರು ಆರ್ಭಟಿಸುತ್ತಲೇ ಇರುತ್ತಾರೆ.

ಇಂತಹ ರಂಗರಂಗಿನ ವ್ಯಕ್ತಿತ್ವವುಳ್ಳ ಸಿದ್ದುವನ್ನು ಕನ್ನಡ ಚಿತ್ರರಂಗಕ್ಕೆ ಕರೆತಂದಿರುವವರು ನಿರ್ದೇಶಕ ಹೇಮಂತ್ ಹೆಗ್ಡೆ. ಇವರ ನಿರ್ದೇಶನದ 'ಹೌಸ್‌ಫುಲ್' ಚಿತ್ರದಲ್ಲಿ ಸಿದ್ದು ಕ್ರಿಕೆಟ್ ಆಟಗಾರನಾಗಿ ನಟಿಸುತ್ತಿದ್ದಾರೆ. ಕೇವಲ ಒಂದೇ ದಿನ ಚಿತ್ರೀಕರಣದಲ್ಲಿ ಭಾಗವಹಿಸಿದ್ದರೂ ಕೂಡಾ ಈ 'ಮಾತನಾಡುವ ಗೊಂಬೆ' ಜೊತೆ ಮಾತನಾಡಲು ಪತ್ರಕರ್ತರು ಉತ್ಸುಕರಾಗಿದ್ದಾರೆ. ಯಾಕೆಂದರೆ ಸಿದ್ದು ಜೊತೆ ಗಂಟೆಗಟ್ಟಲೆ ಹರಟೆ ಹೊಡೆಯುವಷ್ಟು ವಿಷಯಗಳು ಇದ್ದೇ ಇರುತ್ತೆ.

'ಶಿವಮಣಿ'ಯಿಂದ ಪುನರ್ಜನ್ಮ?



ಯುವ ನಾಯಕ-ನಾಯಕಿಯರಾದ ಮುರುಳಿ ಮತ್ತು ಶರ್ಮಿಳಾ ಮಾಂಡ್ರೆ ನಟಿಸಿರುವ 'ಶಿವಮಣಿ' ಚಿತ್ರ ಬಿಡುಗಡೆಗೆ ತಯಾರಾಗಿದೆ. ಈ ಇಬ್ಬರೂ ತಮ್ಮ ಪಾಲಿಗೆ ಈ ಚಿತ್ರ ಪುನರ್ಜನ್ಮ ನೀಡಬಹುದು ಎಂಬ ನಂಬಿಕೆಯಲ್ಲಿದ್ದಾರೆ. ಮುರುಳಿಯಂತೂ ಮೊದಲ ಚಿತ್ರದ ಜಯಭೇರಿ ನಂತರ ಸೋಲಿನ ಸರಪಳಿಯಲ್ಲಿ ಸಿಲುಕಿದ್ದಾರೆ. ಶರ್ಮಿಳಾ ಪಾಲಿಗೆ ಆಕೆಯೇ ನಿರ್ಮಿಸಿದ 'ಸಜನಿ' ಚಿತ್ರದ ನಂತರ 'ಫುಲ್ ಲೆನ್ತ್' ನಾಯಕಿ ಪಾತ್ರ ಸಿಕ್ಕಿದ್ದು ಇದೇ ಮೊದಲ ಬಾರಿಗೆ. ಅಮರ್‌ನಾಥ್ ಈ ಚಿತ್ರದ ನಿರ್ದೇಶಕರು.



ಶರ್ಮಿಳಾ

ಈ ಚಿತ್ರವನ್ನು ಜಯನಗರದಲ್ಲಿರುವ ಪೈ ರೆಸ್ಟೋರೆಂಟ್ ಮಾಲೀಕರಾದ ಜಗನ್ನಾಥ ಪೈ ಮತ್ತು ಅವರ ಮಗ ಅಜಯ್ ಪೈ ನಿರ್ಮಿಸಿದ್ದಾರೆ. ರಾಜ್ಯಾದ್ಯಂತ ಹಲವಾರು ಹೋಟೆಲ್‌ಗಳನ್ನು ಹೊಂದಿರುವ ಇವರು ಈ ಚಿತ್ರ ಗೆದ್ದರೆ ಇನ್ನಷ್ಟು ಚಿತ್ರಗಳನ್ನು ನಿರ್ಮಿಸುವ ಯೋಜನೆ ಹಾಕಿಕೊಂಡಿದ್ದಾರೆ. ಹೀಗಾಗಿ 'ಶಿವಮಣಿ' ಸೋಲುಗೆಲುವಿನ ಮೇಲೆ ನಾಯಕ-ನಾಯಕಿ, ನಿರ್ಮಾಪಕ-ನಿರ್ದೇಶಕ ಎಲ್ಲರ ಭವಿಷ್ಯ ನಿಂತಿದೆ.



ರೀ ಎಂಟ್ರಿ ರಾಧಿಕಾ?




ಕಳೆದೊಂದು ವರ್ಷದಿಂದ ಚಿತ್ರರಂಗದಿಂದ ಮಂಗಮಾಯವಾಗಿದ್ದ ರಾಧಿಕಾ ಮತ್ತೆ ಬರ್ತಾಳಾ? ಗಾಂಧಿನಗರದ ಗಲ್ಲಿಗಲ್ಲಿಗಳಲ್ಲಿ ಇದೇ ಪ್ರಶ್ನೆ ಗುನುಗುನಿಸುತ್ತಿದೆ.

ರಾಧಿಕಾ ಕಾಣೆಯಾಗುವ ಮುನ್ನ ಓಂ ಪ್ರಕಾಶ್ ನಿರ್ದೇಶನದ 'ಈಶ್ವರ' ಎಂಬ ಚಿತ್ರದಲ್ಲಿ ಕಡೇ ಬಾರಿಗೆ ನಟಿಸಿ ಹೋಗಿದ್ದಳು. ಜೊತೆಗೆ ಆ ಚಿತ್ರವನ್ನು ಮೂರು ಕೋಟಿ ಕೊಟ್ಟು ತನ್ನ ಅಣ್ಣನ ಹೆಸರಿಗೆ ತಾನೇ ಖರೀದಿಸಿಯೂ ಇದ್ದಳು. ಇಷ್ಟು ದೊಡ್ಡ ಮೊತ್ತ ನೀಡಿ ಕೊಂಡುಕೊಂಡರೂ ಆ ಚಿತ್ರವನ್ನು ಬಿಡುಗಡೆ ಮಾಡದೆ ಇದ್ದಕ್ಕಿದ್ದಹಾಗೆ ಇಂಡಸ್ಟ್ರಿಯಿಂದ ಗಾಯಬ್ ಆಗಿದ್ದಳು.

ಈಗ ಪತ್ರಿಕೆಗಳಲ್ಲಿ ರಾಧಿಕಾಳ ಫೋಟೋ ಸಮೇತ 'ಈಶ್ವರ' ಚಿತ್ರದ ದೊಡ್ಡ ದೊಡ್ಡ ಜಾಹೀರಾತುಗಳು ಪ್ರಕಟವಾಗುತ್ತಿವೆ. ಆದರೆ ಈ ಜಾಹೀರಾತುಗಳಲ್ಲಿ ನಿರ್ದೇಶಕ ಓಂಪ್ರಕಾಶ್ ಹೆಸರು ಮಾತ್ರ ಯಾವ ಮೂಲೆಯಲ್ಲೂ ಕಾಣಸಿಗುತ್ತಿಲ್ಲ.

ಒಟ್ಟಾರೆ ಇದನ್ನೆಲ್ಲಾ ನೋಡಿದರೆ ರಾಧಿಕಾ ಗಾಂಧಿನಗರಕ್ಕೆ ರೀ ಎಂಟ್ರಿ ಕೊಡುವ ಸೂಚನೆಯಂತೂ ಸ್ಪಷ್ಟವಾಗುತ್ತಿದೆ.

ಸಂಕಟ ಇನ್ ವೆಂಕಟ



'ರಾಮ-ಶಾಮ-ಭಾಮಾ' ಖ್ಯಾತಿಯ ನಿರ್ದೇಶಕ ರಮೇಶ ಅರವಿಂದ್ ಮತ್ತೊಮ್ಮೆ ಕ್ಯಾಮರಾ ಹಿಂದೆ ನಿಂತು ಚಿತ್ರ ನಿರ್ದೇಶಿಸಲು ಹೊರಟಿದ್ದಾರೆ. 'ರಾಶಾಭಾ' ಚಿತ್ರದ ನಂತರ ತನಗೆ ಅಂಟಿಕೊಂಡ ಕಾಮಿಡಿ ಚಿತ್ರ ನಿರ್ದೇಶಕ ಎಂಬ ಹಣೆಪಟ್ಟಿಯನ್ನು ತೊಡೆದುಹಾಕಲು ಅವರು 'ಆ್ಯಕ್ಸಿಡೆಂಟ್' ಎಂಬ ಸಸ್ಪೆನ್ಸ್ ಚಿತ್ರ ನಿರ್ದೇಶಿಸಿದ್ದರು. ಆದರೆ ಆ ಚಿತ್ರ ತುಂಬಾ ಸಸ್ಪೆನ್ಸ್ ಆಗಿಯೇ ಚಿತ್ರಮಂದಿರಗಳಿಂದ ನಾಪತ್ತೆಯಾಗಿತ್ತು. ಈ ಮಧ್ಯೆ ಅವರು ನಿರ್ದೇಶಿಸಬೇಕಿದ್ದ 'ಕುಚೇಲನ್' ಚಿತ್ರದ ಕನ್ನಡ ಅವತರಣಿಕೆಗೆ ಕಲ್ಲು ಬಿತ್ತು. ಅದಕ್ಕೆ ಕಾರಣ ರಜನಿಕಾಂತ್ ನಟನೆಯ 'ಕುಚೇಲನ್' ಬಾಕ್ಸ್ ಆಫೀಸಿನಲ್ಲಿ ಮಕಾಡೆ ಬಿದ್ದದ್ದು. ಈ ಎಲ್ಲ ಕಾರಣಗಳಿಂದ ರಮೇಶ್ ಈಗ ಮತ್ತೆ ಕಾಮಿಡಿ ಚಿತ್ರಕ್ಕೆ ಅಂಟಿಕೊಂಡಿದ್ದಾರೆ.

ಈ ಚಿತ್ರಕ್ಕೆ ಸದ್ಯಕ್ಕೆ 'ಸಂಕಟ ಇನ್ ವೆಂಕಟ' ಎಂದು ಹೆಸರಿಟ್ಟಿದ್ದಾರೆ. ಇಬ್ಬರು ಅಪ್ಪಟ ಕನ್ನಡದ ನಾಯಕಿಯ ತಲಾಶ್‌ನಲ್ಲಿದ್ದಾರೆ. ಎಂದಿನಂತೆ ಅವರೇ ಈ ಚಿತ್ರದ ನಾಯಕನಟ.

ಮಸ್ತ್ ಮಜಾ ಮಾಡುತ್ತಿರುವ
ಉಪೇಂದ್ರ

'ಮಸ್ತ್ ಮಜಾ ಮಾಡಿ' ಎಂಬ ಚಿತ್ರ ತನ್ನ ಹೆಸರಿಗೆ ತಕ್ಕಂತೆ ದಿನದಿಂದ ದಿನಕ್ಕೆ ರಂಗೇರುತ್ತಿದೆ.

ಈ ಚಿತ್ರದ ಹಾಡೊಂದರಲ್ಲಿ ರಿಯಲ್ ಸ್ಟಾರ್ ಉಪೇಂದ್ರ ಅತಿಥಿ ನಟರಾಗಿ ಕಾಣಿಸಿಕೊಳ್ಳುತ್ತಿರುವುದು ಚಿತ್ರಕ್ಕೆ ಇನ್ನಷ್ಟು ಮಜಾ ತಂದುಕೊಟ್ಟಿದೆ. ವಿಶೇಷವೆಂದರೆ ಈ ಹಾಡಲ್ಲಿ ಹಿಂದಿಯ 'ಓಂ ಶಾಂತಿ ಓಂ' ಚಿತ್ರದ ಮಾದರಿಯಲ್ಲಿ ಹತ್ತು ಜನ ನಾಯಕಿಯರು ಉಪ್ಪಿಯೊಂದಿಗೆ ಕುಣಿದು ಕುಪ್ಪಳಿಸಲಿದ್ದಾರೆ ಎಂದು ನಿರ್ಮಾಪಕ ಸೌಂದರ್ಯ ಜಗದೀಶ್ ತಿಳಿಸಿದ್ದಾರೆ.

ಉಪೇಂದ್ರ ಚಿತ್ರವೊಂದರಲ್ಲಿ ಅತಿಥಿ ನಟನಾಗಿ ಕಾಣಿಸಿಕೊಳ್ಳುತ್ತಿರುವುದು ಇದೇ ಮೊದಲು. ಈ ಹಿಂದೆ ಉಪ್ಪಿಯನ್ನು ಅತಿಥಿ ನಟನಾಗಿ ಬಳಸಿಕೊಳ್ಳಲು ಅನೇಕ ನಿರ್ಮಾಪಕರು ಭಗೀರಥ ಪ್ರಯತ್ನ ನಡೆಸಿದ್ದರೂ ಉಪ್ಪಿಯನ್ನು ತಮ್ಮ ಬುಟ್ಟಿಗೆ ಹಾಕಿಕೊಳ್ಳುವಲ್ಲಿ ಯಶಸ್ವಿಯಾಗಿರಲಿಲ್ಲ.

ಈ ಚಿತ್ರದಲ್ಲಿ ಈಗಾಗಲೇ ಐದು ಜನ ನಾಯಕರು ನಟಿಸುತ್ತಿರುವುದು ಎಲ್ಲರ ಗಮನ ಸೆಳೆದಿದೆ. ಈ ಐದು ನಾಯಕರಲ್ಲಿ ದಿಗಂತ್, ಸುದೀಪ್, ವಿಜಯರಾಘವೇಂದ್ರ, ಕೋಮಲ್, ನಾಗಕಿರಣ್ ಪ್ರಮುಖರು. ಈ ಪಂಚಪಾಂಡವರೊಂದಿಗೆ ಜೆನ್ನಿಫರ್ ಕೊತ್ವಾಲ್ ನಾಯಕಿಯಾಗಿ ಕಾಣಿಸಿಕೊಂಡಿದ್ದಾಳೆ. ಚಿತ್ರದ ವಿಶೇಷ ಹಾಡಿನ ಹೊರತಾಗಿ ಇನ್ನೆಲ್ಲಾ ದೃಶ್ಯಗಳನ್ನು ಈಗಾಗಲೇ ಚಿತ್ರೀಕರಿಸಲಾಗಿದೆ ಎನ್ನುತ್ತಾರೆ ನಿರ್ದೇಶಕ ಅನಂತು.

ಈ ವಿಶೇಷ ಹಾಡಿಗಾಗಿ ನಿರ್ಮಾಪಕ ಸೌಂದರ್ಯ ಜಗದೀಶ್ ಸುಮಾರು ಐವತ್ತು ಲಕ್ಷ ರೂ. ವೆಚ್ಚದಲ್ಲಿ ಎರಡು ಅದ್ದೂರಿ ಸೆಟ್‌ಗಳನ್ನು ಹಾಕಿಸಿದ್ದಾರೆ. ಈ ಎರಡು ಸೆಟ್‌ಗಳಲ್ಲಿ ಏಕಕಾಲದಲ್ಲಿ ಅಕ್ಟೋಬರ್ ಮೊದಲವಾರದಲ್ಲಿ ಈ ಹಾಡನ್ನು ಚಿತ್ರೀಕರಿಸಲಾಗುವುದು.

ಸೌಂದರ್ಯ ಜಗದೀಶ್ ಇದೇ ಮೊದಲ ಬಾರಿಗೆ ಚಿತ್ರ ನಿರ್ಮಾಣಕ್ಕೆ ಕೈ ಹಾಕಿದ್ದಾರೆ. ಈ ಹಿಂದೆ ಅವರು ಗಾಂಧಿನಗರದ ಕೋಟಿ ವೀರ ನಿರ್ಮಾಪಕ ರಾಮು ಸೇರಿದಂತೆ ಅನೇಕರ ಚಿತ್ರಗಳಿಗೆ ಫೈನಾನ್ಸ್ ಮಾಡುತ್ತಿದ್ದರು. ಕಳೆದ ಹಲವಾರು ವರ್ಷಗಳಲ್ಲಿ ಅದೆಷ್ಟೋ ಚಿತ್ರಗಳು ಜಗದೀಶ್ ಕೃಪೆಯಿಂದಲೇ ಸಂಪೂರ್ಣಗೊಂಡಿವೆ.

ಆದರೆ ಫೈನಾನ್ಸ್ ಮಾಡಿ ಕಹಿ ಅನುಭವ ಪಡೆದಿರುವ ಜಗದೀಶ್ ಈಗ ಸ್ವತಃ ತಾವೇ ಅಖಾಡಕ್ಕೆ ಇಳಿದಿದ್ದಾರೆ. ಅಷ್ಟೇ ಅಲ್ಲ, ತನ್ನ ಮೊದಲ ಚಿತ್ರವನ್ನು ಅತ್ಯಂತ ವಿಭಿನ್ನ ಮತ್ತು ಅದ್ದೂರಿಯಾಗಿ ನಿರ್ಮಿಸಲು ಹೊರಟಿದ್ದಾರೆ.

ಕನ್ನಡ ಚಿತ್ರರಂಗದಲ್ಲೂ ಬಾಲಿವುಡ್ ರೀತಿಯಲ್ಲಿ ನಿರ್ಮಾಪಕರ, ನಿರ್ದೇಶಕರ ಕನಸುಗಳಿಗೆ ಬೇರೆ ನಟನಟಿಯರು ಅತಿಥಿನಟರಾಗಿ ಸ್ಪಂದಿಸುತ್ತಿರುವುದು ಸಂತೋಷದ ವಿಷಯ. ಅಂದಹಾಗೆ ಈ ಚಿತ್ರದ ಹಾಡಲ್ಲಿ ಕುಣಿದು ಕುಪ್ಪಳಿಸುವ ಹತ್ತು ಸುಂದರಿಯರ ಹೆಸರನ್ನು ಮಾತ್ರ ಇನ್ನೂ ಗುಟ್ಟಾಗಿಯೇ ಇಟ್ಟಿದ್ದಾರೆ.

■ ಶೆಣೈ


'ಗಂಡುಗಲಿ'ಯಾದ ಮಂಜು

ಕೆಲವು ವರ್ಷಗಳ ಹಿಂದೆ ನಿರ್ಮಾಪಕ ಕೆ.ಮಂಜು ಅವರ ಅಭಿಮಾನಿಗಳು ಅವರಿಗೆ 'ಗಂಡುಗಲಿ' ಎಂಬ ಬಿರುದನ್ನು ನೀಡಿದ್ದರು. ಅದಕ್ಕೆ ತಕ್ಕಂತೆ ಮಂಜು ಕೂಡ ಸೋಲುಗಳ ಸರಪಳಿಯ ನಡುವೆಯೂ ಈಗ ಒಂದರ ಹಿಂದೆ ಮತ್ತೊಂದರಂತೆ ಚಿತ್ರಗಳನ್ನು ನಿರ್ಮಿಸುತ್ತಲೇ ಇದ್ದಾರೆ.

ಕಳೆದ ವರ್ಷ ಅವರ ನಿರ್ಮಾಣದ, ನಾಗತಿಹಳ್ಳಿ ಚಂದ್ರಶೇಖರ್ ನಿರ್ದೇಶನದ 'ಮಾತಾಡ್ ಮಾತಾಡ್ ಮಲ್ಲಿಗೆ' ಬಾಕ್ಸಾಫೀಸ್‌ನಲ್ಲಿ ಅಮೋಘವಾಗಿ ಅಡ್ಡಮಲಗಿತ್ತು. ಆಗ ಅವರಿಗೆ ಕನಿಷ್ಠವೆಂದರೂ ಎರಡು ಕೋಟಿ ರೂ. ನಷ್ಟವಾಗಿತ್ತು. ಆ ಸ್ಥಿತಿಯಲ್ಲಿ ಬೇರೆ ಯಾವ ನಿರ್ಮಾಪಕ ಇದ್ದಿದ್ದರೂ ಆತ ನೇಣಿಗೆ ಶರಣಾಗುತ್ತಿದ್ದ.



ಆದರೆ ಮಂಜು 'ಸೋಲೇ ಗೆಲುವಿನ ಮೂಲ' ಎಂಬ ಮಂತ್ರವನ್ನು ನಂಬಿಕೊಂಡಿರುವವರು. ಆದ್ದರಿಂದ ಅದೇ ನಾಗತಿಹಳ್ಳಿ ಚಂದ್ರಶೇಖರ್ ನಿರ್ದೇಶನದಲ್ಲಿ 'ಒಲವೇ ಜೀವನ ಲೆಕ್ಕಾಚಾರ' ಎಂಬ ಹೊಸ ಚಿತ್ರ ಕೈಗೆತ್ತಿಕೊಂಡಿದ್ದಾರೆ. ಅಷ್ಟೇ ಅಲ್ಲದೆ ಇದರೊಂದಿಗೆ ರವಿಚಂದ್ರನ್ ಮತ್ತು ಅವರ ಸಹೋದರ ಬಾಲಾಜಿಯನ್ನು ಹಾಕಿಕೊಂಡು 'ರಾಜಕುಮಾರಿ' ಎಂಬ ಚಿತ್ರವನ್ನು ಒಂದು ವರ್ಷದಿಂದ ನಿರ್ಮಿಸುತ್ತಲೇ ಇದ್ದಾರೆ. ಈ ಮಧ್ಯೆ ಒತ್ತಾಯ ಪೂರ್ವಕವಾಗಿ ಗಣೇಶ್ ಅಭಿನಯದ 'ಅರಮನೆ' ಚಿತ್ರವನ್ನು ಶತದಿನೋತ್ಸವದತ್ತ ನೂಕಿದ್ದಾಗಿದೆ. ಇದಲ್ಲದೆ, 'ದುನಿಯಾ' ಖ್ಯಾತಿಯ ಲೂಸ್ ಮಾದ ಉರ್ಫ್ ಲೋಕೇಶ್‌ನನ್ನು ನಾಯಕನನ್ನಾಗಿ ಹಾಕಿಕೊಂಡು 'ಯೋಗಿ' ಎಂಬ ಚಿತ್ರವನ್ನು ಕೈಗೆತ್ತಿಕೊಂಡಿದ್ದಾರೆ. ಇದೆಲ್ಲದರ ನಡುವೆ ತನ್ನ ಆರಾಧ್ಯದೈವ ವಿಷ್ಣುವರ್ಧನ್‌ರವರನ್ನು ಹಾಕಿಕೊಂಡು ಹೊಸ ಚಿತ್ರ 'ನಾನೆ ಬೇರೆ ನನ್ನ ಸ್ಟೈಲೇ ಬೇರೆ' ಘೋಷಣೆ ಮಾಡಿದ್ದಾರೆ.



ಇದನ್ನೆಲ್ಲ ನೋಡಿದರೆ ಮಾಜಿ ಕೊಬ್ಬರಿ ಮಂಜು ಅಲಿಯಾಸ್ ಕೆ.ಮಂಜು ಈಗ ನಿಜವಾಗಲೂ 'ಗಂಡುಗಲಿ' ಮಂಜು ಆಗಿ ರೂಪಾಂತರಗೊಂಡಿದ್ದಾರೆ ಎಂದು ಅನಿಸುತ್ತದಲ್ಲವೇ?



'ಗುಂಡರಗೋವಿ' ಸತ್ಯ



ದುನಿಯಾ ವಿಜಿಗೆ ಮತ್ತೊಬ್ಬ ಪ್ರತಿಸ್ಪರ್ಧಿ ಹುಟ್ಟಿಕೊಳ್ಳಲಿದ್ದಾನೆಯೇ? ವಿಜಿಯಂತೆಯೇ ಕಠ್ರಗೆ ಬಂಡೆಕಲ್ಲಿನ ಹಾಗಿರುವ ಸತ್ಯ ಎಂಬ ನೂತನ ನಟನನ್ನು ನೋಡಿ ಕೆಲವರು ಈ ಪ್ರಶ್ನೆ ಕೇಳುತ್ತಿದ್ದಾರೆ.

ಮೊದಮೊದಲು ರಂಗಭೂಮಿಯಲ್ಲಿ ಹೆಸರು ಮಾಡಿ ಆನಂತರ 'ಆ ದಿನಗಳು' ಚಿತ್ರದಲ್ಲಿ ಸಣ್ಣ ಪಾತ್ರ ಮಾಡುವ ಮೂಲಕ ಚಿತ್ರರಂಗಕ್ಕೆ ಎಂಟ್ರಿ ಕೊಟ್ಟ ಸತ್ಯ ಈಗ ಹಲವಾರು ಅವಕಾಶಗಳನ್ನು ತನ್ನದಾಗಿಸಿಕೊಂಡಿದ್ದಾನೆ. ಸದ್ಯಕ್ಕೆ ಎಂ.ಎಸ್ ಸತ್ಯು ಅವರ 'ಇಜ್ಜೋಡು' ಎಂಬ ಕಲಾತ್ಮಕ ಸಿನಿಮಾವನ್ನೂ ಮುಗಿಸಿರುವ ಸತ್ಯ ಸಿನಿಮಾಗಳಿಗೆ ಗನ್‌ಗಳನ್ನು ಸಪ್ಲೈ ಮಾಡುವ ಅನಿಲ್ ಮತ್ತು ತಾರೇಶ್ ರಾಜ್ ನಿರ್ದೇಶಿಸುತ್ತಿರುವ 'ಗುಂಡರಗೋವಿ' ಚಿತ್ರದಲ್ಲಿ ಪೂರ್ಣ ಪ್ರಮಾಣದ ನಾಯಕನಾಗಿಯೂ ಬಡ್ತಿ ಪಡೆದಿದ್ದಾನೆ.

ಇದೆಲ್ಲದರ ಜೊತೆ ಬಾಲಿವುಡ್‌ಗೂ ಲಗ್ಗೆಯಿಟ್ಟಿರುವ ಸತ್ಯ ಹಿಂದಿಯಲ್ಲಿ ವಿಕ್ರಂ ಕಪಾಡಿಯಾ ನಿರ್ದೇಶನದ ಕಾಮಿಡಿ ಚಿತ್ರವೊಂದರಲ್ಲಿ ಪರೇಶ್ ರಾವಲ್‌ರೊಂದಿಗೆ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಜೊತೆಗೆ ರಂಜಿತ್ ಪಾಳ್ಯ ನಿರ್ದೇಶನದ ಚಿತ್ರದಲ್ಲೂ ನಟಿಸುತ್ತಿರುವುದು ಮತ್ತೊಂದು ಅಚ್ಚರಿ.

ತಂದೆ-ಮಗನ ಸವಾಲ್



ಇಷ್ಟು ದಿನ ಸಹೋದರರ ಮಧ್ಯೆ ಪೈಪೋಟಿ ನಡೆಯುತ್ತಿತ್ತು. ಈಗ ಅಪ್ಪ ಮಗನ ನಡುವೆಯೇ ಪೈಪೋಟಿ ಏರ್ಪಟ್ಟಿದೆ.

ಇದರ ಅರ್ಥ ಇಷ್ಟೇ: ಮೊಟ್ಟಮೊದಲ ಬಾರಿಗೆ ದೇವರಾಜ್ ಮತ್ತು ಪ್ರಜ್ವಲ್ ದೇವರಾಜ್ ಇಬ್ಬರೂ ಒಂದೇ ಸಿನಿಮಾದಲ್ಲಿ ಅಭಿನಯಿಸುತ್ತಿದ್ದಾರೆ. ಚಿತ್ರದಲ್ಲಿ ಅಪ್ಪ ಮಗ ಇಬ್ಬರಿಗೂ ಸಮನಾದ ಪಾತ್ರಗಳಿವೆಯಂತೆ. ಅಂದಹಾಗೆ, ಇನ್ನೇನು ಆರಂಭವಾಗಲಿರುವ ಈ ಚಿತ್ರದ ಮೂಲಕ ಇದುವರೆಗೂ ಉಪೇಂದ್ರ ಪಾಲ್ಗೊಂಡ ಎಲ್ಲಾ ಚಿತ್ರಗಳಿಗೂ ಸಹಾಯಕ ನಿರ್ದೇಶಕನಾಗಿ ದುಡಿದಿದ್ದ ಗೋಪಾಲ ಕೃಷ್ಣ ಸ್ವತಂತ್ರ ನಿರ್ದೇಶಕರಾಗುತ್ತಿದ್ದಾರೆ.



ಹೌಸ್‌ಫುಲ್ ದಾಖಲೆ



ಕನ್ನಡ ಚಿತ್ರರಂಗವನ್ನು ಪ್ರವೇಶಿಸುತ್ತಿರುವ ಕೆಲ ಯುವ ನಿರ್ದೇಶಕರು ಇತ್ತೀಚೆಗೆ ಚಿತ್ರ ವಿಚಿತ್ರವಾಗಿ ವರ್ತಿಸುತ್ತಾ ಇವರು ನಿರ್ದೇಶಕರೋ ಅಥವಾ ತಲೆಕೆಟ್ಟವರೋ ಎಂಬ ಗೊಂದಲ ಹುಟ್ಟಿಸುತ್ತಿದ್ದಾರೆ. ಇದಕ್ಕೆ ಲೇಟೆಸ್ಟ್ ಉದಾಹರಣೆ 'ಹೌಸ್‌ಫುಲ್' ಎಂಬ ಚಿತ್ರವನ್ನು ನಿರ್ದೇಶಿಸುತ್ತಿರುವ ಹೇಮಂತ್ ಹೆಗ್ಡೆ, ಇತ್ತೀಚೆಗೆ ಈತ ತನ್ನ ಚಿತ್ರದಲ್ಲಿ 60 ಅಡಿ ಎತ್ತರದ ಚಾರ್ಲಿ ಚಾಪ್ಲಿನ್ ಮೂರ್ತಿಯನ್ನು ಸ್ಥಾಪಿಸಲಿದ್ದೇನೆ ಎಂದೂ, ಆ ಮೂಲಕ ಗಿನ್ನಿಸ್ ದಾಖಲೆ ಸೇರುತ್ತೇವೆಂದೂ ಹೇಳಿದ್ದಾನೆ.

ಚಾರ್ಲಿಚಾಪ್ಲಿನ್ ಅವರ 52 ಅಡಿ ಎತ್ತರದ ಮೂರ್ತಿಯೇ ಈತನಕ ವಿಶ್ವದಲ್ಲಿರುವ ಅತ್ಯಂತ ಎತ್ತರವುಳ್ಳದಾಗಿದೆ. ಹೀಗಾಗಿ ತಮ್ಮ ಚಿತ್ರಕ್ಕಾಗಿ ಮೈಸೂರಿನ 'ಕಾವಾ' ಸಂಸ್ಥೆಯ ವಿದ್ಯಾರ್ಥಿಗಳು ನಿರ್ಮಿಸಲಿರುವ 60 ಅಡಿ ಎತ್ತರದ ಚಾಪ್ಲಿನ್ ಮೂರ್ತಿ ಗಿನ್ನಿಸ್ ದಾಖಲೆ ಪುಸ್ತಕದಲ್ಲಿ ನೋಂದಾಯಿಸಲ್ಪಡಲಿದೆ ಎಂಬುದು ಹೆಗ್ಡೆಯ ಅಭಿಪ್ರಾಯ.

ಅಲ್ಲ 'ಹೌಸ್‌ಫುಲ್' ಚಿತ್ರಕ್ಕೂ, ಚಾರ್ಲಿ ಚಾಪ್ಲಿನ್‌ಗೂ ಏನು ಸಂಬಂಧ? ಈ ಚಿತ್ರವನ್ನು ಆತ ನಿರ್ದೇಶಿಸುತ್ತಿರುವುದೇ ಗಿನ್ನಿಸ್ ದಾಖಲೆ ಪ್ರವೇಶಿಸಲೇ? ಹಾಗಿದ್ದರೆ ಚಿತ್ರ ಹೌಸ್‌ಫುಲ್ ಆಗುವುದು ಹೇಗೆ? ಈ ಪ್ರಶ್ನೆಗಳಿಗೆ ಚಿತ್ರದ ನಿರ್ಮಾಪಕನೇ ಉತ್ತರ ಕೊಡಬೇಕು. ಇಲ್ಲವೆಂದರೆ ತನ್ನ ತಲೆ ಬಲಿ ಕೊಡಬೇಕಾಗಬಹುದು...

ನವಗ್ರಹಿಗಳ ನೇತ್ರದಾನ

'ನವಗ್ರಹ' ಚಿತ್ರದ ನಿರ್ಮಾಪಕ, ನಿರ್ದೇಶಕ, ಕಲಾವಿದರು ಮತ್ತು ತಂತ್ರಜ್ಞರೆಲ್ಲ ಮೊನ್ನೆ ತಮ್ಮ ಚಿತ್ರದ ಕ್ಯಾಸೆಟ್ ಬಿಡುಗಡೆ ಮಾಡಿದರು.

ಜಯನಗರದ ರಾಗಿಗುಡ್ಡದಲ್ಲಿರುವ ಅಂಧ ವಿದ್ಯಾರ್ಥಿಗಳ ಶಾಲೆಯ ಮಕ್ಕಳೊಂದಿಗೆ ಬೆರೆತು, ಊಟ ಮಾಡಿ ಸರಳವಾಗಿ ಕ್ಯಾಸೆಟ್ ಬಿಡುಗಡೆ ಮಾಡಿದರು. ಅಷ್ಟೇ ಆಗಿದ್ದರೆ ಅದೊಂದು ಗಿಮಿಕ್ ಅನ್ನಬಹುದಿತ್ತು. ಆದರೆ ಕ್ಯಾಸೆಟ್ ಬಿಡುಗಡೆಯ ನಂತರ ಆ ಸಂಸ್ಥೆಯ ಮಕ್ಕಳ ಸಮ್ಮುಖದಲ್ಲಿ ನಾವೆಲ್ಲರೂ ತಮ್ಮ ಕಣ್ಣುಗಳನ್ನು ದಾನ ಮಾಡುತ್ತೇವೆ ಎಂದು ಬರೆದುಕೊಟ್ಟರು.

ಹೀಗೆ ಕಣ್ಣುದಾನ ಮಾಡುತ್ತೇವೆ ಎಂದವರಲ್ಲಿ ನಾಯಕ ನಟ ದರ್ಶನ್, ಆತನ ಸಹೋದರ ದಿನಕರ್, ಅವರಿಬ್ಬರ ತಾಯಿ ಮೀನಾ ಮತ್ತು ಏಳು ಜನ ನಾಯಕರು ಹಾಗು ಇಬ್ಬರು ನಾಯಕಿಯರು ಸೇರಿದ್ದರು.



ಅತ್ಯಂತ ಸರಳವಾಗಿ, ಯಾವುದೇ ಸದ್ದುಗದ್ದಲವಿಲ್ಲದೇ, ಆಡಂಬರವಿಲ್ಲದೇ ತುಂಬಾ ಅರ್ಥಪೂರ್ಣವಾಗಿ ಕ್ಯಾಸೆಟ್ ಬಿಡುಗಡೆ ಮಾಡಿದ 'ನವಗ್ರಹ' ತಂಡ ಉಳಿದವರಿಗೆ ಮಾದರಿಯಾಗಿದೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore...